ಬುಧವಾರ, ಆಗಸ್ಟ್ 9, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 220 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಕ್ಯಾನ್ಸರ್‌ನ ಅಧ್ಯಯನದಲ್ಲಿ ಬಳಕೆಯಾದ ಜೀವಕೋಶಗಳಿಗೆ 70 ವರ್ಷಗಳ ರೋಚಕ ಇತಿಹಾಸವಿದೆ!

ಆಳ-ಅಗಲ ಸಿನಿಮಾರಂಗಕ್ಕೂ ಕೃತಕಬುದ್ಧಿಮತ್ತೆ ಕಂಟಕ

ಹಠಾತ್ ಹೃದಯಾಘಾತಕ್ಕೆ ತ್ವರಿತ ಚಿಕಿತ್ಸೆ 7

ಕಾಂಗ್ರೆಸ್–ಬಿಜೆಪಿ ವಾಗ್ಯುದ್ಧ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,846	19,570	₹61,180 (ಬೆಂಗಳೂರು)	₹73,200 (ಬೆಂಗಳೂರು)	82.84

ಒಳ ಪುಟಗಳು

ಗಾಂಧಿ ಪುರಸ್ಕಾರ ಗ್ರಾಮಕ್ಕೆ 'ಕೋಮು' ಕಂಟಕ 6

ಪೀಯೂಷ್ ವಿರುದ್ಧ ಹಕ್ಕುಚ್ಯುತಿ 11

ಐಷಾರಾಮಿ ಮನೆ ದುಬಾರಿ 10

ಸರ್ಕಾರಿ ಬಂಗಲೆ ಮರಳಿ ಪಡೆದ ರಾಹುಲ್ 11

'ವಿಧಾನಸೌಧ ಪ್ರವೇಶಕ್ಕೆ ನಿಲ್ಲಬೇಕಿಲ್ಲ ಸರದಿ' 7

ನಿವೃತ್ತರಿಗೆ ಕೂಲಿಂಗ್ ಆಫ್ ಸೂಕ್ತವಲ್ಲ: ರಾಬಿನ್ ಉತ್ತಪ್ಪ 12

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೆಪಿಎಸ್‌ಸಿಗೆ ಹೈಕೋರ್ಟ್ ಆದೇಶ ● ಹಲವರಿಗೆ ಹುದ್ದೆ ಕಳೆದುಕೊಳ್ಳುವ ಆತಂಕ

ಜೆಟಿಒ ಆಯ್ಕೆ ಪಟ್ಟಿ ರೀಡೂ

270	1,900	1,520	1,367	945	399
ರಾಜ್ಯದಲ್ಲಿರುವ ಸರ್ಕಾರಿ ಐಟಿಐಗಳು	ಖಾಲಿ ಇರುವ ಜೆಟಿಒ ಹುದ್ದೆಗಳು	2018ರಲ್ಲಿ ಭರ್ತಿಗೆ ಉದ್ದೇಶಿಸಿದ್ದ ಹುದ್ದೆಗಳು	ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದ ಹುದ್ದೆಗಳು	ಆಯ್ಕೆ ಆದವರು	ನೇಮಕಾತಿ ಆದೇಶ ನೀಡಿರುವುದು

● ರಾಜೇಶ್ ರೈ ಚಟ್ಲ

ಬೆಂಗಳೂರು: ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆ ಅಡಿಯಲ್ಲಿರುವ ಸರ್ಕಾರಿ ಐಟಿಐ ಕಾಲೇಜುಗಳಲ್ಲಿ ಖಾಲಿ ಇರುವ 1,520 ಕಿರಿಯ ತರಬೇತಿ ಅಧಿಕಾರಿಗಳ (ಜೆಟಿಒ) ಹುದ್ದೆಗೆ 2019ರಲ್ಲಿ ಪ್ರಕಟಿಸಿದ್ದ ಆಯ್ಕೆ ಪಟ್ಟಿಯನ್ನು ಹೈಕೋರ್ಟ್ ಆದೇಶದನ್ವಯ ಪರಿಷ್ಕರಿಸಲು ಕೆಪಿಎಸ್‌ಸಿ ನಿರ್ಧರಿಸಿದೆ.

ಇದರಿಂದಾಗಿ ಈಗಾಗಲೇ ಪ್ರಕಟಿಸಿದ್ದ ಆಯ್ಕೆ ಪಟ್ಟಿಯನ್ವಯ ನೇಮಕಗೊಂಡು, ಕರ್ತವ್ಯ ನಿರ್ವಹಿಸುತ್ತಿರುವ 399 ಜೆಟಿಒಗಳ ಪೈಕಿ ಕೆಲವರು ಹುದ್ದೆ ಕಳೆದುಕೊಳ್ಳುವ ಪರಿಸ್ಥಿತಿ ಎದುರಾಗಿದೆ. ಕೆಲವರು ಆಯ್ಕೆಯಾಗಿರುವ ವೃತ್ತಿ (ಟ್ರೇಡ್) ಬದಲಾಗುವ ಸಾಧ್ಯತೆಯಿದೆ.

ಐಟಿಐಗಳಲ್ಲಿ 23 ವಿವಿಧ ವೃಂದಗಳಲ್ಲಿ ಖಾಲಿ ಇರುವ ಜೆಟಿಒಗಳ ನೇಮಕಾತಿಗೆ 2018 ಫೆ. 19ರಂದು ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು. ಅರ್ಜಿ ಸಲ್ಲಿಸಿದ್ದ 50 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ 2018 ಡಿ. 27ರಿಂದ 2019 ಜ. 3ರವರೆಗೆ ಪರೀಕ್ಷೆ ನಡೆದಿತ್ತು. ದಾಖಲೆಗಳ ಪರಿಶೀಲನೆ ಬಳಿಕ ವಿವಿಧ ವೃತ್ತಿಗಳಲ್ಲಿ 1,367 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಕೆಲವು ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗೆ ಆಯ್ಕೆಯಾಗಿದ್ದರು. ಒಬ್ಬರಿಗೆ ಒಂದು ಹುದ್ದೆ ಎಂದು ಪರಿಗಣಿಸಿದಾಗ ಒಟ್ಟು 945 ಅಭ್ಯರ್ಥಿಗಳು ಆಯ್ಕೆಯಾಗಿದ್ದು, 399 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿತ್ತು. ಇನ್ನೂ 546 ಅಭ್ಯರ್ಥಿಗಳು ನೇಮಕಾತಿ ಆದೇಶಕ್ಕಾಗಿ ಕಾಯುತ್ತಿದ್ದಾರೆ.

ಈ ಮಧ್ಯೆ, ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದಿದ್ದರೂ ಹುದ್ದೆಗೆ ಆಯ್ಕೆಯಾಗದ ಅಭ್ಯರ್ಥಿಗಳು ಕೋರ್ಟ್ ಮೆಟ್ಟಿಲೇರಿದ್ದರು. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು, ದಾಖಲೆ ಪರಿಶೀಲನೆ ಸಂದರ್ಭದಲ್ಲಿ ಎಲ್ಲವೂ ಸರಿಯಾಗಿವೆ ಎಂದು ಪ್ರಮಾಣೀಕರಿಸಿದ್ದರೂ ಸೇವಾನುಭವ ಪ್ರಮಾಣಪತ್ರದಲ್ಲಿ 'ನಿರ್ದಿಷ್ಟ ಕಾರ್ಯಕ್ಷೇತ್ರದ ಕಾರ್ಯಾನುಭವದಲ್ಲಿ ಸ್ಪಷ್ಟತೆ ಇಲ್ಲ' ಎಂದು ಕಾರಣ ನೀಡಿ ಅರ್ಹರಾಗಿದ್ದ ಹಲವು ಅಭ್ಯರ್ಥಿಗಳನ್ನು ಕೆಪಿಎಸ್‌ಸಿ ತಿರಸ್ಕರಿಸಿತ್ತು.

7ನೇ ಪುಟ ನೋಡಿ

ನೇಮಕಾತಿ ಪ್ರಕ್ರಿಯೆ- ಮುಂದೆ ಹೇಗೆ?

- ಅರ್ಜಿ ಸಲ್ಲಿಸುವ ವೇಳೆ ಅಭ್ಯರ್ಥಿಗಳು ಸಲ್ಲಿಸಿದ ದಾಖಲೆಗಳ ಆಧಾರದಲ್ಲಿ ಕೆಪಿಎಸ್‌ಸಿ ಮತ್ತು ರಾಜ್ಯ ಸರ್ಕಾರ ಆಯ್ಕೆ ಪಟ್ಟಿ ರೀಡೂ ಮಾಡಬೇಕು
- ಅಭ್ಯರ್ಥಿ ಯಾವ ವೃತ್ತಿಯಲ್ಲಿ ತರಬೇತಿ ಪಡೆದಿದ್ದಾರೆಂದು ಉದ್ಯೋಗದಾತರಿಂದ ಸ್ಪಷ್ಟೀಕರಣ ಪಡೆಯಲು ಅಥವಾ ಸೇವಾನುಭವ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳ ನೆರವು ಪಡೆಯಲು ಕೆಪಿಎಸ್‌ಸಿ ಸ್ವತಂತ್ರ.
- ಎರಡು ತಿಂಗಳ ಒಳಗೆ ಈ ಪ್ರಕ್ರಿಯೆ ಮುಗಿಸಿ, ಮುಚ್ಚಿದ ಲಕೋಟೆಯಲ್ಲಿ ಕೋರ್ಟ್‌ಗೆ ಕೆಪಿಎಸ್‌ಸಿ ವರದಿ ಸಲ್ಲಿಸಬೇಕು. ಕೆಪಿಎಸ್‌ಸಿ ಸಿದ್ಧಪಡಿಸಿದ ಮೆರಿಟ್ ಪಟ್ಟಿಯನ್ನು ರಾಜ್ಯ ಸರ್ಕಾರ ಪರಿಶೀಲಿಸಬೇಕು
- ಒಂದಕ್ಕಿಂತ ಹೆಚ್ಚು ವೃತ್ತಿಗೆ ಆಯ್ಕೆಯಾದ ಅಭ್ಯರ್ಥಿಗೆ ಅವರಿಷ್ಟದ ವೃತ್ತಿ ಆಯ್ಕೆಗೆ ಕೆಪಿಎಸ್‌ಸಿ ಅನುಮತಿ ನೀಡಬೇಕು

ಕೆಪಿಎಸ್‌ಸಿ ಮತ್ತು ನಾವು ಜಂಟಿಯಾಗಿ ಹೊಸ ಆಯ್ಕೆಯ ಪಟ್ಟಿ ಸಿದ್ಧಪಡಿಸಬೇಕಿದೆ. ಅಭ್ಯರ್ಥಿಗಳ ಸೇವಾನುಭವ ಪ್ರಮಾಣಪತ್ರ ಪರಿಶೀಲನೆಗೆ ಸಮಿತಿ ರಚಿಸುತ್ತೇವೆ

ಕೆ. ಜ್ಯೋತಿ, ಆಯುಕ್ತರು, ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆ

ಇಡೀ ಆಯ್ಕೆ ಪಟ್ಟಿಯನ್ನು ಪರಿಷ್ಕರಿಸಿ, ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ಸಲ್ಲಿಸಬೇಕಿದೆ. ಕೋರ್ಟ್ ಆದೇಶದಂತೆ ಆ ಪ್ರಕ್ರಿಯೆಯನ್ನು ಆರಂಭಿಸಿದ್ದೇವೆ

ಸುರಳ್ಕರ್ ವಿಕಾಸ್ ಕಿಶೋರ್

ಕಾರ್ಯದರ್ಶಿ, ಕೆಪಿಎಸ್‌ಸಿ

ಕವಾಡಿಗರಹಟ್ಟಿಯಲ್ಲಿ ಕಾಲರಾ ದೃಢ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಕವಾಡಿಗರಹಟ್ಟಿಯಲ್ಲಿ ಕಲುಷಿತ ನೀರಿನಿಂದ ಸಂಭವಿಸಿದ ದುರಂತಕ್ಕೆ ಕಾಲರಾ ಕಾರಣ ಎಂಬುದು ದೃಢಪಟ್ಟಿದೆ. ನಗರಸಭೆಯಿಂದ ಪೂರೈಕೆಯಾಗಿದ್ದ ಕುಡಿಯುವ ನೀರಿನಲ್ಲಿ ವಿಬ್ರಿಯೊ ಕಾಲರಾ ಬ್ಯಾಕ್ಟೀರಿಯಾ ಇತ್ತು ಎಂಬುದನ್ನು ಬೆಂಗಳೂರಿನ ವೈದ್ಯಕೀಯ ಕಾಲೇಜು ಪ್ರಯೋಗಾಲಯ ಖಚಿತಪಡಿಸಿದೆ.

'ಅಸ್ವಸ್ಥರ ಪೈಕಿ ಮೂವರ ಭೇದಿಯ ಮಾದರಿಗಳನ್ನು ಬೆಂಗಳೂರಿಗೆ ರವಾನಿಸಲಾಗಿತ್ತು. ಎರಡು ಮಾದರಿಯಲ್ಲಿ ವಿಬ್ರಿಯೊ ಬ್ಯಾಕ್ಟೀರಿಯಾ ಪತ್ತೆಯಾಗಿದೆ. ನೀರು ಕಲುಷಿತಗೊಂಡಿದ್ದರಿಂದ ಬ್ಯಾಕ್ಟೀರಿಯಾ ಅದರೊಳಗೆ ಸೇರಿರುವ ಸಾಧ್ಯತೆ ಇದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಆರ್. ರಂಗನಾಥ್ ಮಾಹಿತಿ ನೀಡಿದ್ದಾರೆ.

6ನೇ ಪುಟ ನೋಡಿ

ಗುಣಮುಖರಾದ ಅಸ್ವಸ್ಥರು

ವಾಂತಿ– ಭೇದಿಯಿಂದ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಬಹುತೇಕರು ಗುಣಮುಖರಾಗಿ ಮನೆಗೆ ಮರಳುತ್ತಿದ್ದಾರೆ. ಮಂಗಳವಾರ 47 ಜನರು ಆಸ್ಪತ್ರೆಯಿಂದ ಮನೆಗೆ ಹೋಗಿದ್ದಾರೆ. ಮಂಗಳವಾರ ಹೊಸದಾಗಿ 9 ಜನರಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಇದರೊಂದಿಗೆ ಕಲುಷಿತ ನೀರು ಕುಡಿದು ಅಸ್ವಸ್ಥಗೊಂಡವರ ಸಂಖ್ಯೆ 223ಕ್ಕೆ ಏರಿಕೆಯಾಗಿದೆ. ಈವರೆಗೆ 170 ಜನ ಗುಣಮುಖರಾಗಿ ಮನೆಗೆ ಮರಳಿದ್ದು, 48 ಮಂದಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ.

ಮಣಿಪುರ: ಚರ್ಚೆ ಬಿರುಸು

ಅವಿಶ್ವಾಸ ನಿರ್ಣಯ: ಬಿರೇನ್ ಸಿಂಗ್ ಪದಚ್ಯುತಿಗೆ ಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ 'ಇಂಡಿಯಾ' ಮೈತ್ರಿಕೂಟವು ಮಂಡಿಸಿರುವ ಅವಿಶ್ವಾಸ ನಿರ್ಣಯ ಕುರಿತು ಲೋಕಸಭೆಯಲ್ಲಿ ಮಂಗಳವಾರ ಆರಂಭವಾದ ಚರ್ಚೆಯು ಮಣಿಪುರ ಹಿಂಸಾಚಾರ ವಿಷಯಕ್ಕೆ ಸಂಬಂಧಿಸಿ ಕಾವೇರಿತು.

ಕಣಿವೆ ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಹಾಗೂ ಭದ್ರತೆಗೆ ಸಂಬಂಧಿಸಿದಂತೆ ಕೇಂದ್ರವು ಸಂವೇದನಾ ರಹಿತವಾಗಿ ವರ್ತಿಸುತ್ತಿದೆ ಎಂದು ಪ್ರತಿಪಕ್ಷಗಳ ಸದಸ್ಯರು ಚಾಟಿ ಬೀಸಿದರು. ಅದರಲ್ಲೂ ವಿವಿಧ ಪಕ್ಷಗಳ ಸಂಸದೆಯರು ಸರ್ಕಾರ ನಿರ್ಲಕ್ಷ್ಯ ತೋರಿದೆ ಎಂದು ಆರೋಪಿಸಿ ತರಾಟೆಗೆ ತೆಗೆದುಕೊಂಡರು.

ಸಂಸತ್‌ನ ಮುಂಗಾರು ಅಧಿವೇಶನ ಶುರುವಾದ ದಿನದಿಂದಲೂ ಮಣಿಪುರ ವಿಷಯವು ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿತ್ತು. ಸದನದಲ್ಲಿಯೇ ಮೋದಿ ಅವರಿಂದ ಹೇಳಿಕೆ ಪಡೆಯಬೇಕೆಂದು ಬಿಗಿ ನಿಲುವು ತಳೆದಿರುವ 'ಇಂಡಿಯಾ' ಹೆಣೆದಿರುವ ತಂತ್ರಗಾರಿಕೆಯ ಭಾಗವಾಗಿ ಮಂಡಿಸಿರುವ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯಲ್ಲಿ, ಕೇಂದ್ರ ಹಾಗೂ ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ನೇತೃತ್ವದ ಸರ್ಕಾರದ ವಿರುದ್ಧ ಸಂಸದರು ಮುಗಿಬಿದ್ದರು.

ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪ ಸಭಾ ನಾಯಕ ಗೌರವ್ ಗೊಗೋಯಿ ಮಂಗಳವಾರ ಮಾತನಾಡಿದರು —ಪಿಟಿಐ ಚಿತ್ರ

11ನೇ ಪುಟ ನೋಡಿ

ಬಾಕಿ ಬಿಲ್ ಪಾವತಿಗೆ ಶೇ 15ರಷ್ಟು ಕಮಿಷನ್: ರಾಜ್ಯಪಾಲರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ಣಗೊಂಡಿರುವ ಕಾಮಗಾರಿಗಳ ಬಾಕಿ ಬಿಲ್ ಮೊತ್ತವನ್ನು ಗುತ್ತಿಗೆದಾರರಿಗೆ ಬಿಡುಗಡೆ ಮಾಡಲು ಬೆಂಗಳೂರು ಅಭಿವೃದ್ಧಿ ಸಚಿವರ ಪರವಾಗಿ ಬಿಬಿಎಂಪಿ ಅಧಿಕಾರಿಗಳು ಮತ್ತು ಮಧ್ಯವರ್ತಿಗಳು ಶೇ 15ರಷ್ಟು ಕಮಿಷನ್ ಕೇಳುತ್ತಿದ್ದಾರೆ ಎಂದು ಬಿಬಿಎಂಪಿ ಗುತ್ತಿಗೆದಾರರು ರಾಜ್ಯಪಾಲರಿಗೆ ದೂರು ನೀಡಿದ್ದಾರೆ.

ಬಿಬಿಎಂಪಿಯಲ್ಲಿ ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿ ವಿಚಾರದಲ್ಲಿ ಮಧ್ಯಪ್ರವೇಶ ಮಾಡುವಂತೆ 75 ಕ್ಕೂ ಹೆಚ್ಚು ಗುತ್ತಿಗೆದಾರರು ಮಂಗಳವಾರ ರಾಜಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ಬಳಿಕ ರಾಜ್ಯಪಾಲರು ಗುತ್ತಿಗೆದಾರರ ಅಹವಾಲು ಆಲಿಸಿದರು. ಆಗ ಕೆಲವು ಗುತ್ತಿಗೆದಾರರು ಕಮಿಷನ್ ಬೇಡಿಕೆ ಕುರಿತು ದೂರಿದ್ದಾರೆ.

4A ಪುಟ ನೋಡಿ

ಪತ್ರ ಬರೆಯುವುದರಲ್ಲಿ ತಪ್ಪಿಲ್ಲ: ಡಿಕೆಶಿ

'ಗುತ್ತಿಗೆದಾರರು ರಾಜ್ಯಪಾಲರಿಗೆ ಪತ್ರಬರೆದಿರುವುದರಲ್ಲಿ ಯಾವುದೇ ತಪ್ಪಿಲ್ಲ. ಅವರು ರಾಜ್ಯಪಾಲರಿಗಾದರೂ ಪತ್ರ ಬರೆಯಲಿ, ವಿರೋಧ ಪಕ್ಷ ಅಥವಾ ಆಡಳಿತ ಪಕ್ಷದವರನ್ನು ಕೇಳಲಿ. ಅವರಿಗೆ ನೋವಾಗಿದೆ. ಕೇಳುವುದರಲ್ಲಿ ತಪ್ಪಿಲ್ಲ. ನಮಗೆ ಯಾರಿಗೂ ತೊಂದರೆ ನೀಡುವ ಇಚ್ಛೆ ಇಲ್ಲ. ಸರಿಯಾಗಿ ಕೆಲಸ ಮಾಡಿರುವ ಗುತ್ತಿಗೆದಾರರಿಗೆ ಹಣ ಸಿಗಬೇಕು ಎಂಬುದು ನಮ್ಮ ಉದ್ದೇಶ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

'ಕೆಲವು ಗುತ್ತಿಗೆದಾರರು ನಮ್ಮ ಮೇಲೆ ಪ್ರೀತಿ ಅಭಿಮಾನ ತೋರಿಸುತ್ತಿದ್ದಾರೆ. ಅದನ್ನು ಬ್ಲ್ಯಾಕ್ ಮೇಲ್ ಎನ್ನುವುದಿಲ್ಲ' ಎಂದು ಅವರು ಹೇಳಿದರು.

4A ಪುಟ ನೋಡಿ

ಇದು ಪ್ರಿಂಟರ್ ಮಾತ್ರವಲ್ಲ, ಇದು ನಿಮ್ಮ ಬ್ಯುಸಿನೆಸ್‌ನ ಟಾಪ್ ಪರ್ಫಾರ್ಮರ್.

Consider it done with the HP Smart Tank 580



Print up to 12,000 pages[1] with 1 extra black ink bottle included in the box

0% Interest Free EMI[2] BAJAJ FINSERV | pine labs PAY LATER | HDB FINANCIAL SERVICES

Easy to set up & use with HP Smart App[3]

Get FREE 1+1 year extended warranty[4]

Call: 1800 419 4962 | To learn more about our range of HP Smart Tank Printers, visit: https://www.hp.com/in/smarttank

#Limited time offer valid till 15th August'23 on purchase of HP Smart Tank (520, 521, 580, 581, 585). Offers available at all leading retail outlets. Visit now!

Scan here to talk to an expert

T&C apply. 1. Black and composite color average per bottle (cyan/magenta/yellow) results based on HP methodology and continuous printing of ISO/IEC 24712 test pages. Not based on ISO/IEC 24711 test process. An additional black ink bottle is required to print 6,000 color test pages. Actual yield varies based on content of printed pages and other factors. Some ink from included bottles is used to start up the printer. For details, see: hp.com/go/learnaboutsupplies. 2. Subject to select stores and bank clearance 3. Mobile-guided set up is available in selected models. Requires the HP Smart App download. For details on local printing requirements see www.hp.com/go/mobileprinting. Certain features/software are available in English language only and differ between desktop and mobile applications. Subscription may be required; subscription may not be available in all countries. For details, see: www.hpsmart.com. Internet access required and must be purchased. Requires the HP Smart App download. For more information, see: hpsmart.com. 4. Includes HP's standard commercial warranty (also referred to as HP Limited Warranty) plus additional commercial warranty (as defined in product table) by HP subject to registration within 60 days after purchase and acceptance of the promotion terms and conditions - http://hp.com/go/extendedwarranty. Not available for HP Smart Tank 525/529 and HP Smart Tank 585/589 printer models. © Copyright 2023 HP Development Company, LP.

ಸಲಹಾ ಕಾರ್ಯಕ್ರಮ ನಾಳೆ

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರು' ಕಾರ್ಯಕ್ರಮಕ್ಕೆ ನೋಡಲ್ ಏಜೆನ್ಸಿಯಾಗಿ ನೇಮಕವಾಗಿರುವ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಆಗಸ್ಟ್ 10ರಂದು ಸಲಹಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವು ಕುಮಾರಸ್ವಾಮಿ ಲೇಔಟ್‌ನಲ್ಲಿರುವ ದಯಾನಂದ್ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಪ್ರೇಮ್ ಚಂದ್ರ ಸಾಗರ್ ಸಭಾಂಗಣದಲ್ಲಿ ಬೆಳಿಗ್ಗೆ 9.30ಕ್ಕೆ ನಡೆಯಲಿದೆ.

ಸಾರ್ವಜನಿಕರು, ಕ್ಷೇಮಾಭಿವೃದ್ಧಿ ಸಂಘಗಳು, ಜಲ ತಜ್ಞರು, ವಿದ್ಯಾರ್ಥಿಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಬೋಧಕ ವರ್ಗದವರು ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಬಹುದು ಎಂದು ತಿಳಿಸಿದ್ದಾರೆ.

'ಸಂಚಾರಯುಕ್ತ ಬೆಂಗಳೂರು' ವಿಚಾರ ಸಂಕಿರಣದಲ್ಲಿ ಮೂಡಿಬಂದ ಅಭಿಪ್ರಾಯ

'ತುರ್ತಾಗಿ ಮಾಸ್ಟರ್ ಪ್ಲಾನ್ ರೂಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರು' ಆಗಬೇಕು ನಿಜ. ಆದರೆ, ಬೆಂಗಳೂರು ಮಹಾನಗರದಲ್ಲಿ ರಸ್ತೆ ಸಂಚಾರಕ್ಕೆ ಸಂಬಂಧಿಸಿದ ಮಹಾಯೋಜನೆ (ಮಾಸ್ಟರ್ ಪ್ಲಾನ್) ಅವಧಿ 2015ರಲ್ಲೇ ಮುಗಿದಿದೆ. ಹೀಗಾಗಿ, ಹೊಸದಾಗಿ ಮಹಾಯೋಜನೆಯನ್ನು ತುರ್ತಾಗಿ ರೂಪಿಸಬೇಕು.

ಭಾರತೀಯ ವಿಜ್ಞಾನ ಸಂಸ್ಥೆಯ ಸಿವಿಲ್ ಎಂಜಿನಿಯರಿಂಗ್ ಸಭಾಂಗಣದಲ್ಲಿ ಮಂಗಳವಾರ ನಡೆದ ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ 'ಸಂಚಾರಯುಕ್ತ ಬೆಂಗಳೂರು' ವಿಚಾರ ಸಂಕಿರಣದಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ತಜ್ಞರಿಂದ ಬಂದ ಸಲಹೆ ಇದು.

ನಗರಕ್ಕೆ ಸಮಗ್ರ ಚಲನಶೀಲ ಯೋಜನೆ ರೂಪಿಸಬೇಕು. ಉತ್ತಮ ಆಹಾರ, ಉತ್ತಮ ಶಿಕ್ಷಣ, ಉತ್ತಮ ವ್ಯವಸ್ಥೆಗಳಿರುವ ಬೆಂಗಳೂರು ಮಹಾನಗರದಲ್ಲಿ ಸಂಚಾರ ದಟ್ಟಣೆಯೇ ಬಹು ದೊಡ್ಡ ಸಮಸ್ಯೆ. 'ನಮ್ಮ ಮೆಟ್ರೊ' ಇರುವುದರಿಂದ ಸ್ವಲ್ಪ ಅನುಕೂಲವಾಗಿದ್ದರೂ ಇನ್ನಷ್ಟು ಸುಧಾರಣೆಯ ಅಗತ್ಯವಿದೆ ಎಂದು ಹಲವರು ಅಭಿಪ್ರಾಯಪಟ್ಟರು.

ನಗರದಲ್ಲಿ ಮಂಗಳವಾರ ನಡೆದ ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ 'ಸಂಚಾರಯುಕ್ತ ಬೆಂಗಳೂರು' ವಿಚಾರ ಸಂಕಿರಣದಲ್ಲಿ ಎಂಎಸ್‌ಐಆರ್‌ಎಂ ಸಹ ಪ್ರಾಧ್ಯಾಪಕಿ ಮೇಘನಾ ವರ್ಮಾ ವಿಚಾರ ಮಂಡಿಸಿದರು

ಪಾದಚಾರಿ ಮಾರ್ಗಗಳ ಒತ್ತುವರಿ ತಡೆಯದೇ ಇದ್ದರೆ ಸಮಸ್ಯೆಯಾಗಲಿದೆ. ಮಹಿಳೆಯರ ಸುರಕ್ಷತೆಗೆ ಕ್ರಮಕೈಗೊಳ್ಳಬೇಕು. ಹತ್ತಿರದ ಸ್ಥಳಗಳಿಗೆ ವಾಹನಗಳಲ್ಲಿ ಓಡಾಡುವ ಬದಲು ನಡೆದುಕೊಂಡೇ ಹೋಗುವಂತೆ ಜನರಲ್ಲಿ ಅರಿವು ಮೂಡಿಸಬೇಕು. ಇದು ದೈಹಿಕ ಆರೋಗ್ಯಕ್ಕೂ ಮತ್ತು ಪರಿಸರದ ಆರೋಗ್ಯಕ್ಕೂ ಪೂರಕವಾಗಿದೆ ಎಂದು ಸಲಹೆಗಳನ್ನು ನೀಡಿದರು.

ಬೆಂಗಳೂರಿನಲ್ಲಿ 1985ರಲ್ಲಿ ಕೇವಲ 1.7 ಲಕ್ಷ ವಾಹನಗಳು ಇದ್ದವು. 2022ರ ಅಂತ್ಯಕ್ಕೆ 1.09 ಕೋಟಿಗೆ ತಲುಪಿರುವುದನ್ನು ಗಮನಿಸಿದರೆ ಬೆಂಗಳೂರಿನ ವಾಹನ ದಟ್ಟಣೆ ಅರ್ಥವಾಗುತ್ತದೆ. ಸುರಕ್ಷತೆಗೆ ಗಮನಕೊಡುವುದು, ಮಾಲಿನ್ಯ ಕಡಿಮೆ ಮಾಡುವುದು, ಅಪಘಾತಗಳಾಗದಂತೆ ಸಂಚಾರ ವ್ಯವಸ್ಥೆ ರೂಪಿಸುವುದೂ ಸೇರಿದಂತೆ ಬ್ರ್ಯಾಂಡ್ ಬೆಂಗಳೂರು ಮಾಡಲು ಬೇಕಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಬಿಬಿಎಂಪಿ ಸಿದ್ಧವಾಗಿದೆ ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ಬಿಬಿಎಂಪಿ, ನಗರ ಭೂ ಸಾರಿಗೆ ನಿರ್ದೇಶನಾಲಯ, ಸಂಚಾರ ಪೊಲೀಸ್, ಬಿಎಂಟಿಸಿ, ಬಿಎಂಆರ್‌ಸಿಎಲ್, ಕೆ–ರೈಡ್ ಅಧಿಕಾರಿಗಳು, ಐಐಎಸ್‌ಸಿ ಪ್ರೊಫೆಸರ್‌ಗಳು, ಸ್ಟಾರ್ಟಪ್, ವಿವಿಧ ಸಂಘಟನೆಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ನಾಗರಿಕರು ಭಾಗವಹಿಸಿದ್ದರು.

8412 ಸಲಹೆ: ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ 'ಸಂಚಾರಯುಕ್ತ ಬೆಂಗಳೂರು' ವಿಷಯಕ್ಕೆ ಸಂಬಂಧಿಸಿದಂತೆ ಬಂದಿರುವ 10479 ಸಲಹೆಗಳನ್ನು ಅಧ್ಯಯನ ನಡೆಸಿ ಒಂದೇ ರೀತಿಯ ಸಲಹೆಗಳನ್ನು ತೆಗೆದ ಬಳಿಕ ಒಟ್ಟಾರೆ 8412 ಸಲಹೆಗಳನ್ನು ಬೇರೆ ಬೇರೆ ವರ್ಗಗಳಾಗಿ ವಿಂಗಡಿಸಿ ಅದನ್ನೆಲ್ಲ ಕ್ರೋಢೀಕರಿಸಿ ವರದಿಯನ್ನು ಸಿದ್ಧಪಡಿಸಲಾಗುತ್ತದೆ. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸುಸ್ಥಿರತೆಯ ಕೇಂದ್ರ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಸಹಯೋಗದಲ್ಲಿ ಈ ವರದಿ ತಯಾರಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸಭೆಯಲ್ಲಿ ಕೇಳಿಬಂದ ಸಲಹೆಗಳು

- ವೈಟ್‌ಫೀಲ್ಡ್ ಮತ್ತು ಎಲೆಕ್ಟ್ರಾನಿಕ್ ಸಿಟಿಗೆ ಮೆಟ್ರೊ ವಿಸ್ತರಣೆಯಾಗಿರುವುದು ಬೆಂಗಳೂರಿನ ಅಭಿವೃದ್ಧಿಯಲ್ಲಿ ಬಹಳ ದೊಡ್ಡ ಹೆಜ್ಜೆ. ಮೆಟ್ರೊ ನಿಲ್ದಾಣಗಳಿಂದ ಫೀಡರ್ ಬಸ್‌ಗಳ ಸಂಪರ್ಕ ಪ್ರತಿ ಐದು ನಿಮಿಷಕ್ಕೆ ಇದ್ದಾಗ ಪ್ರಯಾಣಿಕರಿಗೆ ಉಪಯೋಗವಾಗುತ್ತದೆ. ಇಲ್ಲದಿದ್ದರೆ ಪ್ರಯಾಣಿಕರು ಬೇರೆ ವಾಹನಗಳನ್ನು ಅವಲಂಬಿಸಬೇಕಾಗುತ್ತದೆ.
- ಮಳೆ ಸುರಿದು ಮಹಾನಗರ ಕೆಸರಿನಲ್ಲಿ ಮುಳುಗಿದ ಮೇಲೆ ಚರ್ಚಿಸುವ ಬದಲು ಮಳೆಗಾಲಕ್ಕಿಂತ ಪೂರ್ವದಲ್ಲಿಯೇ ಈ ಬಗ್ಗೆ ಚಿಂತನೆ ನಡೆಸಬೇಕು. ಎಲ್ಲಿ ನೀರು ನುಗ್ಗುತ್ತದೆ ಎನ್ನುವುದನ್ನು ಪರಿಶೀಲಿಸಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು.
- ಬಿಎಂಟಿಸಿ ಬಸ್ ನಿಲ್ದಾಣಗಳಲ್ಲಿ ಮಾತ್ರವಲ್ಲ, ಬಸ್ ತಂಗುದಾಣಗಳಲ್ಲಿಯೂ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು.
- ಶಕ್ತಿ ಯೋಜನೆ ಜಾರಿಯಾದ ಮೇಲೆ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ದಿಢೀರ್ ಏರಿಕೆಯಾಗಿದೆ. ಬೇಡಿಕೆ ಇರುವ ಪ್ರದೇಶಗಳಿಗೆ ಬಸ್ ಸಂಖ್ಯೆ ಹೆಚ್ಚಿಸಬೇಕು.
- ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳು ಇರುವ ಪ್ರದೇಶಗಳಲ್ಲಿ ಬಸ್ ನಿಲುಗಡೆ ನೀಡಬೇಕು.
- ಸಂಚಾರ ಸಮಸ್ಯೆ, ಹೆಚ್ಚು ವೆಚ್ಚ ಇರುವ ನಗರ ಎಂದು ಜನರು ಜೀವನಕ್ಕಾಗಿ ಬೇರೆ ನಗರಗಳನ್ನು ಆಯ್ಕೆ ಮಾಡುವಂತಾಗಬಾರದು. ಬೆಂಗಳೂರನ್ನೇ ವಾಸಯೋಗ್ಯ ನಗರ ಎಂದು ತಿಳಿಯಲು ಬೇಕಾದ ಕ್ರಮ ಕೈಗೊಳ್ಳಬೇಕು.
- ಅಂಗವಿಕಲರು, ವೃದ್ಧರು, ಆಟೊ ಚಾಲಕರು ಹೀಗೆ ಎಲ್ಲ ವರ್ಗದ ಜನರು ಒಳಗೊಳ್ಳುವ ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಬೇಕು.
- ಪಾರ್ಕಿಂಗ್ ಪ್ರದೇಶಗಳನ್ನು ಹೆಚ್ಚು ಮಾಡಬೇಕು. ಸೈಕಲ್ ಮಾರ್ಗ ಎಲ್ಲೆಡೆ ನಿರ್ಮಾಣವಾಗಬೇಕು. ಮೆಟ್ರೊ ನಿಲ್ದಾಣಗಳಲ್ಲಿ ಸೈಕಲ್ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು.
- ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಅನಧಿಕೃತವಾಗಿ ಪಾರ್ಕಿಂಗ್ ಮಾಡುವುದನ್ನು ತಡೆಯಬೇಕು. ಸೈನೇಜ್ ಅಳವಡಿಸಬೇಕು. ಅಗತ್ಯವಿದ್ದಲ್ಲಿ ಸುರಂಗ ರಸ್ತೆ ನಿರ್ಮಿಸಬೇಕು.
- ಮೆಟ್ರೊ ಮಾರ್ಗವನ್ನು ಹೆಚ್ಚಿಸುವ ಜೊತೆಗೆ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಬೇಕು.
- ನಗರದಲ್ಲಿರುವ ರಸ್ತೆ ಜಾಲ, ಜಂಕ್ಷನ್‌ಗಳು, ತಿರುವು ರಸ್ತೆ, ರಸ್ತೆ ಹುಬ್ಬುಗಳು, ಯು-ಟರ್ನ್, ರಸ್ತೆ ಮಧ್ಯಭಾಗ ವಿಭಜಕ ಅಳವಡಿಸಬೇಕು. ಸರಿಯಾಗಿ ನಿರ್ವಹಿಸಬೇಕು. ಚರಂಡಿ, ಕಾಲುವೆಗಳನ್ನು ವೈಜ್ಞಾನಿಕವಾಗಿ ನಿರ್ಮಿಸಬೇಕು.

ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ದೇವಾಲಯ ಮತ್ತು ಸಮೂಹ ದೇವಾಲಯಗಳು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಮಲ್ಲೇಶ್ವರಂ, ಬೆಂಗಳೂರು. ದೂರವಾಣಿ ಸಂಖ್ಯೆ: 080–23313339, Email:samuhadevalya12@gmail.com

ಸಂಖ್ಯೆ: ಕಾ.ನಿ.ಅ/ಸಿಆರ್–17/2023–24 ದಿನಾಂಕ: 09.08.2023

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಂಗಳೂರು ನಗರ ಮಲ್ಲೇಶ್ವರಂ, ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳಲ್ಲಿ ಈ ಕೆಳಕಂಡ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಹೊರಡಿಸಲಾಗಿರುತ್ತದೆ. ಟೆಂಡರ್ ಸಲ್ಲಿಸುವ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ (https://eproc.karnataka.gov.in) ಅಥವಾ ದೇವಾಲಯದ ದೂರವಾಣಿ ಸಂ: 080–23313339 ಅನ್ನು ಸಂಪರ್ಕಿಸಲು ಕೋರಿದೆ.

ಕ್ರ. ಸಂ.	ಇ–ಟೆಂಡರ್ ವಿವರ	ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ದಿನಾಂಕ	ಆನ್‌ಲೈನ್ ಮೂಲಕ ಟೆಂಡರ್ ತೆರೆಯುವ ದಿನಾಂಕ
1	ಬೆಂಗಳೂರು ನಗರ ಮಲ್ಲೇಶ್ವರಂ, ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳಿಗೆ ಅವಶ್ಯಕವಾದ ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಬಗ್ಗೆ	09.08.2023 ರಿಂದ 23.08.2023ರ ವರೆಗೆ ಸಂಜೆ 5:00 ಗಂಟೆವರೆಗೆ	24.08.2023

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳು, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/826/ಶಿರಡಿಸಾಯಿ/2023–24

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ – 562123,
E-mail: itstaff_ulb_mnhalli@yahoo.com ದೂರವಾಣಿ ಸಂಖ್ಯೆ: 080–23718487

ಸಂಖ್ಯೆ: ಮಾ.ನ.ಕಾ/ತಾ.ಶಾ/02/2023–24 ದಿನಾಂಕ: 07–08–2023

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

2022–23ನೇ ಸಾಲಿನ 15ನೇ ಹಣಕಾಸು, ಎಸ್.ಎಫ್‌ಸಿ ಮುಕ್ತನಿಧಿಯ ಹಾಗೂ ನಗರಸಭಾ ನಿಧಿ ಹಾಗೂ 2023–24ನೇ ಸಾಲಿನ ನಗರಸಭಾ ನಿಧಿಯ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪೌರಾಯುಕ್ತರು, ನಗರಸಭೆ ಮಾದನಾಯಕನಹಳ್ಳಿ ಇವರ ಹೆಸರಿನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆ / ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯಲ್ಲಿ ನೊಂದಾಯಿಸಿದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಕ್ರಮ. ಸಂ.	ಇಂಡೆಂಟ್	ಅಂದಾಜು ಮೊತ್ತ ಲಕ್ಷಗಳಲ್ಲಿ	ಇ.ಎಂ.ಡಿ ರೂ.ಗಳಲ್ಲಿ	ಕಾಲಾವಧಿ	ವರ್ಗ
1.	DMA/2023-24/BR/WORK_INDENT2184	12.36	15,450	90	ST
2.	DMA/2023-24/BR/WORK_INDENT2447	17.93	44,825	90	Others
3.	DMA/2023-24/WS/WORK_INDENT2563	7.30	9,125	90	SC
4.	DMA/2023-24/WS/WORK_INDENT2565	7.30	18,250	90	Others
5.	DMA/2023-24/OW/WORK_INDENT2170	9.00	22,500	90	Others
6.	DMA/2023-24/OW/WORK_INDENT2263	5.00	12,500	90	Others
7.	DMA/2023-24/OW/WORK_INDENT2264	5.00	6,250	90	SC
8.	DMA/2023-24/OW/WORK_INDENT2265	3.74	9,350	90	Others
9.	DMA/2023-24/OW/WORK_INDENT2266	5.00	12,500	90	Others

ಟೆಂಡರ್ ಸಲ್ಲಿಸುವ ವಿವರಗಳು:– (1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್ ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: 21.08.2023 ಸಂಜೆ 5.30 ಗಂಟೆಯವರೆಗೆ (2) ಸಲ್ಲಿಸಿರುವ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 23.08.2023 ಬೆಳಗ್ಗೆ 11.00 ಗಂಟೆಗೆ ಅಥವಾ ಪೌರಾಯುಕ್ತರು ಸೂಚಿಸುವ ದಿನಾಂಕದಂದು.

ಸೂಚನೆ:– ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ
ವಾಸಾಸಂಇ/ವಾಪ್ರಾ/835/ಎಎ/2023–24

ಪ್ರತ್ಯೇಕ ಸಮಿತಿ ಜೊತೆ ಎರಡನೇ ಸಭೆಯಲ್ಲಿ ಅಧಿಕಾರಿಗಳಿಂದ ಮಾಹಿತಿ

ಜನಹಿತ ಬೆಂಗಳೂರು: ಸರ್ಕಾರಕ್ಕೆ ಶೀಘ್ರ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ ಜನಹಿತ, ಆಕರ್ಷಕ ಬೆಂಗಳೂರು ವಿಷಯಾಧಾರಿತವಾಗಿ ಆಯ್ಕೆ ಮಾಡಿರುವ ಪ್ರಮುಖ ಸಲಹೆಗಳ ವರದಿ ಸಿದ್ಧಪಡಿಸಿ ಶೀಘ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ ರಾಯಪುರ ತಿಳಿಸಿದರು.

ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ ರಚಿಸಿರುವ ಜನಹಿತ, ಆಕರ್ಷಕ ಬೆಂಗಳೂರು ವಿಷಯ ಕುರಿತು ಪ್ರತ್ಯೇಕ ಸಮಿತಿ ಜೊತೆ ನಡೆದ ಎರಡನೇ ಸಭೆಯಲ್ಲಿ ಅವರು ಮಾತನಾಡಿದರು.

ನಾಗರಿಕರಿಂದ ಬಂದಂತಹ ಸಲಹೆಗಳನ್ನು ಪಾಲುದಾರ ಶೈಕ್ಷಣಿಕ ಸಂಸ್ಥೆಯಾದ ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ ಆ್ಯಂಡ್ ಟೆಕ್ನಾಲಜಿ ವತಿಯಿಂದ ಅಧ್ಯಯನ ನಡೆಸಿ ವರದಿಯನ್ನು ಸಿದ್ದಪಡಿಸಲಾಗಿದೆ. ಇದರ ಜೊತೆಗೆ ಸಮಿತಿಯಲ್ಲಿ ಬಂದಿರುವ ಸಲಹೆಗಳನ್ನು ಸೇರಿಸಿ ಅಂತಿಮ ವರದಿಯನ್ನು ಸಿದ್ದಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಸಲಹೆಗಳನ್ನು ಈಗಾಗಲೇ ವಿವಿಧ ವರ್ಗಗಳಲ್ಲಿ ಬೇರ್ಪಡಿಸಲಾಗಿದೆ. ಪ್ರಮುಖ ಸಲಹೆಗಳನ್ನು ಅಂತಿಮಗೊಳಿಸಬೇಕಿದೆ. ಸಿಎಸ್‌ಆರ್ ಅಡಿಯಲ್ಲಿ ತೆಗೆದುಕೊಳ್ಳಬಹುದಾದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ತಿಳಿಸಿದರು.

'ವರ್ಷವಿಡೀ ಕಾರ್ಯಕ್ರಮ ಆಯೋಜಿಸಿ'

ನಗರದಲ್ಲಿರುವ ಅಶ್ವತ್ಥ ಕಟ್ಟೆಗಳನ್ನು ಗುರುತಿಸಬೇಕು. ಕೆಂಪೇಗೌಡರ ಜೀವನ ಚರಿತ್ರೆಯ ಬಗ್ಗೆ ಯುವ ಪೀಳಿಗೆಯಲ್ಲಿ ತಿಳಿಸಲು ಯೋಜನೆ ರೂಪಿಸಬೇಕು. ಬೆಂಗಳೂರಿನ ಮೊದಲ ಶಾಲೆಯನ್ನು ಗುರುತಿಸಬೇಕು. 'ಸ್ವರ್ಣ ವಲಯ'ದಡಿ ಸಿಟಿ ಮಾರುಕಟ್ಟೆ, ಲಾಲ್‌ಬಾಗ್, ಸ್ವಾತಂತ್ರ್ಯ ಉದ್ಯಾನ, ಪಾರಂಪರಿಕ ಠಾಣ, ಧರ್ಮರಾಯ ದೇವಸ್ಥಾನ ನವೀಕರಣ, ಪೇಟೆಗಳ ಹಬ್ಬ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ನಲ್ಲಿ ಟೆಲಿಸ್ಕೋಪ್ ಅಳವಡಿಸಬೇಕು. ನಗರದಲ್ಲಿ 'ಅನ್ ಬಾಕ್ಸಿಂಗ್' ಪರಿಕಲ್ಪನೆಯಡಿ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಇನ್ನಿತರ ವಿಷಯಗಳಾಧಾರಿತ ಅಂಶಗಳಡಿ ಕಾರ್ಯಕ್ರಮಗಳನ್ನು ವರ್ಷವಿಡೀ ಆಯೋಜಿಸಬೇಕು ಎಂದು ಸಭೆಯಲ್ಲಿ ಸಲಹೆಗಳು ಬಂದವು.

ಸಲಹೆಗಳು

- ಬೆಂಗಳೂರಿಗೆ 'ಸಾಂಸ್ಕೃತಿಕ ಕ್ಯಾಲೆಂಡರ್' ಹೊರತರಬೇಕು. ಅದರಲ್ಲಿ ಕೆರೆ ಹಬ್ಬ, ಹೂವಿನ ಹಬ್ಬ, ಕರಗ, ಥಿಯೇಟರ್ ಫೆಸ್ಟಿವಲ್, ನಾಡ ಹಬ್ಬ – ಬೆಂಗಳೂರು ಹಬ್ಬ, ಬೆಂಗಳೂರು ದಸರಾ, ಕನ್ನಡ ರಾಜ್ಯೋತ್ಸವ ಮಾಸ, ಐಟಿ.ಕಾಂ, ಕಡಲೆಕಾಯಿ ಪರಿಷೆ, ಊರ ಹಬ್ಬ - ಗ್ರಾಮ ದೇವತೆ ಉತ್ಸವಗಳು, ಬೆಂಗಳೂರು ಫೆಸ್ಟ್, ಹೊಸ ವರ್ಷದ ಮುನ್ನಾ ದಿನಗಳನ್ನು ಸಾಂಸ್ಕೃತಿ ಕ್ಯಾಲೆಂಡರ್‌ನಲ್ಲಿ ಅಳವಡಿಸುವುದು.
- ಜೆಸಿ ರಸ್ತೆಯಲ್ಲಿ ಥಿಯೇಟರ್ ಕಾಂಪ್ಲೆಕ್ಸ್, ಬಿಬಿಎಂಪಿಯೊಂದಿಗೆ ಎಲ್ಲ ಥಿಯೇಟರ್ ಸಂಕೀರ್ಣಗಳನ್ನು ನವೀಕರಿಸುವುದು ಮತ್ತು ಮರುಸ್ಥಾಪಿಸುವುದು, 4 ದಿಕ್ಕುಗಳಲ್ಲಿ 4 ಹೊಸ ಆಡಿಟೋರಿಯಂ ಸ್ಥಾಪಿಸುವುದು.
- ಸಾರ್ವಜನಿಕ ಸ್ಥಳಗಳನ್ನು ರಚಿಸಲು ಕನಿಷ್ಠ 25 ಜಂಕ್ಷನ್‌ಗಳನ್ನು ವಿನ್ಯಾಸಗೊಳಿಸುವುದು, ಡಿಜಿಟಲ್ ಸೈನೇಜ್/ ಗಾಳಿಯ ಗುಣಮಟ್ಟ ಸೂಚಕಗಳನ್ನು ಅಳವಡಿಸುವುದು. ರಸ್ತೆ ಬದಿ, ಮೂಲೆಗಳನ್ನು ಅಭಿವೃದ್ಧಿ ಮಾಡುವುದು.
- ಬೆಂಗಳೂರು ದಕ್ಷಿಣದಲ್ಲಿ ಕೆಂಪೇಗೌಡ ಹೆರಿಟೇಜ್ ಕಾರಿಡಾರ್ - 12 ಕಿಮೀ ಕಾರಿಡಾರ್, ಸ್ಯಾಂಕಿ ಟ್ಯಾಂಕ್ - ಕಾಡು ಮಲ್ಲೇಶ್ವರ ದೇವಸ್ಥಾನ - ಉತ್ತರ ಗೋಪುರ ಕಾರಿಡಾರ್, ಹಲಸೂರು ಟ್ಯಾಂಕ್ / ಸೋಮೇಶ್ವರ ದೇವಸ್ಥಾನ - ಪೂರ್ವ ಗೋಪುರ ಕಾರಿಡಾರ್, ಸಿಬಿಡಿ ವಿಕ್ಟೋರಿಯನ್ ಬೆಂಗಳೂರು ಗೋಲ್ಡನ್ ಕಾರಿಡಾರ್ ರಚಿಸುವುದು
- ಉದ್ಯಾನ ಮತ್ತು ಕೆರೆಗಳನ್ನು ಅಭಿವೃದ್ಧಿ ಮಾಡುವುದು. ಹೂ ಹಬ್ಬ– ಕೆರೆ ಹಬ್ಬ, ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಸಿವಿಲ್ ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡಿಕೊಳ್ಳುವುದು.
- ಬೆಂಗಳೂರಿಗೆ ಲ್ಯಾಂಡ್‌ಮಾರ್ಕ್ ವಾಚ್‌ಟವರ್, ಪಬ್ಲಿಕ್ ಯುಟಿಲಿಟಿ ಕಟ್ಟಡವನ್ನು ಮರುಬಳಕೆ ಮಾಡುವುದು, ಫ್ರೀಡಂ ಪಾರ್ಕ್ ಅನ್ನು ಮರುರೂಪಿಸುವುದು, ಸಾಂಸ್ಕೃತಿಕ ಚಟುವಟಿಕೆಗೆ ಸರ್ಕಾರಿ ವಸ್ತುಸಂಗ್ರಹಾಲಯ, ವಿಶ್ವೇಶ್ವರಯ್ಯ ಮ್ಯೂಸಿಯಂ, ವೆಂಕಟಪ್ಪ ಆರ್ಟ್ ಗ್ಯಾಲರಿ, ವಾಟರ್ ಮ್ಯೂಸಿಯಂ, ಕೆಂಪೇಗೌಡ ಮ್ಯೂಸಿಯಂ, ತಾರಾಲಯ, ಯುದ್ಧ ಸ್ಮಾರಕದಲ್ಲಿರುವ ಐಜಿ ಸಂಗೀತ ಕಾರಂಜಿಗಳನ್ನು ಬಳಕೆ ಮಾಡಿಕೊಳ್ಳುವುದು.
- ಸಾರ್ವಜನಿಕ ಕಲೆಗಳಿಗಾಗಿ ಸ್ಥಳಗಳನ್ನು ಆಯ್ಕೆಮಾಡುವುದು, ಸ್ಟೋನ್ ಆರ್ಟ್/ಮೆಟಲ್ ಆರ್ಟ್/ ಭಿತ್ತಿ ಚಿತ್ರಗಳು/ ಕಲೆಗಳ ಮರುಬಳಕೆ, ಮೇಲುಸೇತುವೆಗಳ ಕೆಳಗಿನ ಜಾಗಗಳನ್ನು ಬಳಸುವುದು, ಪ್ರತಿ ಮೇಲುಸೇತುವೆ ಕೆಳಭಾಗದಲ್ಲಿ ಕಲಾ ಶಾಲೆಗಳನ್ನು ತೆರೆಯುವುದು, ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಗೋಪುರ ನಿರ್ಮಿಸುವುದು.
- ಬ್ಯಾಂಡ್ ಸ್ಟ್ಯಾಂಡ್‌ಗಳನ್ನು ಮರುಬಳಸುವುದು, ಬೆಂಗಳೂರು ಜನಪದ ಕಲಾವಿದರನ್ನು ಪ್ರೋತ್ಸಾಹಿಸುವುದು, ಓಪನ್ ಸ್ಟ್ರೀಟ್ ಕಾರ್ಯಕ್ರಮಗಳನ್ನು ನಡೆಸುವುದು, ಸಮೂಹ ಗಾಯನ, ರಾಮನವಮಿ ಸಂಗೀತೋತ್ಸವ ನಡೆಸುವುದು.
- ಸಾರ್ವಜನಿಕ ಸೂಚನಾ ಫಲಕಗಳ ಅಳವಡಿಕೆ, ವಾಹನ ಸವಾರರಿಗೆ ಮಳೆ ಆಶ್ರಯ ಪ್ರದೇಶಗಳ ನಿರ್ಮಾಣ, ಖಾಲಿ ಇರುವ ಖಾಸಗಿ ಜಮೀನುಗಳಿಗೆ ಕಾಂಪೌಂಡ್ ಗೋಡೆಯನ್ನು ಕಡ್ಡಾಯಗೊಳಿಸುವುದು, ಸಿಗ್ನಲ್ ಫ್ರೀ ಬೆಂಗಳೂರು, ತರಬೇತಿ ಮಾರ್ಗದರ್ಶಿಗಳು ಮತ್ತು ಚಾಲಕರ ನಿಯೋಜನೆ ಹಾಗೂ ಬೆಂಗಳೂರು ಮಾರ್ಗದರ್ಶಿ ಪುಸ್ತಕ ಮಾಡುವುದು.

ಡೀನ್ ನೇಮಕ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಡೀನ್ ಆಗಿ ಭೂಗೋಳವಿಜ್ಞಾನ ವಿಭಾಗದ ಪ್ರಾಧ್ಯಾಪಕ ಅಶೋಕ್ ಡಿ. ಹಂಜಗಿ ಅವರನ್ನು ನೇಮಕ ಮಾಡಲಾಗಿದೆ ಎಂದು ಕುಲಸಚಿವರು ತಿಳಿಸಿದ್ದಾರೆ.

ನಿಧನ ವಾರ್ತೆ

ಚಿಕ್ಕಣ್ಣ

ಚಿಕ್ಕಣ್ಣ

ಬೆಂಗಳೂರು: ಆರ್‌ಪಿಸಿ ಲೇಔಟ್ ನಿವಾಸಿ ಬಿಬಿಎಂಪಿ ನಿವೃತ್ತ ನೌಕರ ಚಿಕ್ಕಣ್ಣ (68) ಮಂಗಳವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಚಿಕ್ಕಣ್ಣ ಅವರು ಕರ್ನಾಟಕ ಪ್ರದೇಶ ಕುರುಬ ಸಂಘದ ಅಜೀವ ಸದಸ್ಯರಾಗಿದ್ದರು. ಇವರ ಅಂತ್ಯಕ್ರಿಯೆ ಬುಧವಾರ ಬೆಳಿಗ್ಗೆ 9ಕ್ಕೆ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಹನಿಯೂರು ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.



ಗೃಹ ಸಚಿವ ಜಿ. ಪರಮೇಶ್ವರ್ ಜನ್ಮ ದಿನದ ಪ್ರಯುಕ್ತ ಕಾಂಗ್ರೆಸ್ ಮುಖಂಡರಾದ ಬಿ.ವಿ. ಜಯರಾಮು ಅವರು ಭೇಟಿಯಾಗಿ ಶುಭ ಕೋರಿದರು. ಕಾಂಗ್ರೆಸ್ ಮುಖಂಡರಾದ ಸುನಿಲ್ ಪ್ರಕಾಶ್, ಜಗದೀಶ್, ಜಯಚಂದ್ರ ಇದ್ದರು

GOKALDAS EXPORTS LIMITED
Corporate Identification Number (CIN): L18101KA2004PLC033475
Regd. Office : No. 25, 2nd Cross, 3rd Main, Industrial Suburb, Yeshwanthpur, Bangalore-560022.
Tel: +91 80 68951000 Fax: +91 80 68951001 E-mail: gokex@gokaldasexports.com Website: www.gokaldasexports.com

Statement of unaudited Standalone and Consolidated Ind AS financial results for the quarter ended June 30, 2023
(Regulation 47(1) (b) of the SEBI (LODR) Regualtions, 2015)
(in Rs. lakh, except earnings per share)

Sl. No.	Particulars	Standalone				Consolidated			
		Quarter Ended			Year Ended	Quarter Ended			Year Ended
		June 30, 2023	Mar 31, 2023	June 30, 2022	Mar 31, 2023	June 30, 2023	Mar 31, 2023	June 30, 2022	Mar 31, 2023
		Unaudited	(Refer note 1)	Unaudited	Audited	Unaudited	(Refer note 1)	Unaudited	Audited
1	Total Income	52,480.63	53,200.78	61,314.69	2,25,165.13	52,223.04	53,012.18	61,269.27	2,24,722.93
2	Net profit/(Loss) before tax and exceptional items	4,757.64	5,285.11	5,150.56	20,377.33	4,317.70	5,076.55	5,081.37	19,833.93
3	Net profit/(Loss) before tax and after exceptional items	4,757.64	5,285.11	5,150.56	20,982.36	4,317.70	5,076.55	5,081.37	20,438.96
4	Net Profit/(Loss) after tax and exceptional items	3,558.70	4,927.82	4,008.45	17,840.04	3,255.23	4,719.26	3,939.26	17,296.64
5	Total Comprehensive Income for the period / year	5,599.92	8,182.61	830.65	15,606.52	5,286.87	7,924.58	762.21	15,074.20
6	Paid-up equity share capital (face value Rs 5 each, fully paid up)	-	-	-	3,028.90	-	-	-	3,028.90
7	Other equity as shown in the Audited Balance Sheet of the previous year	-	-	-	86,270.07	-	-	-	85,596.22
8	Earnings Per Equity Share (EPS)								
	Basic	5.87	8.13	6.66	29.50	5.37	7.79	6.54	28.60
	Diluted	5.59	7.75	6.60	28.05	5.11	7.42	6.49	27.20

Notes:
1. The figures for quarter ended March 31, 2023 are the balancing figures between the audited figures in respect of the standalone and consolidated Ind AS financial statements for the year ended March 31, 2023 and the published unaudited year-to-date figures for nine months ended December 31, 2022.
2. The above is an extract of the detailed format of Quarterly / Annual Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of the financial results are available on the stock exchange websites (www.bseindia.com and www.nseindia.com) and on the company's website (www.gokaldasexports.com).

For Gokaldas Exports Ltd.
Sd/-
Sivaramakrishnan Ganapathi
Vice Chairman and Managing Director
DIN : 07954560

Place: Bengaluru
Date: August 07, 2023

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಎ.ಪಿ.ಎಂ.ಸಿ. ಬಿಲ್ಡಿಂಗ್ಸ್ ಒಳಾವರಣ, ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ಮೈನ್ ರೋಡ್, ದೊಡ್ಡಬಳ್ಳಾಪುರ – 561 203.

ಸಂಖ್ಯೆ : ಶಿಅಯೋ/ದೊಪುರ/ಟಿ.ಆರ್.ಪಿನ್–ಟೆಂಡರ್/2023–24 ದಿ : 02–08–2023

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

1) ಶಿಶು ಅಭಿವೃದ್ಧಿ ಯೋಜನೆ, ದೊಡ್ಡಬಳ್ಳಾಪುರ ತಾಲ್ಲೂಕು ಇಲ್ಲಿಯ 386 ಅಂಗನವಾಡಿ ಕೇಂದ್ರಗಳಿಗೆ 2023–24 ನೇ ಸಾಲಿಗೆ ಆಹಾರ ಸಾಮಗ್ರಿಗಳನ್ನು ಸಾಗಾಣಿಕೆ ಮಾಡಲು. 2) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ 2023–24 ನೇ ಸಾಲಿಗೆ ಪೂರಕ ಪೌಷ್ಠಿಕ ಆಹಾರ ತಯಾರಿಸಲು ಬೇಕಾಗುವ ಪಡಿತರ ಅಕ್ಕಿ ಮತ್ತು ಗೋಧಿಯನ್ನು ಭಾರತ ಆಹಾರ ನಿಗಮ, ಕೆ.ಆರ್. ಪುರ ಅಥವಾ ಶೈಲ ಮಾಲೂರು ಗೋದಾಮಿನಿಂದ ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕು ಎಂ.ಎಸ್.ಪಿ.ಸಿ. ಘಟಕ ಬೂದಿಹಾಲ್ ಗ್ರಾಮ್, ನೆಲಮಂಗಲ ತಾಲ್ಲೂಕು ಇಲ್ಲಿಗೆ ಸಾಗಾಣಿಕೆ ಮಾಡಲು ಅರ್ಹ ಗುತ್ತಿಗೆದಾರರಿಂದ ಕ್ವಿಂಟಾಲ್ ಒಂದಕ್ಕೆ ಲೋಡಿಂಗ್ ಮತ್ತು ಅನ್‌ಲೋಡಿಂಗ್, ಅಮಾಲಿ ವೆಚ್ಚ ಸೇರಿ ತಗಲುವ ವೆಚ್ಚ ಬಗ್ಗೆ ಮೊಹರಾದ ಲಕೋಟೆಗಳಲ್ಲಿ ಟೆಂಡರ್‌ನ್ನು ಕರೆಯಲಾಗಿದೆ. ದೊಡ್ಡಬಳ್ಳಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಮಹಿಳಾ ಮಂಡಳಿ / ಸ್ವ–ಸಹಾಯ ಗುಂಪು ಮತ್ತು ಗ್ರಾಮ ಸಮುದಾಯಗಳಿಂದ ಕೆ.ಟಿ.ಪಿ.ಪಿ. ಕಾಯ್ದೆ ಇ–ಪ್ರೊಕ್ಯೂರ್‌ಮೆಂಟ್‌ನ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮತ್ತು ಸಂಬಂಧಪಟ್ಟ ದಾಖಲಾತಿಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಈ ವೆಬ್‌ಸೈಟ್‌ನಲ್ಲಿ https://www.eproc.karnataka.gov.in ಪಡೆಯಬಹುದು.

1) ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ : 03–08–2023, 2) ತಾಂತ್ರಿಕ ಮತ್ತು ಆರ್ಥಿಕ ಬಿಡ್ ಸಲ್ಲಿಸಲು ಅಂತಿಮ ದಿನಾಂಕ : 17–08–2023, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 18–08–2023, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 19–08–2023.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ದೊಡ್ಡಬಳ್ಳಾಪುರ ಕಛೇರಿ ವೇಳೆಯಲ್ಲಿ ಪಡೆಯಬಹುದು, ದೂರವಾಣಿ ಸಂಖ್ಯೆ : 080–2762 5228, 91645 85278 ರಲ್ಲಿ ಸಂಪರ್ಕಿಸಬಹುದು.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ದೊಡ್ಡಬಳ್ಳಾಪುರ.
ವಾಸಾಸಂಇ/ಉನಿಕ/ಬೆಂಗ್ರಾಜ/ಮಣಿಪಾಲ್/815/2023–24

ಕುವೆಂಪು ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿಯಮಿತ
(ನೊಂದಣಿ ಸಂಖ್ಯೆ ಸನಿ.44, ನೋಂದಣಿ 21/19776/95-96 ದಿನಾಂಕ 04-09-1995)
ನಂ.899/ಎ, 1ನೇ ಅಡ್ಡ ರಸ್ತೆ, 3ನೇ ಮುಖ್ಯ ರಸ್ತೆ, 'ಡಿ' ಬ್ಲಾಕ್, (ಶನಿಮಹಾತ್ಮ ದೇವಸ್ಥಾನದ ಹಿಂಭಾಗ), ರಾಜಾಜಿನಗರ 2ನೇ ಹಂತ, ಬೆಂಗಳೂರು-10, ದೂ: 08023422918

–: ಚುನಾವಣಾ ಪ್ರಕಟಣೆ :–

ಕುವೆಂಪು ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ, ನಂ. 899/ಎ, 1ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, 'ಡಿ' ಬ್ಲಾಕ್, (ಶನಿಮಹಾತ್ಮ ದೇವಸ್ಥಾನದ ಹಿಂಭಾಗ), ರಾಜಾಜಿನಗರ 2ನೇಹಂತ, ಬೆಂಗಳೂರು–10 ಇದರ ಚುನಾವಣಾ ದಿನಾಂಕದಿಂದ 05 ವರ್ಷಗಳ ಅವಧಿಗೆ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಚುನಾಯಿಸಲು ದಿನಾಂಕ: 20/08/2023ರ ಭಾನುವಾರದಂದು ಬೆಳಿಗ್ಗೆ 9.00 ರಿಂದ ಸಂಜೆ 4.00 ಗಂಟೆಯವರೆಗೆ ಶ್ರೀ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ ನಿ, (ಬಸವೇಶ್ವರ ಶಿಕ್ಷಣ ಸಂಸ್ಥೆಗಳು) 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು–10, ಚುನಾವಣೆ ನಡೆಸಲು ಉದ್ದೇಶಿಸಿ ಚುನಾವಣಾ ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ ಹಾಗೂ ಸದರಿ ವೇಳಾ ಪಟ್ಟಿಯನ್ನು ಈಗಾಗಲೇ ಸಂಘದ ಎಲ್ಲಾ ಅರ್ಹ ಸದಸ್ಯರಿಗೆ ಕಳುಹಿಸಲಾಗಿದೆ.

1. ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ನಾಮ ಪತ್ರ ಸಲ್ಲಿಸಲು ಪ್ರಾರಂಭದ ದಿನಾಂಕ: 05/08/2023 ರಂದು ಬೆಳಿಗ್ಗೆ: 10–00 ರಿಂದ ಸಾಯಂಕಾಲ: 05–00 ಘಂಟೆಯವರೆಗೆ.
2. ನಾಮ ಪತ್ರ ಸಲ್ಲಿಸಲು ಕಡೆಯ ದಿನಾಂಕ: 13/08/2023 ರಂದು ಬೆಳಿಗ್ಗೆ: 10–00 ರಿಂದ ಸಾಯಂಕಾಲ: 05–00 ಘಂಟೆಯವರೆಗೆ.
3. ನಾಮಪತ್ರಗಳ ಪರಿಶೀಲನೆ ದಿನಾಂಕ:14/08/2023 ರಂದು ಬೆಳಿಗ್ಗೆ 11 ಗಂಟೆಗೆ.
4. ದಿನಾಂಕ:15/08/2023 ರಂದು ನಾಮಪತ್ರಗಳನ್ನು ಹಿಂಪಡೆಯಲು ಕಡೆಯ ದಿನಾಂಕ 15–08–2023ರ ಮಧ್ಯಾಹ್ನ 3–00 ಗಂಟೆಯ ವರೆವಿಗೆ, ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ ದಿನಾಂಕ : 15–08–2023ರ ಮಧ್ಯಾಹ್ನ 3–00ಗಂಟೆ ನಂತರ, ಅಗತ್ಯವಿದ್ದಲ್ಲಿ ಅಭ್ಯರ್ಥಿಗಳಿಗೆ, ರಿಟರ್ನಿಂಗ್ ಅಧಿಕಾರಿಗಳಿಂದ ಚುನಾವಣಾ ಚಿಹ್ನೆಗಳನ್ನು ಹಂಚಿಕೆ 15–08–2023ರ ಮಧ್ಯಾಹ್ನ 3–00ಗಂಟೆಯ ನಂತರ, ಮತಗಳ ಎಣಿಕೆ ಹಾಗೂ ಚುನಾವಣಾ ಫಲಿತಾಂಶ ಪ್ರಕಟಣೆ ದಿನಾಂಕ : 20–08–2023ರಂದು ಮತದಾನದ ನಂತರ.
5. ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಸದಸ್ಯರು ನಾಮಪತ್ರ ಹಾಗೂ ಅವುಗಳನ್ನು ಹಿಂಪಡೆಯುವ ನಮೂನೆಗಳನ್ನು ಸಂಘದ ಕೆಲಸದ ವೇಳೆಯಲ್ಲಿ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಂದ ಪಡೆಯಬಹುದು.
6. ಸದಸ್ಯರು ಸಂಘದಿಂದ ನೀಡಲಾದ ಗುರುತಿನ ಚೀಟಿಯನ್ನು ಮತ ಚಲಾಯಿಸುವ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸಬೇಕು.

ಆದಾಗ್ಯೂ, ಯಾವುದೇ ಕಾರಣದಿಂದ ಚುನಾವಣೆಯಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಸದಸ್ಯರಿಗೆ ವೇಳಾಪಟ್ಟಿಯು ತಲುಪದೇ ಇದ್ದಲ್ಲಿ, ಈ ಪ್ರಕಟಣೆಯನ್ನು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರುತ್ತಾ ಇತರೆ ಯಾವುದೇ ಹೆಚ್ಚಿನ ಮಾಹಿತಿಗಾಗಿ ರಿಟರ್ನಿಂಗ್ ಆಫೀಸರ್/ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರನ್ನು ಸಂಪರ್ಕಿಸಲು ಕೋರಿದೆ.

ಸಹಿ/–
ರಿಟರ್ನಿಂಗ್ ಆಫೀಸರ್ ಎಂ.ವಿ.ರಂಗಸ್ವಾಮಿ
ಕುವೆಂಪು ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ.
ರಾಜಾಜಿನಗರ 2ನೇ ಹಂತ, ಬೆಂಗಳೂರು–10

ಸ್ಥಳ: ಬೆಂಗಳೂರು
ದಿನಾಂಕ: 08–08–2023

ಐವರು ಅಪರಾಧಿಗಳಿಗೆ ಗರಿಷ್ಠ ನಾಲ್ಕು ವರ್ಷ ಜೈಲುಶಿಕ್ಷೆ • ಸಿಬಿಐ ವಿಶೇಷ ನ್ಯಾಯಾಲಯ ಆದೇಶ

ಬ್ಯಾಂಕ್‌ಗೆ ವಂಚನೆ: ₹23 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾಗೆ ₹ 18.34 ಕೋಟಿ ವಂಚಿಸಿದ್ದ ಪ್ರಕರಣದಲ್ಲಿ ಐವರು ಅಪರಾಧಿಗಳಿಗೆ ನಗರದ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯ, ಒಂದರಿಂದ ನಾಲ್ಕು ವರ್ಷಗಳ ಜೈಲು ಶಿಕ್ಷೆ ಹಾಗೂ ₹ 23.02 ಕೋಟಿ ದಂಡ ವಿಧಿಸಿದೆ.

ನೆಕ್ಸೋಫಿಟ್ ಇನ್ಫೋಟೆಕ್ ಲಿಮಿಟೆಡ್ ಕಂಪನಿಯಿಂದ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾಗೆ ₹ 18.34 ಕೋಟಿ ವಂಚನೆಯಾಗಿತ್ತು. ಬ್ಯಾಂಕ್‌ನ ದೂರು ಆಧರಿಸಿ ಸಿಬಿಐ, 2013ರಲ್ಲಿ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಿತ್ತು. ಈ ಪ್ರಕರಣದ ವಿಚಾರಣೆ ಪೂರ್ಣಗೊಳಿಸಿರುವ ನ್ಯಾಯಾಲಯ, ಐವರಿಗೆ ₹ 22 ಕೋಟಿ ಹಾಗೂ ನೆಕ್ಸೋ ಫಿಟ್ ಕಂಪನಿಗೆ ₹ 1 ಕೋಟಿ ದಂಡ ವಿಧಿಸಿದೆ.

‘ನೆಕ್ಸೋಫಿಟ್ ಕಂಪನಿಯ ನಿರ್ದೇಶಕ ಜಿ. ಧನಂಜಯ ರೆಡ್ಡಿಗೆ ನಾಲ್ಕು ವರ್ಷಗಳ ಜೈಲು ಶಿಕ್ಷೆ ಮತ್ತು ₹ 10 ಕೋಟಿ ದಂಡ ವಿಧಿಸಲಾಗಿದೆ. ಇದೇ ಕಂಪನಿಯ ಕೆ. ಸತ್ಯನಾರಾಯಣ ಎಂಬುವವರಿಗೆ ನಾಲ್ಕು ವರ್ಷಗಳ ಜೈಲು ಶಿಕ್ಷೆ ಮತ್ತು ₹ 12 ಕೋಟಿ ದಂಡ ವಿಧಿಸಲಾಗಿದೆ. ಇದೇ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಜಿ. ನಿರ್ಮಲಾ ಎಂಬುವವರಿಗೆ ಒಂದು ವರ್ಷ ಜೈಲು ಶಿಕ್ಷೆ ಹಾಗೂ ₹ 1 ಲಕ್ಷ ದಂಡ ವಿಧಿಸಲಾಗಿದೆ’ ಎಂದು ಸಿಬಿಐ ವಕ್ತಾರರು ತಿಳಿಸಿದ್ದಾರೆ.

‘ನೆಕ್ಸೋಫಿಟ್ ಕಂಪನಿಯ ಮತ್ತೊಬ್ಬ ನಿರ್ದೇಶಕ ದಿನೇಶ್ ಕಾವೂರು ಎಂಬುವವರಿಗೆ ಒಂದು ವರ್ಷ ಜೈಲು ಶಿಕ್ಷೆ ಮತ್ತು ₹ 1 ಲಕ್ಷ ದಂಡ ವಿಧಿಸಲಾಗಿದೆ. ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾದ ಕಂಟೋನ್ಮೆಂಟ್ ಶಾಖೆಯ ಸಹಾಯಕ ಪ್ರಧಾನ ವ್ಯವಸ್ಥಾಪಕರಾಗಿದ್ದ ರಾಜೇಶ್ ಕುಮಾರ್ ಮಾಧವ್ ಅವರಿಗೆ ಒಂದು ವರ್ಷ ಜೈಲು ಮತ್ತು ₹ 50,000 ದಂಡ ವಿಧಿಸಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ದುಬೈನ್ ಕಂಪನಿಯೊಂದರಿಂದ ಸಾಫ್ಟ್‌ವೇರ್ ಆಮದು ಮಾಡಿಕೊಳ್ಳು-ವುದಕ್ಕಾಗಿ ನೆಕ್ಸೋಫಿಟ್ ಕಂಪನಿಯು ಯುನೈಟೆಡ್ ಬ್ಯಾಂಕ್‌ನಿಂದ ₹ 16 ಕೋಟಿ ಸಾಲ ಪಡೆದಿತ್ತು. ಇದಕ್ಕಾಗಿ ಸ್ಥಿರಾಸ್ತಿ ಮತ್ತು ಸಾಫ್ಟ್‌ವೇರ್ ಮೇಲಿನ ಒಡೆತನದ ಆಧಾರವನ್ನು ನೀಡಿತ್ತು. ಸಾಫ್ಟ್‌ವೇರ್ ಆಮದಿಗಾಗಿ ಪಡೆದ ಸಾಲದ ಮೊತ್ತವನ್ನು ಕಂಪನಿ ನಿರ್ದೇಶಕರು ಅನ್ಯ ಉದ್ದೇಶಕ್ಕಾಗಿ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಿದ್ದರು. ನಂತರ ಸಾಲ ಮರುಪಾವತಿ ಮಾಡದೆ ಬ್ಯಾಂಕ್‌ಗೆ ವಂಚಿಸಿದ್ದರು ಎಂದು 2013ರ ಡಿಸೆಂಬರ್ 30ರಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರೋಪ-ಪಟ್ಟಿಯಲ್ಲಿ ಸಿಬಿಐ ದೋಷಾರೋಪ ಹೊರಿಸಿತ್ತು. ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ದೋಷಮುಕ್ತಗೊ-ಳಿಸಿ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ. ಒಬ್ಬ ಆರೋಪಿ ವಿಚಾರಣಾ ಹಂತದಲ್ಲೇ ಮೃತಪಟ್ಟಿದ್ದರು ಎಂದು ತನಿಖಾ ಸಂಸ್ಥೆ ತಿಳಿಸಿದೆ.

ಆರೋಪಿಗಳ ಪತ್ತೆಗೆ ನೆರವಾದ ಡ್ಯಾಶ್‌ಬೋರ್ಡ್ ಕ್ಯಾಮೆರಾ

ಮುರಳಿ

ರಘು

ಬೆಂಗಳೂರು: ‘ರಸ್ತೆಯಲ್ಲಿ ಬೈಕ್ ಮುಂದೆ ಸಾಗಲು ಜಾಗ ನೀಡಲಿಲ್ಲ’ ಎಂಬ ಕಾರಣಕ್ಕೆ ಸಾಫ್ಟ್‌ವೇರ್ ಎಂಜಿನಿಯರ್ ಪ್ರಯಾಣಿಸು ತ್ತಿದ್ದ ಕಾರನ್ನು ಅಡ್ಡಗಟ್ಟಿ ಬೆದರಿಕೆ ಹಾಕಿ ಪುಂಡಾಟ ನಡೆಸಿದ್ದ ಇಬ್ಬರು ಆರೋಪಿಗಳನ್ನು ಕಾರಿನ ಡ್ಯಾಶ್‌ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿ ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಟೆನಿಸ್ ತರಬೇತುದಾರ ಮುರಳಿ ನೆಲ್ಲೂರುಹಳ್ಳಿ ಹಾಗೂ ಎಲೆಕ್ಟ್ರಿಕ್ ಕೆಲಸ ಮಾಡುತ್ತಿರುವ ರಘು ನೆಲ್ಲೂರ ಹಳ್ಳಿ ಬಂಧಿತ ಆರೋಪಿಗಳು.

ಆಗಸ್ಟ್ 5ರಂದು ಸಾಫ್ಟ್‌ವೇರ್ ಎಂಜಿನಿಯರ್ ಪ್ರಿಯಂದತ್ತ ಅವರು ತಮ್ಮ ಕಾರಿನಲ್ಲಿ ವೈಟ್‌ಫೀಲ್ಡ್‌ನ ವೈದೇಹಿ ಆಸ್ಪತ್ರೆ ಕಡೆಯಿಂದ ರಾಮಗೊಂಡನಹಳ್ಳಿ ಸಮೀಪದ ಮಧುರಂ ನಗರಕ್ಕೆ ತೆರಳುತ್ತಿದ್ದರು. ಪ್ರಿಯಂದತ್ತ ಅವರ ಪತ್ನಿ ಲಲಿತಾ ಅವರು ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಮಾರ್ಗ ಮಧ್ಯದಲ್ಲಿ ಕಾರನ್ನು ಹಿಂದಿಕ್ಕಲು ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿಗಳು ಮುಂದಾಗಿದ್ದರು. ಈ ವೇಳೆ ಬೈಕ್ ಮುಂದೆ ಸಾಗಲು ಜಾಗ ಕೊಡಲಿಲ್ಲ ಎಂಬ ಕಾರಣಕ್ಕೆ ಕೆರಳಿದ ಆರೋಪಿಗಳು ಸ್ವಲ್ಪ ದೂರ ಮುಂದಕ್ಕೆ ಸಾಗಿ ಕಾರನ್ನು ಅಡ್ಡಗಟ್ಟಿ-ದ್ದರು.

‘ಕಾರಿನ ಎದುರು ನಿಂತು ಆರೋಪಿಗಳು ಕೂಗಾಡಿದ್ದರು. ಬಳಿಕ ಕಾರಿನ ಬಳಿ ಬಂದು ದಂಪತಿಗೆ ಕಾರಿನಿಂದ ಇಳಿಯುವಂತೆ ಬೆದರಿಕೆ ಹಾಕಿದ್ದರು. ಕೆಳಗೆ ಇಳಿಯದಿರುವಾಗ ಕಾರಿನ ಗಾಜು ಒಡೆಯಲು ಯತ್ನಿಸಿದ್ದರು. ಕೊಲೆ ಬೆದರಿಕೆ ಹಾಕಿದ್ದರು. ಸಾರ್ವಜನಿಕರು, ಸಾಫ್ಟ್‌ವೇರ್ ಎಂಜಿನಿಯರ್ ಅವರ ನೆರವಿಗೆ ಬರುತ್ತಿದ್ದಂತೆಯೇ ಆರೋಪಿಗಳು ಅಲ್ಲಿಂದ ಕಾಲ್ಕಿತ್ತಿದ್ದರು. ಆರೋಪಿಗಳ ಪುಂಡಾಟ ನಡೆಸುವ ದೃಶ್ಯಾವಳಿಗಳು ಕಾರಿನ ಡ್ಯಾಶ್‌ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದ್ದವು. ಈ ದೃಶ್ಯಾವಳಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದವು. ಅದನ್ನು ವ್ಯಕ್ತಿಯೊಬ್ಬರು ಪೊಲೀಸರಿಗೆ ಟ್ಯಾಗ್ ಮಾಡಿ ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು. ಅಲ್ಲದೇ ದಂಪತಿಯೂ ಪೊಲೀಸರಿಗೆ ದೂರು ನೀಡಿದ್ದರು’ ಎಂದು ಮೂಲಗಳು ಹೇಳಿವೆ.

ನಗರದಲ್ಲಿ ಕಾರುಗಳಿಗೆ ಈ ರೀತಿಯ ಕ್ಯಾಮೆರಾ ಅಳವಡಿಸಿಕೊಳ್ಳುವಂತೆ ಪೊಲೀಸರು ಸಲಹೆ ನೀಡಿದ್ದಾರೆ.

₹ 9 ಲಕ್ಷ ಮೌಲ್ಯದ ಚಿನ್ನಾಭರಣ ಕಳವು: ಆರೋಪಿ ಬಂಧನ

ಬೆಂಗಳೂರು: ರಾಜರಾಜೇಶ್ವರಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಚಿನ್ನಾಭರಣ ಕಳವು ಪ್ರಕರಣದ ಆರೋಪಿ ಗೊಲ್ಲರಹಟ್ಟಿಯ ಮಹೇಶ್ವರಸ್ವಾಮಿ ಅವರನ್ನು ಬಂಧಿಸಲಾಗಿದೆ.

ಬಂಧಿತ ಆರೋಪಿಯಿಂದ ₹ 9 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿ-ಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕರುಣಕುಮಾರ್ ಎಂಬುವರ ಮನೆಯಲ್ಲಿ ಚಿನ್ನಾಭರಣ ಕಳವು ನಡೆದಿತ್ತು. ಅವರು ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ಮನೆಯಲ್ಲಿ ಯಾರೂ ಇಲ್ಲ ಎಂಬುದನ್ನು ಆರೋಪಿ ಪತ್ತೆ ಮಾಡುತ್ತಿದ್ದ. ನಂತರ, ಬಾಗಿಲು ಒಡೆದು ಚಿನ್ನಾಭರಣ ದೋಚಿ ಪರಾರಿಯಾಗುತ್ತಿದ್ದ ಎಂದು ಪೊಲೀಸರು ಹೇಳಿದರು.

ಪತ್ನಿ ಕೊಲೆ: ಪೊಲೀಸರಿಗೆ ಶರಣಾದ ಆರೋಪಿ ಪತಿ

ಪ್ರಜಾವಾಣಿ ವಾರ್ತೆ

ತಾರಾನಾಥ್

ಬೆಂಗಳೂರು: ಅಕ್ಕಪಕ್ಕದ ನಿವಾಸಿಗಳು ಪತ್ನಿಯನ್ನು ನಿಂದಿಸುತ್ತಾರೆ ಎನ್ನುವ ಕಾರಣಕ್ಕೆ ಆಕೆಯನ್ನು ಕೊಲೆ ಮಾಡಿ ಪರಾರಿಯಾಗಿದ್ದ ಪತಿ ವೈಟ್‌ಫೀಲ್ಡ್ ಪೊಲೀಸರಿಗೆ ಶರಣಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸರಿತಾ (35) ಕೊಲೆಯಾದವರು. ಆಕೆಯ ಕುತ್ತಿಗೆಗೆ ಹಗ್ಗದಿಂದ ಬಿಗಿದು ಕೊಲೆ ಮಾಡಿದ್ದ ತಾರಾನಾಥ್, ಎರಡು ದಿನಗಳಿಂದ ತಲೆಮರೆಸಿಕೊಂಡಿದ್ದರು.

ಮಂಗಳವಾರ ವೈಟ್‌ಫೀಲ್ಡ್ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದರು.

ದಕ್ಷಿಣ ಕನ್ನಡದಿಂದ ದಂಪತಿ ಕೆಲವು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ನೆಲೆಸಿದ್ದರು. ಇಲ್ಲಿ ಪಾನೀಪುರಿ ವ್ಯಾಪಾರ ನಡೆಸಿ ಬದುಕು ಕಟ್ಟಿಕೊಂಡಿದ್ದರು.

‘ಮುಲ್ಕಿಯಲ್ಲಿ ನೆಲೆಸಿದ್ದಾಗ ಸರಿತಾ ವಿರುದ್ಧ ಕಳವು ಪ್ರಕರಣ ದಾಖಲಾಗಿತ್ತು. ಈ ಪ್ರಕರಣ ಮಾಹಿತಿ ತಿಳಿದಿದ್ದ ಅಕ್ಕಪಕ್ಕ ನಿವಾಸಿಗಳು ಹಾಗೂ ಪಾನೀಪುರಿ ವ್ಯಾಪಾರ ನಡೆಸುವ ಸ್ಥಳದಲ್ಲಿನ ವ್ಯಾಪಾರಿಗಳು ಪತ್ನಿಯನ್ನು ಕಳ್ಳಿ ಕಳ್ಳಿ ಎಂದು ಹೀಯಾ-ಳಿಸುತ್ತಿದ್ದರು. ಇದರಿಂದ ನನಗೆ ಬೇಸ-ರವಾಗುತ್ತಿತ್ತು. ಬೇರೆಯವರು ನಿಂದನೆ ಮಾಡುತ್ತಿರುವುದನ್ನು ಸಹಿಸಿಕೊಳ್ಳಲು ಸಾಧ್ಯವಾಗದೆ ಪತ್ನಿ ಕೊಲೆ ಮಾಡಿದ್ದೇನೆ ಎಂದು ಶರಣಾದ ಆರೋಪಿ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸರು ಹೇಳಿದರು.

ಮರಕ್ಕೆ ಬೈಕ್ ಡಿಕ್ಕಿ: ಸವಾರ ಸಾವು

ಬೆಂಗಳೂರು: ಯಶವಂತಪುರದ ಬಳಿ ಮರಕ್ಕೆ ಬೈಕ್‌ವೊಂದು ಡಿಕ್ಕಿ ಹೊಡೆದ ಪರಿಣಾಮ ಸವಾರರೊಬ್ಬರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ವೇಗವಾಗಿ ಬಂದ ಬೈಕ್ ನಿಯಂತ್ರಣ ಕಳೆದುಕೊಂಡ ಪರಿಣಾಮ ಮರಕ್ಕೆ ಡಿಕ್ಕಿಯಾಗಿ ತ್ರಿಪುರಾದ ಬಿಜ್ಜು ಸೇಲ್ಫ ಎಂಬುವರು ಮೃತಪಟ್ಟಿದ್ದಾರೆ.

ಇವರು ಮಲ್ಲೇಶ್ವರದ ಕಾಂಗ್ರೆಸ್ ಮುಖಂಡರೊಬ್ಬರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು.

ತ್ರಿಪುರಾದಿಂದ ಬಂದಿದ್ದ ಸ್ನೇಹಿತರೊಬ್ಬರನ್ನು ಯಶವಂತಪುರ ರೈಲು ನಿಲ್ದಾಣಕ್ಕೆ ಬಿಟ್ಟು ಮಲ್ಲೇಶ್ವರಕ್ಕೆ ವಾಪಸ್ ಬರುವಾಗ ಈ ಘಟನೆ ನಡೆದಿದೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ವತಿಯಿಂದ ಬೆಳಗಾವಿಯಲ್ಲಿ ಮಂಗಳವಾರ ಆಯೋಜಿಸಿದ್ದ ಛತ್ರಪತಿ ಶಾಹೂ ಮಹಾರಾಜ ಜಯಂತಿ ಅಂಗವಾಗಿ ‘ಶೋಷಿತ ಸಮುದಾಯಗಳ ಸಾಮಾಜಿಕ ನ್ಯಾಯಕ್ಕಾಗಿ ಸಂಕಲ್ಪ ಸಮಾವೇಶ’ದಲ್ಲಿ ಅಪಾರ ಜನರು ಭಾಗವಹಿಸಿದ್ದರು /ಪ್ರಜಾವಾಣಿ ಚಿತ್ರ

ಅಕ್ರಮ ವಾಸ: ಮೂವರು ಬಾಂಗ್ಲಾ ಪ್ರಜೆಗಳ ಸೆರೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಮೂವರು ಬಾಂಗ್ಲಾದೇಶದ ಪ್ರಜೆಗಳನ್ನು ರಾಷ್ಟ್ರೀಯ ತನಿಖಾ ದಳದ ಮಾಹಿತಿ ಮೇರೆಗೆ ಬೆಳ್ಳಂದೂರು ಪೊಲೀಸರು ಬಂಧಿಸಿದ್ದಾರೆ.

ಖಲೀಲ್ ಚಪರಾಸಿ, ಅಬ್ದುಲ್ ಖಾದರ್, ಮೊಹಮ್ಮದ್ ಜಹೀದ್ ಬಂಧಿತರು. ಆರೋಪಿಗಳು ಸುಮಾರು ಹತ್ತು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದರು. ಬೆಳ್ಳಂದೂರಿನಲ್ಲಿ ನೆಲೆಸಿದ್ದರು ಎಂದು ಪೊಲೀಸರು ತಿಳಿಸಿದರು.

ಖಲೀಲ್ ಮತ್ತು ಮೊಹಮ್ಮದ್ ಜಹೀದ್ ಹೌಸ್‌ಕೀಪಿಂಗ್ ಹಾಗೂ ಚಿಂದಿ ಆಯುವ ಕೆಲಸ ಮಾಡಿಕೊಂಡಿದ್ದರು. ಅಕ್ರಮವಾಗಿ ಗಡಿಭಾಗದಲ್ಲಿ ಮಧ್ಯಸ್ಥರ ಮೂಲಕ ದೇಶಕ್ಕೆ ಬಂದಿರುವುದು ತನಿಖೆಯಿಂದ ಗೊತ್ತಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ಘಟನೆ

ಸಿಬ್ಬಂದಿ ವರ್ತನೆ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಇಮಿಗ್ರೇಷನ್ ವಿಭಾಗದ ಸಿಬ್ಬಂದಿ ದುರ್ವತನೆ ತೋರಿದ್ದಾರೆ ಎಂದು ಸೌದಿ ಆರೇಬಿಯಾದಲ್ಲಿ ಸಿವಿಲ್ ಎಂಜಿನಿಯರ್ ಆಗಿರುವ ಬೆಂಗಳೂರಿನ ನಳಿನಿ ಮುರ್ಕುಟ್ಟ ಎಂಬುವರು ಆರೋಪಿಸಿದ್ದಾರೆ.

ಈ ಕುರಿತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ದೂರು ನೀಡಿರುವ ಅವರು, ‘ಜುಲೈ 22ರ ಬೆಳಿಗ್ಗೆ ಬಹರೇನ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಾಗ ಲ್ಯಾಂಡಿಂಗ್ ಕಾರ್ಡ್ ಭರ್ತಿ ಮಾಡಬೇಕಾದ ಸಮಯದಲ್ಲಿ ಇಮಿಗ್ರೇಷನ್ ಕೌಂಟರ್ ಮಹಿಳಾ ಸಿಬ್ಬಂದಿ ತಿರಸ್ಕಾರದಿಂದ ವರ್ತಿಸಿದ್ದು ಆಘಾತಕ್ಕೆ ಕಾರಣವಾಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

> **ಆರೋಪ ಕುರಿತು ಪರಿಶೀಲಿಸಲಾಗುವುದು. ಸಿಸಿಟಿವಿ ಕ್ಯಾಮೆರಾದಲ್ಲಿ ಎಲ್ಲವೂ ರೆಕಾರ್ಡ್ ಆಗಿದ್ದು ಅದನ್ನು ತಪಾಸಣೆ ಮಾಡಿದ ನಂತರವಷ್ಟೇ ಪ್ರತಿಕ್ರಿಯಿಸಲು ಸಾಧ್ಯ**
> **ಇಮಿಗ್ರೇಷನ್ ವಿಭಾಗ,** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

‘ಲ್ಯಾಂಡಿಂಗ್ ಕಾರ್ಡ್ ಯಾವ ರೀತಿ ಭರ್ತಿ ಮಾಡಬೇಕು ಎಂಬುದು ನಿಮಗೆ ತಿಳಿದಿಲ್ಲವೇ ಎಂದು ಎಲ್ಲರ ಮುಂದೆ ಚೀರಾಡಿ ಸಾರ್ವಜನಿಕವಾಗಿ ಅವಮಾನ ಮಾಡಿದ್ದಾರೆ. ನನ್ನೊಂದಿಗೆ ಇದ್ದ ಒಂಬತ್ತು ವರ್ಷದ ಮಗ ಈ ಘಟನೆಯಿಂದ ತೀವ್ರ ಮುಜುಗರಕ್ಕೆ ಒಳಗಾಗಿದ್ದಾನೆ’ ಎಂದು ದೂರಿದ್ದಾರೆ.

‘ಮತ್ತೊಂದು ಕೌಂಟರ್‌ಗೆ ತೆರಳಿದರೂ ಅಲ್ಲಿಗೂ ಬಂದ ಮಹಿಳಾ ಸಿಬ್ಬಂದಿ ನನ್ನ ತಪ್ಪನ್ನು ದೊಡ್ಡದಾಗಿ ಬಿಂಬಿಸಿ ಅಪಹಾಸ್ಯ ಮಾಡಿದ್ದಾರೆ. ನಂತರ ಅಲ್ಲಿದ್ದ ಪುರುಷ ಅಧಿಕಾರಿ ಲ್ಯಾಂಡಿಂಗ್ ಕಾರ್ಡ್ ತೆಗೆದುಕೊಂಡು ಇಮಿಗ್ರೇಷನ್ ಪ್ರಕ್ರಿಯೆ ಪೂರ್ಣಗೊಳಿಸಿ-ದರು’ ಎಂದು ತಿಳಿಸಿದ್ದಾರೆ.

‘ವಿಶ್ವದ 30ಕ್ಕೂ ಹೆಚ್ಚಿನ ದೇಶಗಳಲ್ಲಿ ಪ್ರಯಾಣ ಮಾಡಿದ್ದೇನೆ. ಆದರೆ, ಇಂತಹ ಕೆಟ್ಟ ಅನುಭವ ಎಲ್ಲಿಯೂ ಆಗಿಲ್ಲ. ತಾಯ್ನಾಡಿನಲ್ಲಿಯೇ ಈ ರೀತಿ ಅವಮಾನ ಎದುರಿಸುತ್ತೇನೆ ಎಂದು ಎಣಿಸಿರಲಿಲ್ಲ’ ಎಂದು ಬೇಸರಿಸಿದ್ದಾರೆ.

‘ಏರ್ ಸೇವಾ’ ವೆಬ್ ಸೈಟ್ ಹಾಗೂ ಭಾರತೀಯ ರಾಯಭಾರ ಕಚೇರಿಗೆ ದೂರು ಸಲ್ಲಿಸಿದ್ದರೂ ಇದುವರೆಗೂ ಉತ್ತರ ಸಿಕ್ಕಿಲ್ಲ ಎನ್ನುತ್ತಾರೆ ನಳಿನಿ.

ಕ್ಷಮೆಗೆ ಆಗ್ರಹ: ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಇಮಿಗ್ರೇಷನ್ ಸಿಬ್ಬಂದಿ ಮಾನವೀಯ ರೀತಿಯಲ್ಲಿ ಕೆಲಸ ಮಾಡಲು ತರಬೇತಿ ಅವಶ್ಯ ಇದೆ. ಈ ಘಟನೆಗೆ ಸಿಬ್ಬಂದಿ ಕ್ಷಮೆಯಾಚನೆ ಮಾಡಬೇಕೆಂದು ನಳಿನಿ ಆಗ್ರಹಿಸಿದ್ದಾರೆ.

ಮೈಸೂರಿನ ಜ್ಞಾನಪ್ರಕಾಶ ಸ್ವಾಮೀಜಿ ಪ್ರಶ್ನೆ

‘ಹೆಣ್ಣಿನ ಶೋಷಣೆ ನಡೆಯುವ ದೇಶ ವಿಶ್ವಗುರು ಆಗುವುದೇ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಮಾಡಿದ್ದೇವೆ ಎಂದು ನೀವು ಬೀಗುತ್ತಿದ್ದೀರಿ. ಆದರೆ, ಮಣಿಪುರದಲ್ಲಿ ಹೆಣ್ಣುಮ-ಗಳನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿದ್ದೀರಿ. ಇಂಥ ದೇಶ ವಿಶ್ವಗುರು ಆಗಲು ಸಾಧ್ಯವೇ’ ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಪ್ರಶ್ನಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ವತಿಯಿಂದ ಛತ್ರಪತಿ ಶಾಹು ಮಹಾರಾಜ ಅವರ 149ನೇ ಜಯಂತಿ ಪ್ರಯುಕ್ತ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ‘ಶೋಷಿತ ಸಮುದಾಯಗಳ ಸಾಮಾಜಿಕ ನ್ಯಾಯಕ್ಕಾಗಿ ಸಂಕಲ್ಪ ಸಮಾವೇಶ’ದ ಸಾನ್ನಿಧ್ಯವಹಿಸಿ ಅವರು ಮಾತನಾಡಿದರು.

‘ಮಹಾಭಾರತದಲ್ಲಿ ದ್ರೌಪದಿಯ ಸೀರೆ ಸೆಳೆಯುವಾಗ ಕೃಷ್ಣ ಪರಮಾತ್ಮ ಬಂದು ಸೀರೆ ಕೊಡುತ್ತಾನೆ. ಆದರೆ, ಮಣಿಪುರದಲ್ಲಿ ಮಹಿಳೆಯನ್ನು ಬೆತ್ತಲೆ ಮಾಡಿದಾಗ ಶ್ರೀಕೃಷ್ಣ ಏಕೆ ಬರಲಿಲ್ಲ? ಪುರೋಹಿತರು ಸುಳ್ಳು ದೇವತೆಗಳನ್ನು ಸೃಷ್ಟಿಮಾಡಿ ಸಾವಿರಾರು ವರ್ಷಗಳಿಂದ ಶೋಷಿತ್ತಲೇ ಬಂದಿದ್ದಾರೆ’ ಎಂದು ಟೀಕಿಸಿದರು.

‘2024ರ ಚುನಾವಣೆಯಲ್ಲಿ ಗೆದ್ದು ಹೊಸ ಸಂವಿಧಾನ ಜಾರಿಗೆ ತರಲು ಮನುವಾದಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ’ ಎಂದು ಟೀಕಿಸಿದ ಅವರು, ‘ನಾವು ಈ ನೆಲದ ಮೂಲ ನಿವಾಸಿಗಳು. ನಮ್ಮ ಬಣ್ಣ ಕಪ್ಪು. ವರ್ಣಭೇದ ಮುಂದುವರಿಸಿಕೊಂಡು ಬಂದವರೆಲ್ಲ ಬ್ರಿಟಿಷ್ ಮಿಶ್ರತಳಿಗಳು. ಶೋಷಿತರೆಲ್ಲ ಒಂದಾಗಿ ನಿಂತರೆ ಈ ಮಿಶ್ರತಳಿಗಳು ದೇಶ ಬಿಡುತ್ತವೆ’ ಎಂದರು.

ಸಮಾವೇಶ ಉದ್ಘಾಟಿಸಿದ ಸಾಮಾಜಿಕ ಹೋರಾಟಗಾರ್ತಿ ಅಕ್ಷತಾ ಮಾತನಾಡಿ, ‘ತುಂಬು ಗರ್ಭಿಣಿಯನ್ನು ಕಾಡಿಗೆ ಅಟ್ಟಿದವರು ಆದರ್ಶ ಆಗಬೇಕೋ, ಮತದಾನ ಹಕ್ಕು ನೀಡಿದವರು ಆದರ್ಶ ಆಗಬೇಕೋ ಎಂದು ಯೋಚಿಸಿ. ಈ ದೇಶದಲ್ಲಿ ತುಳಿತ ಕ್ಕೊಳಗಾದ ಎಲ್ಲರನ್ನೂ ಒಂದು ಗೂಡಿಸಿ ದೊಡ್ಡ ಚಳವಳಿ ಮಾಡಬೇಕಿದೆ. ಅದಕ್ಕಾಗಿ ಸರ್ವಸಮ್ಮತ ಸಂಘಟನೆ ಬೇಕಿದೆ’ ಎಂದು ಅಭಿಪ್ರಾಯಪಟ್ಟರು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ನಿರ್ವಹಣಾ ಕೇಂದ್ರ ದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 9ರಂದು ಮತ್ತು 11ರಂದು ಬೆಳಿಗ್ಗೆ 10ರಿಂದ ಸಂಜೆ 3ಗಂಟೆವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾ-ಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

9ರಂದು ವ್ಯತ್ಯಯವಾಗುವ ಸ್ಥಳಗಳು: ಅವಲಹಳ್ಳಿ, ನಂದಿ ಗಾರ್ಡನ್ ಅಪಾರ್ಟ್ ಮೆಂಟ್ಸ್, ಅಂಜನಾಪುರ ಗ್ರಾಮ, ಬ್ರೂಕ್ಸ್ ಲೇಔಟ್, ದೀಪಕ ಲೇಔಟ್, ವಡ್ಡರಪಾಳ್ಯ, ಶ್ರೀನಿವಾಸರೆಡ್ಡಿ ಲೇಔಟ್, ಬ್ಯಾಂಕ್ ಆಫೀಸರ್ ಲೇಔಟ್, ತಲಘಟ್ಟಪುರ, ವಕೀಲ್ ಲೇಔಟ್, ಶೋಭಾ ಅಪಾರ್ಟ್‌ಮೆಂಟ್ಸ್, ರಾಘವಪಾಳ್ಯ, ಕೆಂಬತ್ತಹಳ್ಳಿ ಸುತ್ತಮುತ್ತಲಿನ ಪ್ರದೇಶಗಳು.

11ರಂದು ವ್ಯತ್ಯಯವಾಗುವ ಸ್ಥಳಗಳು: ಡಿಎಲ್‌ಎಫ್ ಅಪಾರ್ಟ್‌ಮೆಂಟ್, ಬೇಗೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

35 ಸಾವಿರ ಪೆಟ್ಟಿಗೆ ಕಿಂಗ್‌ಫಿಷರ್ ಬಿಯರ್ ಮಾರಾಟಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುನೈಟೆಡ್ ಬ್ರೀವರೀಸ್‌ನ (ಯು.ಬಿ) ನಂಜನಗೂಡು ಘಟಕದಲ್ಲಿ ಜುಲೈ 15ರಂದು ಬಾಟ್ಲಿಂಗ್ ಮಾಡಲಾದ 35,000 ಪೆಟ್ಟಿಗೆ ಕಿಂಗ್‌ಫಿಶರ್ ಬ್ರ್ಯಾಂಡ್‌ನ ಬಿಯರ್ ಬಾಟಲಿಯ ತಳದಲ್ಲಿ ಬಗ್ಗಡ ಪತ್ತೆಯಾಗಿದ್ದು, ಮಾರಾಟ ನಿರ್ಬಂಧಿಸಿ ಅಬಕಾರಿ ಇಲಾಖೆ ಆದೇಶ ಹೊರಡಿಸಿದೆ.

ಜುಲೈ 15ರಂದು ಬಾಟ್ಲಿಂಗ್ ಮಾಡಲಾದ ಬಿಯರ್ ಬಾಟಲಿಗಳನ್ನು ಕರ್ನಾಟಕ ರಾಜ್ಯ ಪಾನೀಯ ನಿಗಮದ ಮೂಲಕ ಸರಬರಾಜು ಮಾಡಲಾಗಿದೆ. ನಿಗಮದ ಗೋದಾಮುಗಳಲ್ಲಿ ಈ ಬಾಟಲಿಗಳ ಸಂಗ್ರಹವಿದೆ. ಮದ್ಯಪಾನಿಗಳ ಆರೋಗ್ಯದ ಹಿತದೃಷ್ಟಿಯಿಂದ ಈ ಬಿಯರ್ ಬಾಟಲಿಗಳ ಮಾರಾಟವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಎಂದು ವಿವಿಧ ಜಿಲ್ಲೆಗಳಲ್ಲಿ ಅಬಕಾರಿ ಅಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

‘ರಾಜ್ಯದಲ್ಲಿ ಉತ್ಪಾದನೆಯಾ-ಗುವ ವಿವಿಧ ಬ್ರ್ಯಾಂಡ್‌ನ ಮದ್ಯದ ಪ್ರತಿ ಬ್ಯಾಚ್‌ನ ಎರಡು ಬಾಟಲಿಗಳನ್ನು ಉತ್ಪಾದಕರು ಅಬಕಾರಿ ಆಯುಕ್ತರ ಕಚೇರಿಗೆ ಪರೀಕ್ಷೆಗಾಗಿ ಸಲ್ಲಿಸಬೇಕು. ಕಿಂಗ್‌ಫಿಶರ್ ಬಿಯರ್ ಬಾಟಲಿಗಳನ್ನೂ ಪರೀಕ್ಷೆಗಾಗಿ ಒದಗಿಸಲಾಗಿತ್ತು. ಅದನ್ನು ಪರೀಕ್ಷಿಸಿದಾಗ ಬಗ್ಗಡ ಪತ್ತೆಯಾಗಿದ್ದು, ಕುಡಿಯಲು ಯೋಗ್ಯವಲ್ಲ ಎಂಬ ವರದಿ ಬಂದಿದೆ’ ಎಂದು ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಉತ್ಪನ್ನದಲ್ಲಿ ದೋಷವಿಲ್ಲ ಎಂದು ಯು.ಬಿ ಬ್ರೀವರೀಸ್ ಪ್ರತಿನಿಧಿಗಳು ಸಮಜಾಯಿಷಿ ನೀಡಿದ್ದಾರೆ. ಮಾದರಿಗಳನ್ನು ಎರಡನೇ ಬಾರಿ ಪರೀಕ್ಷೆಗೆ ಒಳಪಡಿಸಲು ನಿರ್ಧರಿಸಲಾಗಿದೆ. ವರದಿ ಬರುವವರೆಗೂ ಮಾರಾಟಕ್ಕೆ ನಿರ್ಬಂಧ ಮುಂದುವರಿಯಲಿದೆ’ ಎಂದರು.

35,000 ಪೆಟ್ಟಿಗೆಗಳಷ್ಟು ಕಿಂಗ್‌ಫಿಶರ್ ಬಿಯರ್‌ನ ಒಟ್ಟು ಮೌಲ್ಯ ₹ 19 ಕೋಟಿಗಳಷ್ಟಿದೆ ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ಅಂದಾಜು ಮಾಡಿದ್ದಾರೆ.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಡಳಿತ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560 065
ದೂರವಾಣಿ : 23332521, 23330153 [259]
No. AO/RT/11/62/Backlog Teaching Post/2023-24 Date: 07-08-2023
ಪ್ರಕಟಣೆ
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ 02 ಬ್ಯಾಕ್‌ಲಾಗ್ ಬೋಧಕರ ಹುದ್ದೆಗಳನ್ನು ಪ್ರಾಧ್ಯಾಪಕ ವರ್ಗ: **Agril. Engg.-1 Post (SC), Plant Pathology-1 Post (ST),** ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಭರ್ತಿ ಮಾಡಲಾದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ: 07–09–2023 ಆಗಿರುತ್ತದೆ. ಪ್ರಕಟಣೆ, ವಿದ್ಯಾರ್ಹತೆ ಹಾಗೂ ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ **(website: www.uasbangalore.edu.in)** ಡೌನ್‌ಲೋಡ್ ಮಾಡಿಕೊಳ್ಳಬಹುದು.
ಆದೇಶದ ಮೇರೆಗೆ
ಸಹಿ/– ಆಡಳಿತಾಧಿಕಾರಿಗಳು

ನಗರದ ಎಂ.ಜಿ.ರಸ್ತೆಯ ತಿಂಡಿ–ತಿನಿಸು, ಸಿಗರೇಟು ಮಾರಾಟ ಮಳಿಗೆಯೊಂದರಲ್ಲಿ ಕಾನೂನು ಮಾಪನ ಶಾಸ್ತ್ರ ಇಲಾಖೆ ಅಧಿಕಾರಿಗಳು ಸಂಜೆ ದಿಢೀರ್ ತಪಾಸಣೆ ನಡೆಸಿ ಮಾರಾಟ ಮಾಡುತ್ತಿದ್ದ ವಸ್ತುಗಳನ್ನು ಪರಿಶೀಲಿಸಿದರು –ಪ್ರಜಾವಾಣಿ ಚಿತ್ರ

ಶೀಘ್ರ ಗುಜರಿ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುಜರಿ ನೀತಿ ಅಡಿಯಲ್ಲಿ ಶೀಘ್ರ ‘ನೋಂದಾಯಿತ ವಾಹನಗಳ ಗುಜರಿ ಸೌಲಭ್ಯ ಕೇಂದ್ರ’ (ಆರ್‌ವಿಎಸ್‌ಎಫ್) ಸ್ಥಾಪನೆಯಾಗಲಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಜಯಪುರದಲ್ಲಿ ಮೊದಲ ಆರ್‌ವಿಎಸ್‌ಎಫ್ ಸ್ಥಾಪನೆಯಾಗಲಿದೆ. ಇದು ವಾಹನಗಳನ್ನು ಗುಜರಿಗೆ ಹಾಕುವ ಕೇಂದ್ರವಾಗಲಿದೆ.

ಹಳೆಯ ವಾಹನಗಳನ್ನು ನಾಶಪಡಿಸುವ ನೀತಿಯ ಅಡಿಯಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ.

ಕೇಂದ್ರ ಸರ್ಕಾರ ಸ್ವಾಮ್ಯದ ಎಂಎಸ್‌ಟಿಸಿ ಮತ್ತು ಮಹಿಂದ್ರಾ ಅಕ್ಸೆಲೊ ಜಂಟಿ ಸಹಭಾಗಿತ್ವದ ‘ಮಹಿಂದ್ರಾ ಸೆರೊ’ ಈ ಸೌಲಭ್ಯವನ್ನು ಸ್ಥಾಪಿಸಲಿದೆ.

ಗುಜರಿ ನೀತಿ ಅಡಿಯಲ್ಲಿ 64 ಆರ್‌ವಿಎಸ್‌ಎಫ್ ಕೇಂದ್ರಗಳನ್ನು ದೇಶದಾದ್ಯಂತ ಸ್ಥಾಪಿಸಲಾಗಿದೆ. ರಾಜ್ಯದಲ್ಲಿ ತಡವಾಗಿ ಈ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ರಾಜ್ಯದಲ್ಲಿ ಮೂರು ಆರ್‌ವಿಎಸ್‌ಎಫ್‌ಗಳನ್ನು ಈ ವರ್ಷ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇತರ ಎರಡು ಕೇಂದ್ರಗಳು ತುಮಕೂರು ಜಿಲ್ಲೆಯ ಕೊರಟಗೆರೆ ಮತ್ತು ಕೊಪ್ಪಳದಲ್ಲಿ ಸ್ಥಾಪನೆಯಾಗಲಿವೆ. ಆರ್‌ಸಿ (ನೋಂದಣಿ ಪ್ರಮಾಣಪತ್ರ) ಮತ್ತು ಎಫ್‌ಸಿ(ಫಿಟ್ನೆಸ್ ಪ್ರಮಾಣ ಪತ್ರ) ನವೀಕರಿಸದ 15 ವರ್ಷಗಳಿಗಿಂತಲೂ ಹಳೆಯದಾದ ಎಲ್ಲ ಸರ್ಕಾರಿ ವಾಹನಗಳು ಮತ್ತು ಖಾಸಗಿ ವಾಹನಗಳನ್ನು ಈ ಕೇಂದ್ರದಲ್ಲಿ ಗುಜರಿಗೆ ಹಾಕಲಾಗುವುದು ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

‘ಸುಮಾರು ಹತ್ತು ಸಾವಿರ ಸರ್ಕಾರಿ ವಾಹನಗಳನ್ನು ಗುಜರಿಗೆ ಹಾಕಬೇಕಾಗಬಹುದು’ ಎಂದು ತಿಳಿಸಿದ್ದಾರೆ.

E-book today at www.marutisuzuki.com or visit your nearest Maruti Suzuki dealership. | For bulk orders, please contact: shubham.mittal@maruti.co.in

MARUTI SUZUKI AUTHORISED DEALERS: BENGALURU: VARUN MOTORS: MALLESHWARAM, HEBBAL, INFANTRY ROAD, RAJANAKUNTE PH: 78991 00200. **KALYANI:** MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI, DABASPETE : 95909 90011. **KATARIA:** KANAKAPURA ROAD, PH: 78990 40000. **MANDOVI:** BASAVANAGUDI, ST JOHNS ROAD, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. **PRATHAM:** HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. **RNS MOTORS:** YESHWANTHPUR, BOMMANAHALLI, NELAMANGALA, PH: 9538965804. **SURAKSHAA CAR CARE:** ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. **BIMAL:** ITPL ROAD, YELAHANKA, BANASHANKARI, VARTHUR, DOMLUR, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA, VIJAYAPURA, PERASANDRA PH: 080-30693069. **TUMKUR: SAKETH:** TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus, Gold coin offer and corporate offer (wherever applicable) on selected models/ variants. Above mentioned savings amount is the value of maximum savings on selected models. *Gold coin offer is applicable on select models/variants only on bookings of vehicle on or before 17th August, 2023. ***Terms and conditions apply. Finance scheme details mentioned in the advertisement are at the sole discretion of the financier and terms and conditions as specified by the financier shall apply. Credit at the sole discretion of the Bank. ^100% on-road funding is provided by select financiers only. For more details, please contact your nearest ARENA dealership. Features and accessories shown may not be part of standard fitment. Black Glass Shade on the vehicle is due to the lighting effect. Images used are for illustration purposes only. Car color may vary due to printing on paper. Offers vary across variants. Maruti Suzuki India Limited reserves the right to discontinue offers without notice. Above offers are valid till 31st August, 2023.

ಲೋಕಸಭೆ ಚುನಾವಣೆಗೆ ಸಿದ್ಧರಾಗಿ: ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರು ಮತ್ತು ಜಿಲ್ಲಾ ಸಚಿವರ ನಡುವಿನ ಸಮನ್ವಯತೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಯಚೂರು, ವಿಜಯಪುರ, ಕೊಪ್ಪಳ, ಹಾವೇರಿ, ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳ ಪಕ್ಷದ ಶಾಸಕರ ಜೊತೆ ಮಂಗಳವಾರ ಸಭೆ ನಡೆಸಿದರು.

ಆರು ಜಿಲ್ಲೆಗಳ ಶಾಸಕರು ಮತ್ತು ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರ ಜೊತೆ ಸುಮಾರು 8 ಗಂಟೆ ಚರ್ಚೆ ನಡೆಸಿದ ಮುಖ್ಯಮಂತ್ರಿ, ಅವರ ಬೇಡಿಕೆಗಳನ್ನು ಆಲಿಸಿ ಕೆಲವು ಸಲಹೆ, ಸೂಚನೆಗಳನ್ನು ನೀಡಿದರು. ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು, ಅನಗತ್ಯ ಅಸಮಾಧಾನ, ಪರಸ್ಪರ ಸಮನ್ವಯತೆ ಮತ್ತು ಮುಂಬರುವ ಲೋಕಸಭಾ ಚುನಾವಣೆ ಕುರಿತು ಚರ್ಚೆ ನಡೆಯಿತು.

'ಏನೇ ಭಿನ್ನಾಭಿಪ್ರಾಯಗಳಿದ್ದರೂ ಎಲ್ಲವನ್ನೂ ಬದಿಗಿಟ್ಟು, ಮುಂಬರುವ ಲೋಕಸಭೆ ಚುನಾವಣೆಯನ್ನು ಒಗ್ಗಟ್ಟಿನಿಂದ ಎದುರಿಸಬೇಕಿದೆ. ವಿಧಾನಸಭೆ ಚುನಾವಣೆಯಲ್ಲಿ ಬಂದ ಗೆಲುವನ್ನು ಮುಂದುವರಿಸಲು ಸಂಘಟಿತವಾಗಿ ಕೆಲಸ ಮಾಡಬೇಕಿದೆ. ಸಚಿವರ ಕಾರ್ಯವೈಖರಿ ಸೇರಿದಂತೆ ಎಲ್ಲವನ್ನೂ ಪಕ್ಷದ ವರಿಷ್ಠರು ಗಮನಿಸುತ್ತಿದ್ದಾರೆ' ಎಂದು ಶಾಸಕರಿಗೆ ಮುಖ್ಯಮಂತ್ರಿ ಕಿವಿಮಾತು ಹೇಳಿದ್ದಾರೆ.

6.1 ಲಕ್ಷಕ್ಕೆ ಏರಿದ ದೈನಂದಿನ ಮೆಟ್ರೊ ಪ್ರಯಾಣಿಕರ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ನಾಲ್ಕು ತಿಂಗಳಿನಲ್ಲಿ ನಮ್ಮ ಮೆಟ್ರೊದ ದೈನಂದಿನ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಜುಲೈನಲ್ಲಿ ನಿತ್ಯ ಸರಾಸರಿ 6.11 ಲಕ್ಷ ಮಂದಿ ಸಂಚರಿಸಿದ್ದಾರೆ. ಇದು ಈವರೆಗಿನ ದಾಖಲೆಯಾಗಿದೆ.

ಜುಲೈನಲ್ಲಿ 17 ದಿನ ಸರಾಸರಿ 6.2 ಲಕ್ಷ ಪ್ರಯಾಣಿಕರು ಮೆಟ್ರೊ ಬಳಸಿದ್ದಾರೆ. ಈ ವರ್ಷದ ಜನವರಿಗೆ ಹೋಲಿಕೆ ಮಾಡಿದರೆ ಇದು ಶೇ 16 ರಷ್ಟು ಅಧಿಕ. ಏಪ್ರಿಲ್‌ನಿಂದ ಜುಲೈ ತಿಂಗಳವರೆಗೆ ಒಟ್ಟು ನಾಲ್ಕು ತಿಂಗಳು, ಪ್ರಯಾಣಿಕರ ಸಂಖ್ಯೆ ಈ ಹಿಂದಿನ ತಿಂಗಳಿಗಿಂತ ಹೆಚ್ಚಳವಾಗಿದೆ.

ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗುವುದು ನಮ್ಮ ಮೆಟ್ರೊ ದಕ್ಷ ಹಾಗೂ ವಿಶ್ವಾಸಾರ್ಹವಾಗಿರುವುದರ ಪ್ರತೀಕ
ಬಿಎಂಆರ್‌ಸಿಎಲ್

ಆಗಸ್ಟ್ ಮಾಸಾಂತ್ಯದಲ್ಲಿ ಕೆ.ಆರ್ ಪುರ-ಬೈಯಪ್ಪನಹಳ್ಳಿ (2.1 ಕಿ.ಮಿ) ಹಾಗೂ ಕೆಂಗೇರಿ-ಚಲ್ಲಘಟ್ಟ (1.9 ಕಿ.ಮಿ) ಮಾರ್ಗ ಕಾರ್ಯಾಚರಣೆಗೆ ಮುಕ್ತವಾಗಲಿದ್ದು, ಆ ವೇಳೆಗೆ ದೈನಂದಿನ ಪ್ರಯಾಣಿಕರ ಸಂಖ್ಯೆ 7.5 ಲಕ್ಷಕ್ಕೆ ಏರಿಕೆಯಾಗುವ ವಿಶ್ವಾಸವನ್ನು ಬಿಎಂಆರ್‌ಸಿಎಲ್ ವ್ಯಕ್ತಪಡಿಸಿದೆ. ಈ ಎರಡೂ ಮಾರ್ಗಗಳಲ್ಲಿ ಬಿಎಂಆರ್‌ಸಿಎಲ್ ಈಗಾಗಲೇ ಪ್ರಾಯೋಗಿಕ ಸಂಚಾರ ಆರಂಭಿಸಿದೆ.

ಡಾ. ವಸುಂಧರಾ ಭೂಪತಿಗೆ 'ಆರೋಗ್ಯ ಸಾಹಿತ್ಯ ಪ್ರಶಸ್ತಿ'

ಬೆಂಗಳೂರು: ಕರ್ನಾಟಕ ಸಮುದಾಯ ಆರೋಗ್ಯ ಸಂಸ್ಥೆ ನೀಡುವ 'ಸಮುದ್ಧ ಸಮುದಾಯ ಆರೋಗ್ಯ ಸಾಹಿತ್ಯ ಪ್ರಶಸ್ತಿ'ಗೆ ಲೇಖಕಿ ಡಾ.ವಸುಂಧರಾ ಭೂಪತಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭವು ಇದೇ 11ರಂದು ಕೆಂಪೇಗೌಡ ವಿಜ್ಞಾನ ಸಂಸ್ಥೆಯಲ್ಲಿ ನಡೆಯಲಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಡಾ. ಟಿ. ಎಸ್. ರಂಗನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೈಕೋರ್ಟ್ ನಿರ್ದೇಶನದಂತೆ ಕ್ರಮ: ಡಿ.ಕೆ. ಶಿವಕುಮಾರ್

ಅನಧಿಕೃತ ಫ್ಲೆಕ್ಸ್: ₹50 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅನಧಿಕೃತವಾಗಿ ಫ್ಲೆಕ್ಸ್‌ಗಳನ್ನು ಅಳವಡಿಸಿದರೆ ಬಿಬಿಎಂಪಿ ₹ 50 ಸಾವಿರ ದಂಡ ವಿಧಿಸಲಿದೆ.

ಹೈಕೋರ್ಟ್ ನಿರ್ದೇಶನದಂತೆ ಬೆಂಗಳೂರು ನಗರದಲ್ಲಿ ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಅನಧಿಕೃತ ಫ್ಲೆಕ್ಸ್‌ಗಳಿಗೆ ನಿರ್ಬಂಧ ಹೇರಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

'ಅನಧಿಕೃತ ಫ್ಲೆಕ್ಸ್ ತೆರವಿಗೆ ಹೈಕೋರ್ಟ್ ಮೂರು ವಾರಗಳ ಗಡುವು ನೀಡಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ಗೆ ಸಂಬಂಧಿಸಿದ ಎಲ್ಲ ಅನಧಿಕೃತ ಫ್ಲೆಕ್ಸ್‌ಗಳನ್ನು ನಿಷೇಧಿಸಲಾಗುವುದು.

ಈ ವಿಚಾರವಾಗಿ ಸಚಿವರು ಹಾಗೂ ನಾಯಕರಿಗೆ ಮನವಿ ಮಾಡಿದ್ದೇನೆ. ಫ್ಲೆಕ್ಸ್ ನಿಷೇಧ ಕುರಿತು ಮುಂದಿನ ದಿನಗಳಲ್ಲಿ ನೀತಿ ರೂಪಿಸಲಾಗುವುದು' ಎಂದರು.

'ಇನ್ನು ಮುಂದೆ ಜನ್ಮದಿನ, ಶ್ರದ್ಧಾಂಜಲಿ, ಶುಭ ಸಂದೇಶ, ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ವಿಚಾರ ಸೇರಿದಂತೆ ಯಾವುದೇ ಅನಧಿಕೃತ ಫ್ಲೆಕ್ಸ್ ಹಾಕುವಂತಿಲ್ಲ. ಇದಕ್ಕೆ ಎಲ್ಲ ಪಕ್ಷಗಳು ಹಾಗೂ ನಾಗರಿಕರು ಸಹಕರಿಸಬೇಕು. ಸರ್ಕಾರದಿಂದ ಫ್ಲೆಕ್ಸ್ ಹಾಕುವುದಿದ್ದರೆ, ಸಮಯ, ಅಳತೆ, ಸ್ಥಳ ನಿಗದಿ ಮಾಡಿ ಅನುಮತಿ ನೀಡಲಾಗುವುದು. ಇದಕ್ಕೂ ನೀತಿ ರೂಪಿಸಲಾಗುವುದು. ಈಗಾಗಲೇ ನಗರದಲ್ಲಿ 59 ಸಾವಿರ ಅನಧಿಕೃತ ಫ್ಲೆಕ್ಸ್, ಬ್ಯಾನರ್ ತೆರವುಗೊಳಿಸಲಾಗಿದೆ. 134 ದೂರುಗಳು ಬಂದಿದ್ದು, 40 ಎಫ್‌ಐಆರ್ ದಾಖಲಿಸಲಾಗಿದೆ' ಎಂದು ವಿವರಿಸಿದರು.

ಅವಧಿ ವಿಸ್ತರಣೆ: 'ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಸುರಂಗ ರಸ್ತೆ, ಮೇಲ್ಸೇತುವೆ ಸೇರಿದಂತೆ ಪರಿಹಾರ ಯೋಜನೆಗಳ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಇದಕ್ಕಾಗಿ ಬಿಡಿಎ ಹಾಗೂ ಬಿಬಿಎಂಪಿ ಮೂಲಕ ಆಸಕ್ತಿಯನ್ನು ವ್ಯಕ್ತಪಡಿಸಲು ಅವಕಾಶ ನೀಡಲಾಗಿತ್ತು. ಅದರ ಅವಧಿ ಮುಕ್ತಾಯಗೊಂಡಿತ್ತು. ಹೆಚ್ಚಿನ ಸಂಸ್ಥೆಗಳು ಇದರಲ್ಲಿ ಭಾಗವಹಿಸಲು ಆಸಕ್ತಿ ತೋರಿರುವ ಹಿನ್ನೆಲೆಯಲ್ಲಿ ಈ ಅವಧಿಯನ್ನು ಒಂದು ವಾರ ಅಂದರೆ ಅ.17 ರವರೆಗೆ ವಿಸ್ತರಿಸಲಾಗಿದೆ. ಗ್ಲೋಬಲ್ ಟೆಂಡರ್ ಕರೆಯಲಾಗಿದೆ' ಎಂದರು.

'ದೆಹಲಿಯಲ್ಲಿ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿಯಾಗಿದ್ದೇನೆ. ನೆಲಮಂಗಲ, ಬಳ್ಳಾರಿ, ಕೋಲಾರ, ಹೊಸೂರು, ಮೈಸೂರು ಮಾರ್ಗದ ರಾಷ್ಟ್ರೀಯ ಹೆದ್ದಾರಿಗಳು ಬೆಂಗಳೂರು ಸಂಪರ್ಕಿಸುವ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಿದೆ. ಇದರ ಪರಿಹಾರಕ್ಕೆ ಕೇಂದ್ರ ಸರ್ಕಾರ ಕೂಡ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಸಚಿವರಿಗೆ ಮನವಿ ಮಾಡಿದ್ದೇನೆ. ಯೋಜನೆ ರೂಪಿಸಿ ಪ್ರಸ್ತಾವ ಸಲ್ಲಿಸುವಂತೆ ಅವರು ತಿಳಿಸಿದ್ದಾರೆ' ಎಂದು ವಿವರಿಸಿದರು.

ಮಲಯಾಳ ಚಿತ್ರ ನಿರ್ದೇಶಕ ಸಿದ್ಧಿಕ್ ನಿಧನ

ಕೊಚ್ಚಿ (ಪಿಟಿಐ): ಮಲಯಾಳದ ಹೆಸರಾಂತ ನಿರ್ದೇಶಕ, ಚಿತ್ರಕಥೆ ಲೇಖಕ ಸಿದ್ಧಿಕ್ (63) ಮಂಗಳವಾರ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಅವರು ತಿಂಗಳಿನಿಂದ ಇಲ್ಲಿನ ಅಮೃತಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಅವರ ಶ್ವಾಸಕೋಶ ಮತ್ತು ಹೃದಯ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ. ಬೆಳಿಗ್ಗೆ 9.13ಕ್ಕೆ ಹೃದಯಾಘಾತವಾಯಿತು. ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ನೇಹಿತ ಲಾಲ್ ಜೊತೆಗೂಡಿ ಅವರು ಮಲಯಾಳದಲ್ಲಿ ಅನೇಕ ಯಶಸ್ವಿ ಚಿತ್ರಗಳನ್ನು ನೀಡಿದ್ದರು. ಚಿತ್ರರಂಗದಲ್ಲಿ ಈ ಜೊಡಿ ಸಿದ್ಧಿಕ್ ಲಾಲ್ ಎಂದೇ ಹೆಸರಾಗಿತ್ತು.

ಎಸ್. ನಿಜಲಿಂಗಪ್ಪ ಮನೆ ಸ್ವಾಧೀನ: ಮುಖ್ಯಮಂತ್ರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಮನೆಯನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದು, ಸಂರಕ್ಷಿಸುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಕಾಂಗ್ರೆಸ್ ಮುಖಂಡ ಮೋಹನ್ ಕುಮಾರ್ ಕೊಂಡಜ್ಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ನಿಜಲಿಂಗಪ್ಪ ಅವರ ಪುಣ್ಯತಿಥಿಯ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ನಿಜಲಿಂಗಪ್ಪ ಪ್ರತಿಮೆಗೆ ಮುಖ್ಯಮಂತ್ರಿ ಮಾಲಾರ್ಪಣೆ ಮಾಡಿದರು. ಆಗ ಮನವಿ ಪತ್ರ ಸಲ್ಲಿಸಿದ್ದ ಮೋಹನ್, ಮಾಜಿ ಮುಖ್ಯಮಂತ್ರಿಯ ಮನೆಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ವಿಳಂಬ ಆಗಿರುವುದನ್ನು ಗಮನಕ್ಕೆ ತಂದರು.

'ನಿಜಲಿಂಗಪ್ಪ ಅವರ ಮನೆಯನ್ನು ಸಂರಕ್ಷಿಸಲು ಹಾಗೂ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ, 4 ವರ್ಷಗಳಾದರೂ ಆದೇಶ ಕಾರ್ಯರೂಪಕ್ಕೆ ಬಂದಿಲ್ಲ. ಮನೆಯನ್ನು ಸರ್ಕಾರದ ವಶಕ್ಕೆ ಪಡೆಯುವುದಕ್ಕಾಗಿ ನಿಜಲಿಂಗಪ್ಪ ಅವರ ಮೊಮ್ಮಗ ವಿನಯ್ ಮತ್ತು ಕಿರಣ್ ಶಂಕರ್ ಅವರನ್ನು ಚಿತ್ರದುರ್ಗದ ಹಿಂದಿನ ಜಿಲ್ಲಾಧಿಕಾರಿ ಅಮೆರಿಕದಿಂದ ಕರೆಸಿಕೊಂಡಿದ್ದರು. ಆದರೆ, ಕೊನೆಗಳಿಗೆಯಲ್ಲಿ ಆಸ್ತಿಯನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳದೆ ನಿರ್ಲಕ್ಷ್ಯ ವಹಿಸಿದ್ದಾರೆ' ಎಂದು ಪತ್ರದಲ್ಲಿ ದೂರಿದ್ದಾರೆ.

ಈ ಎಲ್ಲ ಲೋಪಗಳನ್ನು ಸರಿಪಡಿಸಿ ನಿಜಲಿಂಗಪ್ಪ ಅವರ ಮನೆ ಖರೀದಿಸಿ, ಸಂರಕ್ಷಿಸಲು ಮುಖ್ಯ ಕಾರ್ಯದರ್ಶಿ ಮತ್ತು ಚಿತ್ರದುರ್ಗ ಜಿಲ್ಲಾಧಿಕಾರಿ ಜತೆ ಸಭೆ ನಡೆಸಿ ಪ್ರಕರಣವನ್ನು ಇತ್ಯರ್ಥಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

JOB FAIR FOR SENIOR CITIZENS
Nightingales Medical Trust organizes a free job fair for recently retired persons between 55-70 years, physically fit and interested to work. To be held on Sunday, 20th August at St. Joseph's University, Langford Town, from 10:00am to 4:00pm. Visit: www.nightingalesjobs60plus.com or call 9243737214 for more details.
Employers willing to employ seniors are most welcome.

Accounts & Finance

A MANUFACTURING Company at Peenya is looking for ACCOUNTANTS with minimum 2-3 years experience. Send resumes to: hrjhpl@gmail.com

Cook

'WANTED LADY cook cum attender Balija Sangha guest House RPC LYT Hampinagara, Bangalore, Phone: 9448476465'

Engg/ Production Technical

KBR INFRATECH Limited Bengaluru-560094. (kbrinfo@kbrinfra.com) Jobs Notification The Resumes/CV's can be submitted on or before 14/08/2023, for the Positions for our upcoming projects having the Qualification of BE/ B-Tech, M-Tech in Civil, (QA/QC, QS/ Planning, Design/ Process), Mechanical, Electrical, Structural with 5 to 15 Years' Experience specialized in STP & Water Supply/ Sewage projects.

Marketing & Sales

WANTED SALES Executive M/F for Marketing of Packaging Materials. Min Exp 5 Yrs Salary 30000/- Contact: shivanandvanijya@gmail.com /Mobile No: 9886302305

THE BANGALORE PRESS
(No. 88, Mysore Road, Chamarajapet, Bangalore-18)
REQUIRES

ROLE	REQUIREMENT
1. Marketing Manager	Graduates with experience in senior roles in consumer goods/ stationery/book marketing & fluency in Kannada & English
2. Marketing Officers	Matriculates with at least 2-3 years experience in filed sales of consumer goods / stationeries, etc.

Apply with your work experience & **expected salary**, to
bangalorepressjobs@gmail.com | 97422 59829

REQUIRED FIELD EXECUTIVES to monitor OOH Medias Hoarding, Bus-shelters,etc. Bangalore City every week.Candidates must have Two-wheeler and driving License Desktop/Laptop and basic Computer knowledge. Qualification required 12th pass.Salary Rs.14000+4000 petrol allowance Contact 09322132386 hari.timeoutdoor.ops@gmail.com www.timeoutdoormonitoring.com

I T

A PUBLIC Limited Company Registered office in Margoa, GOA Requires IT & NETWORK EXECUTIVE (Male)- Young, Dynamic, age group of 25-35 years Experience: 3-5 years in IT Profession with adequate software skills. Qualification: BCA/ MCA. Placement at Bangalore Unit, Karnataka Send your resume with passport size photo to Email: hraoffice2023@gmail.com

Hospital & Medical Jobs

WANTED MEDICAL DOCTOR, Master of Social Worker, Staff Nurses, Laboratory Technicians, Bachelor of Business Management. Walk-In Interview: Blood Bank, 8th Cross, Malleshwaram, Bangalore. Ph: 9448465835

MEDICO-PASTORAL ASSOCIATION, Bangalore requires 1.RESIDENTIAL NURSE, 2.FACILITY SUPERVISOR, 3.NURSING ATTENDANT. Please apply giving experience & salary expected to medicopastoralassociation@gmail.com before 21/08/2023

Teachers/ Professors

ENGLISH, SOCIAL Studies, PCM & D.Ed. Teachers Wanted. Contact: CAMLIN HIGH SCHOOL, 6th 'C' Main Hampinagar, Vijaynagar 2nd Stage Bangalore. Phone: 080-23301363

WANTED TEACHERS with D.Ed for Primary and B.Ed for High School English Medium School Salary Primary School Rs 20000/- High School Rs 25000/- Sri Rakum High School, 421/1, Sri Krishna temple Road IndiraNagar, 1st Stage, Bangalore- 560038 Tel: 080-25215705

GLOBAL ACADEMY FOR LEARNING Next Gen School
Near Global Village & R.V. Engineering College, R.R. Nagar, Bengalure - 59.
WE ARE **HIRING**
ONLY FEMALE STAFF
SECONDARY STAGE :
COMPUTER SCIENCE, PHYSICS
ART TEACHER & ACCOUNTANT
Candidates must have good communication skills in English and adequate Computer literacy skills..
Send your CV to contact@gaflschool.com
www.gaflschool.com
+ 91 88804 00900

WANTED MALE Candidates to teach English & Social Science for Classes VIII and IX. Timings-6.00 pm to 9.00 pm. Contact in person (5.00 pm- 6.00 pm on all working days) - Secretary, Deccan Educational Society®, No.95, 3rd Cross, Srirampuram, Bengaluru- 560021 (Near Sampige Theater, Malleswaram).

HOLY ANGEL'S High School Hampinagar, Vijayanagar, Bengaluru-560104. Phone:23404465/ 23202042 holyangels.highschoolrpclayout@gmail.com Requires Experienced Trained Teachers to handle English & Science for Primary Section for Academic year 2023-2024. STATE & ICSE. Qualification: B.A./B.Sc.,B.Ed. Only English medium candidates need apply.

WANTED ENGLISH MEDIUM Trained/ Untrained Lady Teachers to teach English/ EVS/ Kannada, Hindi for Classes 1 to 4. NTT Trained, COMPUTER FACULTY. Contact in person (10.00 am- 3.00 pm on all working days) - Secretary, Deccan Educational Society®, No.95, 3rd Cross, Srirampuram, Bengaluru- 560021 (Near Sampige Theater, Malleswaram).

WANTED MATHS And PT Teacher For Highschool Sagar Convent Kanakapura Main Bangalore 82 Near APS Engineering College Good Salary: 9342552428

WAYANAMAC EDUCATION TRUST®
DON BOSCO INSTITUTE OF TECHNOLOGY
(Approved by AICTE, Affiliated to VTU, Belagavi, NBA & NAAC Accredited)
KUMBALAGODU, MYSORE ROAD, BANGALORE – 560074.
Ph. : 080 - 28437028 / 29 / 30. Website: www.dbit.co.in

We are looking for talented, competent, qualified faculty & professionals for the following positions:
Professors, Associate Professors & Assistant Professors
In following disciplines:
- Artificial Intelligence & Machine Learning
- Artificial Intelligence & Data Science
- Computer Science & Engineering
- Electronics & Communication Engineering
- Information Science & Engineering
- Electrical & Electronics Engineering
- MBA - VTU
- Physics - Chemistry - Mathematics

NON - TEACHING STAFF
- Computer Programmer
- Foreman EEE
- Lab Instructors
- Asst. Librarian
- Drivers (Car & Bus)
- System Administrator
- Office Assistant
- Warden - Boys/Girls Hostel
- Placement Executive

- The institution provides professional work environment and ample opportunities for career development.
- Eligible candidates may please forward their profile with copies of testimonials and recent passport size photo to the Principal within 10 days from the date of this advertisement by post/courier only.
- Alternatively, eligible candidates can also E-mail their profile with all relevant details to recruitment@dbit.co.in.
- Salary commensurate with Qualification & Experience
- Professors with Ph.D qualification who have already attained superannuation are also eligible to apply.
- Adjunct faculty with 15 years of Industrial / Research / Teaching experience may also apply.
- Appropriate weightage will be given for candidates with Doctorate qualification.
- While forwarding the application, candidates are requested to superscribe the envelope, with the position for which the application is being made.

Principal

HARWARD Group of Institutions
Dasanapura, Tumkur Road, Bangalore North - 562123
WANTED
Integrated Faculties for PU College
Physics -NEET, JEE Level
TGT for CBSE School Mathematics M.Sc, B.Ed 5 years of experience.
Physical Director-M.P.Ed
Computer Science M.Sc, MCA
Marketing Executives -any Degree 3 yrs of Experience in Marketing Field
Please send CV to infoharwardints@gmail.com
9880112833
9945230286

Multiple Vacancy

POM Systems & Services Pvt. Ltd. JOB OPPORTUNITIES
25 Years Old Bangalore based Pioneers in Power Electronics and Solar Power Products requires the experienced Sales Personnel for Solar Panels, Solar Inverters etc for their Bangalore Branch at J C Road.
MANAGER MARKETING
5 to 6 years experience in Selling Solar Power Products.
ASSISTANT MANAGER
2 to 3 years experience in Selling Solar Power Products.
MARKETING EXECUTIVES
2 to 3 years experience in Selling Solar Power Products.
Call: 96633 70222
E-mail: info@pompower.in

OPPORTUNITY OF Career & Income for Retired Officials, Bankers, Teachers, CAs, Professionals, Homemakers. CALL: 8095301555

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Part-Time Jobs

TOP MNC COMPANY LICENSED BY GOVT. Restart Your 2nd Career Opportunity With Flexible Timings Age Limit 45yrs And Above: 7019215243/ 9886641282

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

REAL ESTATE SELLING

Farm House/ Land/ Resorts

Out-Station

3 GUNTAS situated in Goravanahalli Theetha Main Road. Koratagere Thaluk. Contact details 9480295874, 8884555566

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

INVEST IN successfully running business. Get reasonable returns on a regular basis with monthly Pdc: 7204070893

PUBLIC NOTICE

PUBLIC NOTICE
IN THE FAMILY COURT NO - 2 AT AHMEDABAD
Family Court, 613, 6th Floor, City Civi & Sessions Court Building, Lal Darwaja, Bhadra, Ahmedabad, Gujarat.
C. M. A. NO. 21 OF 2021.
O. W. No.768/2023. Exh. 14
PUBLIC SUMMONS
Applicant : VINAYAK BALCHANDRA NAIR AGE ABOUT - 36 YEAR, OCC. SERVICE RELIGION - HINDU
Present Resident : C/504, DEV PARADISE, B/H. BHULABHAI PARK - 3, CHANDKHEDA, AHMEDABAD.
Versus
Opponent : NATASHA ALAN MCGINN AGE ABOUT - ADULT, OCC. SERVICE RELIGION - CHRISTIAN
Present Resident : 132, FIRST FLOOR, LIGARAJAMPURAM, NR. GRECE GARDEN, NR. KOREAN CHURCH, ST. THOMAS TOWN, BENGALURU, KARNATAKA - 560084.
GUARDIAN & WARDS ACT, SECTION - 08.
The above named opponent as your whereabouts is not known, hence this summons is published. Whereas the above named applicant has instituted the above mentioned petition against you. You are hereby summoned to appear in this **Family Court No. 2** at Ahmedabad in person on 11th day of September, 2023 at 11.00 o'clock or as the day fixed for hearing of the petition.
You must be prepared to produce on that day, all the witnesses upon whose evidence and all the documents upon which you intend to rely in support of your defence.
Take notice that in default of your presence on the day, the petition will be heard in your absence.
Given under my hand and seal of the court, on this 02' day of August, 2023.
Prepared By: **Pankaj A. Parmar** Assistnt, Court No.2.
Compared By: **Dhiraj G. Joshi,** Sheristedar, Court No. 2.
By order,
Cha amauli . Dave Registrar, Family Court, Ahmedabad.

AUTOMOTIVE

Four Wheelers Selling

Others

QUOTATIONS REQUIRED for with/ without RC KA05 MU4115/ 2016/ VWjetta2.0 LTDI Highline/Accident vehicle. 9945642300

ADMISSION CORNER

NARGUND COLLEGE OF PHYSIOTHERAPY
1st B Main, Dattatreyanagar, BSK 3rd Stage, Bangalore
admission@nargund.edu.in · www.nargund.edu.in
Admissions Open 2023-24
for:
Bachelor of Physiotherapy
For Admissions, Call:
080 26720604, 7019425622
9886201746, 9739867524

Recognised by Govt. of Karnataka, Bangalore & The Indian Association of Physiotherapists.
Affiliated to RGUHS, Karnataka, Bangalore.

PERSONAL

Change of Name

I, MEENA.N.A wife of No.JC-438558M Rank: NB SUB Name Vasantha.K.P. R/a #9 Bethal Layout, 6th cross, Banjara Layout Horamavu Bengaluru-560043 have changed my name from MEENA to MEENA. N.A and declared that my correct Date of Birth is 11.08.1960 instead of 06.06.1966 vide affidavit dated:2.8.2023 sworn before Notary G.Dayananda, Bangalore

HANUMANT, FATHER/O, 14839619P, NK/MT, TAMBE ARVIND HANUMANT, Vill- Nirgudi, Phaltan, Satara, Maharashtra changed name HANUMANT to HANUMANT RAGHUNATH TAMBE, 08/08/2023, Notary K.V. Mani, Bangalore

I MADHULATHA C.K. W/O Sri. Harish Lingaiah Residing At No. 1/1, Neralu, Kanakapura Main Road, Vakil Garden City Extension, Thalaghattapura, Bengaluru-560062 Have Changed My Name To MADHULATHA HARISH Vide Affidavit Dated 07.08.2023 Sworn Before Jayalingayya Mudenoormath Advocate And Notary Bangalore.

I, BHAVNA SHARMA D/o.Late Satyavrat Sharma R/a,#I-1408, Mantri Tranquil, Gubbalala village,off Kanakapura Main Road, Bangalore -560061.have changed my Daughter's name from Deeksha Madhu Hosmane to Deeksha Madhu Vide affidavit dated:7.8.2023 before-Notary G.R.Rajanna, Bangalore

6495970K, NK/ASH, BALIREDDI SIVAJI, Vill - Kummara Palli, Murakada, Rambilli, Visakhapatnam, Andhra Pradesh changed son's name BALI REDDY CHARVIK to BALIREDDI CHARVIK, 05/08/2023, Notary K.V. Mani, Bangalore

I, BHAVNA MADHU D/o.Late Satyavrat Sharma R/a #I-1408, Mantri Tranquil Gubbalala Village,off Kanakapura Main Road, Bangalore -560061 have Changed my name to Bhavna Sharma Vide affidavit dated: 7.8.2023.before Notary G.R.Rajanna Bangalore

DHANA LAKSHMI, Wife/o, 6495970K, NK/ASH, BALIREDDI SIVAJI, Vill- Kummara Palli, Murakada, Rambilli, Visakhapatnam, Andhra Pradesh changed name DHANA LAKSHMI to BALIREDDI DHANA LAKSHMI, 05/08/2023 Notary K.V. Mani Bangalore

Lost

DOCUMENT LOST
I, **PAVITHRA,** W/o Krishna Reddy, R/at # 109, Singanayakanahalli, Yelahanka, Bangalore - 64, have lost my original **sale deed Doc No. YAN-1-06005-2011/12 CD No. YAND-386 Book No.1, Dt. 10-1-2012** and **Hakku Patra No. 07888, dt. 10-01-2012.** while shifting the house. *Finders please Contact:* **7022230482**

DH DECCAN HERALD · ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
- LOG INTO WWW.DHCLASSIFIEDS.COM
- CHOOSE THE CATEGORY
- CHOOSE THE AD DATES
- COMPOSE THE MATTER
- CONFIRM AND PAY

TO BOOK YOUR CLASSIFIEDS ADS ONLINE
JOB · LOST · REAL ESTATE · NAME CHANGE · EDU · HEALTH · MATRI · AUTO · ASTRO · NOTICE · TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

HEALTH SPECIAL

ಕ್ಲಾಸಿಫೈಡ್ಸ್

ಶ್ರೇಯಾ ಹಿಯರಿಂಗ್ ಕ್ಲಿನಿಕ್ Dr. Sathya Ranna's
SHRÉYA HEARING CLINIC

25 ANNIVERSARY 1997-2023
FOR YOU.WITH YOU. IN YOUR 60s 70s 80s 90s GROWING TOGETHER FOR 25 YEARS
25ನೇ ವರ್ಷದ ಆಚರಣೆಯ ಕೊಡುಗೆಗಳು
Free Test and Demo of Smart Hearing Aids With Attractive Offers
9th Aug to 11th Aug
ಬನ್ನಿ ನಮ್ಮ ಕುಟುಂಬದ ಭಾಗವಾಗಿರಿ
ಉಚಿತ ಶ್ರವಣ ಪರೀಕ್ಷೆ ಸ್ಮಾರ್ಟ್ ಶ್ರವಣ ಸಾಧನ ಡೆಮೋ
ಆಗಸ್ಟ್ 9 ರಿಂದ ಆಗಸ್ಟ್ 11 ರವರೆಗೆ
HOME VISITS 9945633115
We believe in sound relationship...

Indiranagar 2521 4746 /47/48 9686449424	Jayanagar 2653 3055 /56/ 57	Koramangala 2563 4411 /12/13	Bannerghatta Road 2648 6033 /34
Sadashivanagar 22361 8037 /38/ 39	Vijayanagar 2318 0011 /12/13	Kammanahalli 2545 5078 /79	Marathalli 2844 1062 /63 9686449365

ReSound GN Made for iPhone
Centers at Hyderabad , Mangaluru and Mysuru
sathya@shreyahearingclinic.com www.shreyahearingclinic.com
signia Life sounds brilliant.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿರುದ್ಧ ರಾಜ್ಯಪಾಲರಿಗೆ ಪತ್ರ

ಲಂಚ ಆರೋಪ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಲಂಚ ನೀಡುವಂತೆ ತಮ್ಮನ್ನು ಒತ್ತಾಯಿಸಿದರು' ಎಂದು ಆರೋಪಿಸಿ ಕೃಷಿ ಇಲಾಖೆ ಅಧಿಕಾರಿಗಳು ರಾಜ್ಯಪಾಲರಿಗೆ ಬರೆದಿದ್ದಾರೆ ಎನ್ನಲಾದ ಪತ್ರದ ಬಗ್ಗೆ ಸಿಐಡಿ ತನಿಖೆ ನಡೆಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಗೃಹ ಸಚಿವರ ಜತೆ ಚರ್ಚಿಸಿದ ಬಳಿಕ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ.

ಇದಕ್ಕೂ ಮೊದಲು, ಮಾಜಿ ಮುಖ್ಯಮಂತ್ರಿ ದಿವಂಗತ ಎಸ್. ನಿಜಲಿಂಗಪ್ಪ ಅವರ ಪುಣ್ಯತಿಥಿ ಅಂಗವಾಗಿ, ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ, 'ಚಲುವರಾಯ-ಸ್ವಾಮಿ ವಿರುದ್ಧ ಅಧಿಕಾರಿಗಳು ಪತ್ರ ಬರೆದಿಲ್ಲವೆಂದು ಮಂಡ್ಯ ಕೃಷಿ ಇಲಾಖೆ ಜಂಟಿ ನಿರ್ದೇಶಕ ವಿ.ಎಸ್. ಅಶೋಕ್ ಅವರು ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಈ ಬಗ್ಗೆ ತನಿಖೆ ಮಾಡಿ ಸತ್ಯ ಬಯಲಿಗೆಳೆಯುವಂತೆ ಪೊಲೀಸರಿಗೆ ಸೂಚಿಸಲಾಗಿದೆ' ಎಂದರು.

ಕೆಪಿಸಿಸಿಯಿಂದ ದೂರು

'ಮಂಡ್ಯ ಜಿಲ್ಲೆಯ ಕೃಷಿ ಅಧಿಕಾರಿಗಳ ಹೆಸರಿನಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಮತ್ತು ಕಾಂಗ್ರೆಸ್ ಸರ್ಕಾರದ ತೇಜೋವಧೆಯಾಗುವಂತೆ ಸುಳ್ಳು ಆರೋಪ ಮಾಡಿ ನಕಲಿ ಸಹಿಯೊಂದಿಗೆ ರಾಜ್ಯಪಾಲರಿಗೆ ದೂರು ನೀಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಂತಹ ನಕಲಿ ಪತ್ರಗಳನ್ನು ಬರೆಯುವ ಮತ್ತು ಅದಕ್ಕೆ ಕುಮ್ಮಕ್ಕು ನೀಡುವ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಮುಂದೆಂದೂ ಇಂತಹ ಕೆಲಸಗಳಿಗೆ ಯಾರೂ ಕೈ ಹಾಕದಂತೆ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಗೃಹ ಸಚಿವ ಜಿ. ಪರಮೇಶ್ವರ ಮತ್ತು ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರಿಗೆ ಕೆಪಿಸಿಸಿ ಮನವಿ ಸಲ್ಲಿಸಿದೆ.

ಶಾಸಕರೂ ಆಗಿರುವ ಕೆಪಿಸಿಸಿ ಉಪಾಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ಹುಚ್ಚಪ್ಪ, ರಾಮಚಂದ್ರಪ್ಪ, ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು, ಮಾಧ್ಯಮ ಸಂಯೋಜಕ ರಾಜು ಜಿ.ಸಿ., ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಈ ಮನವಿ ಸಲ್ಲಿಸಿದ್ದಾರೆ.

'ಮಂಡ್ಯ ಜಿಲ್ಲೆಯ ಕೃಷಿ ಅಧಿಕಾರಿಗಳ ಹೆಸರಿನಲ್ಲಿ ಇಲ್ಲಸಲ್ಲದ ಆರೋಪಗಳನ್ನು ಸೃಷ್ಟಿಸಿ ರಾಜ್ಯಪಾಲರಿಗೆ ದೂರು ನೀಡಲಾಗಿದೆ. ಉದ್ದೇಶಪೂರ್ವಕವಾಗಿ ಮಾನಹಾನಿ ಮಾಡಲೆಂದೇ ಇದನ್ನು ಮಾಡಿರುವುದು ಗೊತ್ತಾಗಿದೆ. ಯಾವೊಬ್ಬ ಕೃಷಿ ಅಧಿಕಾರಿಯೂ ಈ ರೀತಿಯ ಪತ್ರ ಬರೆದಿಲ್ಲ, ಸಹಿ ಕೂಡಾ ಮಾಡಿಲ್ಲವೆಂದು ಸ್ಪಷ್ಟಪಡಿಸಿ-ದ್ದಾರೆ' ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

ಶೇ 15ರಷ್ಟು ಕಮಿಷನ್: ರಾಜ್ಯಪಾಲರಿಗೆ ದೂರು

ಒಂದನೇ ಪುಟದಿಂದ...

'ಕಮಿಷನ್ ಆರೋಪದ ಕುರಿತು ಮನವಿ ಪತ್ರದಲ್ಲಿ ಯಾವುದೇ ಉಲ್ಲೇಖ ಇರಲಿಲ್ಲ. ಮನವಿ ಸ್ವೀಕರಿಸಿದ ಬಳಿಕ ಇತರೆ ಏನಾದರೂ ಅಹವಾಲುಗಳಿದ್ದರೆ ಹೇಳಿ ಎಂದು ರಾಜ್ಯಪಾಲರು ಕೇಳಿದರು. ಆಗ ಕೆಲವು ಗುತ್ತಿಗೆದಾರರು ಈ ವಿಷಯ ಪ್ರಸ್ತಾಪಿಸಿದರು. ಬಾಕಿ ಬಿಲ್ ಪಾವತಿಗೆ ಶೇ 10ರಿಂದ 15ರಷ್ಟು ಕಮಿಷನ್ ಕೊಡುವಂತೆ ಬೆಂಗಳೂರು ಅಭಿವೃದ್ಧಿ ಸಚಿವರ ಪರವಾಗಿ ಪಾಲಿಕೆ ಅಧಿಕಾರಿಗಳು ಹಾಗೂ ಮಧ್ಯವ-ರ್ತಿಗಳು ಬೇಡಿಕೆ ಇಟ್ಟಿದ್ದಾರೆ ಎಂದು ದೂರಿದರು' ಎಂದು ನಿಯೋಗದಲ್ಲಿದ್ದ ಗುತ್ತಿಗೆದಾರರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕಮಿಷನ್ ದೂರಿನ ಕುರಿತು ತಕ್ಷಣಕ್ಕೆ ರಾಜ್ಯಪಾಲರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ಕುರಿತು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರ ಜತೆ ಚರ್ಚಿಸುತ್ತೇನೆ ಎಂದು ಭರವಸೆ ನೀಡಿದರು' ಎಂದು ಅವರು ಹೇಳಿದರು.

'ಗುತ್ತಿಗೆದಾರರಿಗೆ ನೀಡಬೇಕಾದ ನ್ಯಾಯಸಮ್ಮತ ಹಣ ಬಿಡುಗಡೆ ಮಾಡಲು ಬಿಬಿಎಂಪಿ ನಿರಾಕರಿ-ಸುತ್ತಿದೆ. ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ₹ 675 ಕೋಟಿ ಹಾಗೂ ಬಿಬಿಎಂಪಿಯಲ್ಲಿ ₹ 1,500 ಕೋಟಿ ಹಣ ಬಾಕಿ ಉಳಿಸಿಕೊಂಡಿದೆ. ಹಣ ಲಭ್ಯವಿದ್ದರೂ ಬಿಡುಗಡೆ ಮಾಡದೇ ಕಿರುಕುಳ ನೀಡಲಾಗುತ್ತಿದೆ' ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ ನೇತೃತ್ವದಲ್ಲಿ ಸಲ್ಲಿಸಲಾದ ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಬಾಕಿ ಹಣವನ್ನು ಪಾವತಿ ಮಾಡದೇ ಇದ್ದರೆ ದಯಾಮರಣವನ್ನು ಕರುಣಿಸಬೇಕು ಎಂದು ಗುತ್ತಿಗೆದಾರರು ಕೋರಿದರು.

ಬಾಕಿ ಹಣ ಬಿಡುಗಡೆ ಮಾಡಿ: ಸಿಎಂಗೂ ಸಂಘದ ಮನವಿ

'ಕಾಮಗಾರಿಗಳ ಬಿಲ್ ಹಣ ತಕ್ಷಣ ಬಿಡುಗಡೆ ಮಾಡಬೇಕು' ಎಂದು ಆಗ್ರಹಿಸಿ ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಸಂಘದ ಪದಾಧಿಕಾರಿಗಳ ಜೊತೆ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಸಂಘದ ಅಧ್ಯಕ್ಷ ಆರ್. ಅಂಬಿಕಾಪತಿ, 'ಬಿಬಿಎಂಪಿ ವ್ಯಾಪ್ತಿಯಲ್ಲಿ 28 ತಿಂಗಳ ಹಿಂದೆ ಪೂರ್ಣ-ಗೊಳಿಸಿರುವ ಕಾಮಗಾರಿಗಳ ಬಿಲ್ ಪಾವತಿ ಬಾಕಿ ಇದೆ. ಚುನಾವಣೆ, ಹೊಸ ಸರ್ಕಾರ ರಚನೆ ಹೀಗೆ ಎಂಟು ತಿಂಗಳಿನಿಂದ ಬಾಕಿ ಮೊತ್ತ ಬಿಡುಗಡೆಯಾಗಿಲ್ಲ. ಇದರಿಂದ ಗುತ್ತಿಗೆದಾರರು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಎದುರಾಗಬಹುದೆಂಬ ವಿಷಯವನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗಿದೆ' ಎಂದರು.

'ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಪಾಲಿಕೆ ಖಜಾನೆಯಲ್ಲಿ ಇದ್ದರೂ ಗುತ್ತಿಗೆದಾರರಿಗೆ ಬಾಕಿ ಬಿಡುಗಡೆಯಾಗುತ್ತಿಲ್ಲ ಎಂಬುದನ್ನು ಗಮನಕ್ಕೆ ತಂದಾಗ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದರು. ಬಿಲ್ ಪಾವತಿ ಸಂಬಂಧ ಉಪ ಮುಖ್ಯಮಂತ್ರಿ ಮತ್ತು ಮುಖ್ಯ ಆಯುಕ್ತರ ಜೊತೆ ಚರ್ಚಿಸಿ, ತ್ವರಿತವಾಗಿ ಬಾಕಿ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದರು' ಎಂದರು.

ಸಂಘದ ಪದಾಧಿಕಾರಿಗಳಾದ ಜಿ.ಎಂ. ರವೀಂದ್ರ, ನಂದಕುಮಾರ್ ಜಿ.ಎಂ, ಡಿ.ಎಂ. ನಾಗರಾಜ್, ಹನುಮಂತಯ್ಯ ಇದ್ದರು.

'ಪತ್ರ ಬರೆಯುವುದರಲ್ಲಿ ತಪ್ಪಿಲ್ಲ'

ಒಂದನೇ ಪುಟದಿಂದ...

'ನಮಗೆ ಅನೇಕ ವರದಿಗಳು ಬಂದಿದ್ದು, ಅವುಗಳ ನೈಜತೆ ಪರಿಶೀಲನೆ ಮಾಡುತ್ತಿದ್ದೇವೆ. ಯಾರು ಸರಿಯಾಗಿ ಕೆಲಸ ಮಾಡಿದ್ದಾರೋ ಅವರಿಗೆ ಹಣ ಕೊಡಲು ನಾವು ಬದ್ಧರಾಗಿದ್ದೇವೆ' ಎಂದರು.

'ಕೆಲವು ಗುತ್ತಿಗೆದಾರರು ನಮ್ಮ ಮೇಲೆ ಪ್ರೀತಿ ಅಭಿಮಾನ ತೋರಿಸುತ್ತಿದ್ದಾರೆ. ಅದನ್ನು ಬ್ಲ್ಯಾಕ್ ಮೇಲ್ ಎನ್ನುವುದಿಲ್ಲ. ನಮಗೆ ಅನೇಕ ವರದಿಗಳು ಬಂದಿದ್ದು, ಅವುಗಳ ನೈಜತೆ ಪರಿಶೀಲನೆ ಮಾಡುತ್ತಿದ್ದೇವೆ. ಯಾರು ಸರಿಯಾಗಿ ಕೆಲಸ ಮಾಡಿದ್ದಾರೋ ಅವರಿಗೆ ಹಣ ಕೊಡಲು ನಾವು ಬದ್ಧರಾಗಿದ್ದೇವೆ' ಎಂದರು.

ಗುತ್ತಿಗೆದಾರರು ತಮ್ಮ ಬಿಲ್ ಪಾವತಿಸಬೇಕು ಅಥವಾ ನಮಗೆ ದಯಾಮರಣ ನೀಡಬೇಕು ಎಂದು ಬರೆದಿರುವ ಪತ್ರದ ಬಗ್ಗೆ ಪ್ರತಿಕ್ರಿಯಿಸಿ, 'ಇದು ನನ್ನ ಸ್ನೇಹಿತರ' ರಾಜಕೀಯ ಪ್ರೇರಿತ ಯೋಜನೆ. ಇದರ ಹಿಂದೆ ಯಾರೆಲ್ಲ ಇದ್ದಾರೆ ಎಂದು ಗೊತ್ತಿದೆ. ಜನ ನಮ್ಮ ಮೇಲೆ ನಂಬಿಕೆ ಇಟ್ಟು ಭಾರಿ ಬಹುಮತ ಕೊಟ್ಟಿದ್ದಾರೆ. ನಾವು ಭ್ರಷ್ಟಾಚಾರ ತಡೆಯಬೇಕಿದೆ. ಅನೇಕ ಪ್ರಕರಣಗಳಲ್ಲಿ ಕಾಮಗಾರಿ ಆಗದೇ ಬಿಲ್ ಪಾವತಿ ಮಾಡಲಾಗಿರುವ ಬಗ್ಗೆ ಲೋಕಾಯುಕ್ತ ಸಂಸ್ಥೆ ವರದಿ ನೀಡಿದೆ. ಇದನ್ನು ಮಾಜಿ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದರು. ನಾವು ಪರಿಶೀಲನೆ ಮಾಡುತ್ತೇವೆ. ಸರಿಯಾದ ರೀತಿಯಲ್ಲಿ ಕೆಲಸ ಮಾಡಿರುವ ಗುತ್ತಿಗೆದಾರರು ಆತಂಕ ಪಡುವ ಅಗತ್ಯವಿಲ್ಲ' ಎಂದು ಹೇಳಿದರು.

'ಬ್ಲ್ಯಾಕ್‌ಮೇಲ್‌ಗಳಿಗೆ ನಾನು ಹೆದರಲ್ಲ'

'ಕಮಿಷನ್' ಕೇಳಿದರೆಂಬ ಗುತ್ತಿಗೆದಾರರ ಆರೋಪಕ್ಕೆ ಕಿಡಿಯಾದ ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರಿಯಾಗಿ ಕಾಮಗಾರಿ ಮಾಡಿದ ಗುತ್ತಿಗೆ-ದಾರರಿಗೆ ಬಿಲ್ ಪಾವತಿ ಆಗಲಿದೆ. ಯಾವ ಗುತ್ತಿಗೆದಾರರ ಹಿಂದೆ ಯಾರಿದ್ದಾರೆ ಎಂದೂ ನನಗೆ ಗೊತ್ತಿದೆ. ನಾವು ಕಾನೂನು ಪ್ರಕಾರ ಕೆಲಸ ಮಾಡುತ್ತಿದ್ದೇವೆ. ಬ್ಲ್ಯಾ-ಕ್‌ಮೇಲ್‌ಗಳಿಗೆಲ್ಲ ಹೆದರುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗುಡುಗಿದರು.

'ಬಿಲ್ ಹಣ ಬಿಡುಗಡೆಗೆ ಡಿ.ಕೆ. ಶಿವಕುಮಾರ್ ದುಡ್ಡು ಕೇಳಿದ್ದಾರೆ. ಈ ಬಗ್ಗೆ ಅವರು ನಂಬಿರುವ ಅಜ್ಜನ ಮೇಲೆ ಪ್ರಮಾಣ ಮಾಡಲಿ' ಎಂಬ ಗುತ್ತಿಗೆ-ದಾರರೊಬ್ಬರ ಆರೋಪಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿ-ಸಿದ ಶಿವಕುಮಾರ್, 'ಯಾವುದೇ ಗುತ್ತಿಗೆದಾರರಿಗೆ ಉತ್ತರ ಕೊಡಲು ನಾನು ಹೋಗುವುದಿಲ್ಲ. ನಾನು ಯಾರ ಬಳಿಯೂ ಮಾತನಾಡಿಲ್ಲ. ನನಗೂ ಪ್ರಜ್ಞೆ ಇದೆ, ರಾಜಕೀಯ ಗೊತ್ತಿದೆ. ಗುತ್ತಿಗೆದಾರರೂ ಗೊತ್ತಿದ್ದಾರೆ. ಅವರ ಹಿಂದೆ ಯಾರಿದ್ದಾರೆ, ಯಾರು ಇದನ್ನು ಹೇಳಿಸು-ತ್ತಿದ್ದಾರೆ ಎಂಬುದೂ ಗೊತ್ತಿದೆ' ಎಂದು ಆಕ್ರೋಶ ವ್ಯಕ್ತ-ಪಡಿಸಿದರು.

'ಗುತ್ತಿಗೆದಾರರು ಏನು ಬೇಕಾದರೂ ಮಾಡಿಕೊಳ್ಳಲಿ. ನಾವು ಕಾನೂನು ಪ್ರಕಾರ ಕೆಲಸ ಮಾಡುತ್ತಿದ್ದೇವೆ. ಈ ರೀತಿಯ ಬೆದರಿಕೆಗೆ ಜಗ್ಗುವುದಿಲ್ಲ. ರಾಜ್ಯಪಾಲರಿಗೆ ಪತ್ರ ಕೊಡುವುದು, ರಾಷ್ಟ್ರಪತಿಗೆ ಪತ್ರ ಕೊಡುವುದು, ಪ್ರಧಾನಿಯವರನ್ನು ಭೇಟಿ ಆಗುವುದು ಏನು ಬೇಕಾದರೂ ಮಾಡಿಕೊಳ್ಳಲಿ' ಎಂದರು.

'ನಿಮ್ಮ ಮೇಲೆ ಒತ್ತಡ ಹಾಕಲು ಈ ರೀತಿ ಮಾಡುತ್ತಿದ್ದಾರಾ' ಎಂಬ ಪ್ರಶ್ನೆಗೆ, 'ನನಗೆ ಯಾವ ಒತ್ತಡ ಇದೆ. ಯಾರು ಒತ್ತಡ ಹಾಕುತ್ತಾರೆ. ಯಾರು ಹೆದರಿಸುತ್ತಾರೆ. ನನಗೇ ಹೆದರಿಸಲು ಆಗುತ್ತದೆಯೇ? ಯಾವುದೇ ಒತ್ತಡ ಬರಲಿ, ಅದನ್ನು ತಡೆದುಕೊಳ್ಳುವ ಶಕ್ತಿ ನನಗಿದೆ. ಈ ಗುತ್ತಿಗೆದಾರರ ವಿಚಾರಕ್ಕೆಲ್ಲ ನಾನು ಪ್ರತಿಕ್ರಿಯಿಸಲು ಹೋಗುವುದಿಲ್ಲ' ಎಂದರು.

ಎಚ್.ಡಿ. ಕುಮಾರಸ್ವಾಮಿ ಅವರನ್ನು ಗುತ್ತಿಗೆದಾರರು ಯಾವ ಕಾರಣಕ್ಕೆ ಭೇಟಿ ಮಾಡಿದ್ದರು ಎಂಬ ಪ್ರಶ್ನೆಗೆ, 'ನಾವು ವಿರೋಧ ಪಕ್ಷದಲ್ಲಿ ಇದ್ದಿದ್ದರೆ, ನಮ್ಮನ್ನು ಕೂಡ ಭೇಟಿ ಮಾಡುತ್ತಿರಲಿಲ್ಲವೇ? ಇದನ್ನು ತಪ್ಪು ಎಂದು ಹೇಳಲು ಆಗುತ್ತದೆಯೇ? ಇದು ಅತ್ಯಂತ ಸಾಮಾನ್ಯ ಸಂಗತಿ. ರಾಜಕಾರಣಿಗಳು, ವಿರೋಧ ಪಕ್ಷಗಳು ಇರುವುದೇ ಇಂತಹ ಕೆಲಸ ಮಾಡಲು. ಮಾಡಲಿ ಬಿಡಿ' ಎಂದರು.

ಕೆಲವು ಗುತ್ತಿಗೆದಾರರು ಗುಂಪು ಕಟ್ಟಿಕೊಂಡು ಸರ್ಕಾರದ ವಿರುದ್ದ ಪದೇ, ಪದೇ ಹೇಳಿಕೆ ನೀಡುತ್ತಿ-ದ್ದಾರಲ್ಲ ಎಂಬ ಪ್ರಶ್ನೆಗೆ, 'ಏನಾದರೂ ಎತ್ತಿಕಟ್ಟಲಿ, ಏನು ಬೇಕಾದರೂ ಮಾಡಲಿ, ನಾನು ಯಾರಿಗೂ ಪ್ರಮಾಣ ಮಾಡಬೇಕಾಗಿಲ್ಲ. ಕಾನೂನು ಏನು ಹೇಳಿದೆಯೋ, ಅದೇ ಉತ್ತರ. ಕೆಲಸ ಮಾಡಿದ್ದರೆ ಬಿಲ್ ಕೊಡುತ್ತೇವೆ, ಕೆಲಸ ಮಾಡಲಿಲ್ಲವೆಂದರೆ ಬಿಲ್ ಕೊಡುವುದಿಲ್ಲ. ಇವತ್ತು ಅರ್ಜಿ ಕೊಟ್ಟರು, ನಾಳೆ ಟೆಂಡರ್ ಆಯಿತು, ಒಂದು ತಿಂಗಳಲ್ಲಿ ₹ 1 ಸಾವಿರ ಕೋಟಿ ಕೆಲಸ ಮಾಡಲು ಸಾಧ್ಯವೇ? ಮೌಲ್ಯಮಾಪನ ಮಾಡಿ, ಕೆಲಸ ಆಗಿದ್ದರೆ ಬಿಲ್ ಮಾಡಿ ಎಂದು ಅಧಿಕಾರಿಗಳಿಗೆ ಹೇಳಿದ್ದೇವೆ. ಅವರು ಆ ಕೆಲಸ ನೋಡಿಕೊಳ್ಳುತ್ತಾರೆ. ಸರ್ಕಾರ ಇರುವುದು ನೀತಿ ರೂಪಿಸಲು. ಬಿಲ್ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ' ಎಂದರು.

ಹಳೇ ಬಿಲ್‌ಗಳಿಗೂ ಕಮಿಷನ್‌ಗಾಗಿ ಒತ್ತಡ: ಸಿ.ಟಿ.ರವಿ

ಬೆಂಗಳೂರು: ಕಳೆದು ಐದು ವರ್ಷಗಳಲ್ಲಿ ನಡೆದ ಕಾಮಗಾರಿಗಳಿಗೆ ಸಂಬಂಧಿಸಿದ ಹಳೇ ಬಿಲ್‌ಗಳಿಗೂ ಗುತ್ತಿಗೆದಾರರಿಂದ ಕಮಿಷನ್ ಕೇಳುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಆರೋಪಿಸಿದ್ದಾರೆ.

ಸರ್ಕಾರಕ್ಕೆ ಪ್ರಾಮಾಣಿಕತೆ ಇದ್ದರೆ ಗುತ್ತಿಗೆದಾರರ ಬಿಲ್ ಪಾವತಿ ಮಾಡಲಿ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಈವರೆಗೆ ಎಷ್ಟು ಬಿಲ್ ಪಾವತಿ ಮಾಡಿದ್ದಾರೆ ಎಂಬ ಮಾಹಿತಿಯನ್ನು ಕೊಡಬೇಕು. ಈ ಹಿಂದೆ ನಮ್ಮ ಮೇಲೆ ಆರೋಪ ಮಾಡಿದ್ದರು. ಈಗ ಇವರೇ ಕಮಿಷನ್‌ಗಾಗಿ ಗುತ್ತಿಗೆದಾರರಿಗೆ ಕಿರುಕುಳ ನೀಡ-ಲಾರಂಭಿದ್ದಾರೆ. ತಮ್ಮ ಅಳಲು ತೋಡಿಕೊಳ್ಳಲು ಗುತ್ತಿಗೆದಾರರು ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿರಬಹುದು. ಇಷ್ಟಕ್ಕೇ ತಮಗೆ ಬೆದರಿಸಲು ಸಾಧ್ಯವಿಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಅವರಿಗೆ ಬ್ಲಾಕ್‌ಮೇಲ್ ಮಾಡಲು ಯಾರಿಗೂ ದಮ್ ಇಲ್ಲ. ಅವರೇ ಯಾರಿಗಾದರೂ ಬ್ಲಾಕ್‌ಮೇಲ್ ಮಾಡಬಹುದು. ಗುತ್ತಿಗೆದಾರರಿಂದ ಕಮಿಷನ್‌ಗೆ ಬೇಡಿಕೆ ಇಟ್ಟಿರೋದು ನಿಜ ಎಂಬ ಮಾಹಿತಿ ನನಗೂ' ಬಂದಿದೆ ಎಂದರು.

'ನಮ್ಮ ಸರ್ಕಾರದ ಅವಧಿಯಲ್ಲಿ ನ್ಯಾಯಾಂಗ ಸಮಿತಿಯೊಂದನ್ನು ರಚಿಸಲಾಗಿತ್ತು. ಕಾಮಗಾರಿ-ಗಳನ್ನು ನೀಡುವುದಕ್ಕೆ ಮೊದಲು ಎಲ್ಲವೂ ಸರಿ ಇದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿತ್ತು. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಯಾವ ಕ್ರಮ ಕೈಗೊಂಡಿದ್ದಾರೆ. ತಮ್ಮದೇ ಹಣಕ್ಕೆ ಕಮಿಷನ್ ಕೇಳುತ್ತಿದ್ದಾರೆ ಎನ್ನುವುದು ಗುತ್ತಿಗೆದಾರರ ಆರೋಪ' ಎಂದು ರವಿ ತಿಳಿಸಿದರು.

ನಗರದಲ್ಲಿ ಇಂದು

ಗುರುರಾಜ ಪೋಶೆಟ್ಟಿಹಳ್ಳಿ ಅವರ 'ಕೃಷ್ಣನ ಹೆಸರೇ ಲೋಕಪ್ರಿಯ' ಪುಸ್ತಕದ ಬಿಡುಗಡೆ: ವಿದ್ಯಾಶ್ರೀಶ ತೀರ್ಥ ಶ್ರೀಪಾದ ಸ್ವಾಮೀಜಿ, ಉಪಸ್ಥಿತಿ: ಗುರುರಾಜ ಪೋಶೆಟ್ಟಿಹಳ್ಳಿ, ಆಯೋಜನೆ: ಪ್ರಣವ ಮೀಡಿಯಾ ಹೌಸ್ ಪ್ರಕಾಶನ, ಸ್ಥಳ: ಪ್ರಸನ್ನ ಶ್ರೀನಿವಾಸ ದೇವರ ಸನ್ನಿಧಿ, ಸೋಸಲೆ ವ್ಯಾಸರಾಜರ ಮಠದ ಆವರಣ, ಗಾಂಧಿ ಬಜಾರ್, ಬೆಳಿಗ್ಗೆ 8.30

ಕ್ವಿಟ್ ಇಂಡಿಯಾ ಚಳವಳಿ ನೆನಪು: ರಾಷ್ಟ್ರಧ್ವಜಾರೋಹಣ, ಆಯೋಜನೆ: ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ, ಸ್ಥಳ: ಸಜ್ಜನರಾವ್ ವೃತ್ತ, ವಿಶ್ವೇಶ್ವರಪುರ, ಬೆಳಿಗ್ಗೆ 10

ಶತಮಾನೋತ್ಸವ ಸಮಾರಂಭ: ಉದ್ಘಾಟನೆ: ಥಾವರಚಂದ ಗೆಹಲೋತ್, ಹೆಚ್ಚುವರಿ ಕೊಠಡಿಗಳ ನಿರ್ಮಾಣ, ನವೀಕರಣ ಕಾಮಗಾರಿಗೆ ಶಂಕುಸ್ಥಾಪನೆ: ಸಿದ್ದರಾಮಯ್ಯ, ಸ್ಮರಣ ಸಂಚಿಕೆ ಬಿಡುಗಡೆ: ಡಿ.ಕೆ. ಶಿವಕುಮಾರ್, ಐಎಸ್‌ಇಸಿ ವರದಿ ಬಿಡುಗಡೆ: ಕೃಷ್ಣ ಬೈರೇಗೌಡ, ಮೊಬೈಲ್ ಆ್ಯಪ್, ವೆಬ್‌ಸೈಟ್ ಬಿಡುಗಡೆ: ಬಿ.ಎಸ್. ಸುರೇಶ್, ಅತಿಥಿಗಳು: ವಂದಿತಾ ಶರ್ಮ, ಇ.ವಿ. ರಮಣ ರೆಡ್ಡಿ, ರಾಜೇಂದ್ರ ಕುಮಾರ್ ಕಠಾರಿಯಾ, ಅಧ್ಯಕ್ಷತೆ: ರವಿ ಎಂ. ತಿರ್ಲಾಪೂರ, ಆಯೋಜನೆ: ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10ರಿಂದ

'ದಿ ಪವರ್ ಬೈನರಿ' ಕಲಾಕೃತಿಗಳ ಪ್ರದರ್ಶನ: ಅತಿಥಿಗಳು: ದಿನೇಶ್ ಗುಂಡೂರಾವ್, ಎಡ್ಗರ್ ಪಾಂಗ್, ಬಿ.ಎಲ್. ಶಂಕರ್, ರವಿ ಎಸ್., ಎಸ್.ಜಿ. ವಾಸುದೇವ್, ಆಯೋಜನೆ: ಜ್ಞಾನಿ ಆರ್ಟ್ಸ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಮಧ್ಯಾಹ್ನ 3.30ರಿಂದ

29ನೇ ವಿಶ್ವ ಆದಿವಾಸಿ ದಿನಾಚರಣೆ, ಆದಿವಾಸಿಗಳ ಕಲಾಮೇಳ: ಸಾನ್ನಿಧ್ಯ: ಸಿದ್ಧರಾಮಾನಂದ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಬಿ. ನಾಗೇಂದ್ರ, 'ಆದಿವಾಸಿ ಸಿರಿ ಪ್ರಶಸ್ತಿ' ಪ್ರದಾನ: ಸತೀಶ್ ಜಾರಕಿಹೊಳಿ, ಕೆ.ಎಂ. ಮೇತ್ರಿ ಅವರ 'ಸೂಕ್ಷ್ಮ ಮೂಲ ಆದಿವಾಸಿಗಳು' ಪುಸ್ತಕ ಬಿಡುಗಡೆ: ಈಶ್ವರ್ ಖಂಡ್ರೆ, ಅತಿಥಿಗಳು: ಶಿವರಾಜ್ ತಂಗಡಗಿ, ಆಯೋಜನೆ: ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್, ಕಾಗಿನೆಲೆ ಮಹಾಸಂಸ್ಥಾನ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11.30

ಕೃಷಿ ನವೋದ್ಯಮಗಳ ವಸ್ತು ಪ್ರದರ್ಶನದ ಉದ್ಘಾಟನೆ: ಎಸ್. ವಿ. ಸುರೇಶ, ಅತಿಥಿಗಳು: ಜಿತೇಂದ್ರ ಕುಮಾರ್, ಕೆ.ಸಿ. ನಾರಾಯಣಸ್ವಾಮಿ, ವಿ.ಎಲ್. ಮಧುಪ್ರಸಾದ್, ಎನ್.ಬಿ. ಪ್ರಕಾಶ್, ವೆಂಕಟೇಶ್, ಎಚ್.ಸಿ. ಪ್ರಕಾಶ, ಬಸವೇಗೌಡ, ಕೆ.ಎಂ. ಹರಿಣಿಕುಮಾರ್, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಉತ್ತರ ಬ್ಲಾಕ್‌ನ ಸಭಾಂಗಣ, ಜಿಕೆವಿಕೆ ಆವರಣ, ಬೆಳಿಗ್ಗೆ 11.30

ತ್ರೈವಾರ್ಷಿಕ ಯೋಜನಾ ಪಟ್ಟಿ ಬಿಡುಗಡೆ, ಕನ್ನಡ ತಂತ್ರಾಂಶ ಅನುಷ್ಠಾನ ಮತ್ತು ಸಂಪರ್ಕ ಭಾಷಾ ಗಣಕ ಶಿಬಿರದ ಉದ್ಘಾಟನೆ: ಲೀಲಾದೇವಿ ಆರ್. ಪ್ರಸಾದ್, ತ್ರೈವಾರ್ಷಿಕ ಯೋಜನಾ ಪಟ್ಟಿ ಬಿಡುಗಡೆ: ಬಿ.ಕೆ. ಶಿವರಾಂ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅತಿಥಿಗಳು: ಅನೂಪ್ ಅಯ್ಯಂಗಾರ್, ಆರ್. ಎ. ಪ್ರಸಾದ್, ಆಯೋಜನೆ ಮತ್ತು ಸ್ಥಳ: ಕನ್ನಡ ಗಣಕ ಉಚಿತ ತರಬೇತಿ ಕೇಂದ್ರದ ಡಾ. ರಾಜ್‌ಕುಮಾರ್ ತಾಂತ್ರಿಕ ಕುಟೀರ, ಮಲ್ಲೇಶ್ವರ, ಬೆಳಿಗ್ಗೆ 11.40

ಪರಿಶಿಷ್ಟ ಜಾತಿ–ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, ಟೆಲಿವಿಷನ್ ಸ್ಟುಡಿಯೋ ಉದ್ಘಾಟನೆ: ಡಾ. ಎಂ.ಸಿ. ಸುಧಾಕರ್, ಅಧ್ಯಕ್ಷತೆ: ಜಯಕರ ಎಸ್.ಎಂ., ಉಪಸ್ಥಿತಿ: ಶೇಖ್ ಲತೀಫ್, ಸಿ. ಶ್ರೀನಿವಾಸ್, ಅಜಿತ್ ಕುಮಾರ್ ಹೆಗಡೆ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸಭಾಂಗಣ, ಆಡಳಿತ ಕಚೇರಿ, ಜ್ಞಾನಭಾರತಿ ಆವರಣ, ಮಧ್ಯಾಹ್ನ 3

'ನಮ್ಮ ಊರು ನಮ್ಮ ಪರಿಸರ' ರಾಜ್ಯಮಟ್ಟದ ಕಾರ್ಯಕ್ರಮ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಎನ್. ಚಲುವರಾಯಸ್ವಾಮಿ, ಅತಿಥಿಗಳು: ಈಶ್ವರ್ ಖಂಡ್ರೆ, ಡಾ.ಎಂ. ಸಿ. ಸುಧಾಕರ್, ಲಕ್ಷ್ಮಿ ಹೆಬ್ಬಾಳ್ಕರ್, ಪಿ.ಜಿ. ಆರ್. ಸಿಂಧ್ಯ, ಕೆ.ವಿ. ಪ್ರಭಾಕರ್, ಬಿ.ಆರ್. ರವಿಕಾಂತೆಗೌಡ, ಆಯೋಜನೆ: ಕರ್ನಾಟಕ ರೈತರ ಜಾಗೃತಿ ವೇದಿಕೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 5

ಪ್ರವಚನ ವಾಹಿನಿ: 'ಶ್ರೀರಾಮ ಕೃಷ್ಣ ವಚನ ವೇದ' ಕುರಿತ ಉಪನ್ಯಾಸ: ಸ್ವಾಮಿ ಯೋಗೇಶ್ವರಾನಂದ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಬಿಬಿಎಂಪಿ ಕಾರ್ಯವೈಖರಿಗೆ ಹೈಕೋರ್ಟ್ ತರಾಟೆ

ಶೌಚಾಲಯಗಳ ದುರವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ವಿಚಾರದಲ್ಲಿ ಬಿಬಿಎಂಪಿಯ ನಿರ್ಲಕ್ಷ್ಯ ಹಾಗೂ ರಾಜ್ಯ ಸರ್ಕಾರದ ಮೌನವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, ಅವುಗಳ ಸ್ಥಿತಿಗತಿ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಮೂರು ವಾರಗಳಲ್ಲಿ ಹೊಸದಾಗಿ ವಿವರವಾದ ವರದಿ ಸಲ್ಲಿಸಬೇಕು ಎಂದು ಬಿಬಿಎಂಪಿಗೆ ಖಡಕ್ ನಿರ್ದೇಶನ ನೀಡಿದೆ.

ಈ ಸಂಬಂಧ 'ಲೆಟ್ಸ್ ಕಿಟ್ ಫೌಂಡೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, 'ಪ್ರಕರಣ 2018ರಿಂದ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಆದರೆ, ರಾಜ್ಯ ಸರ್ಕಾರ ಈವರೆಗೆ ಈ ವಿಚಾರವಾಗಿ ಒಂದೇ ಒಂದು ಪ್ರಮಾಣಪತ್ರ ಸಲ್ಲಿಸಿಲ್ಲ' ಎಂದು ಅಚ್ಚರಿ ವ್ಯಕ್ತಪಡಿಸಿತು.

ವಿಚಾರಣೆ ವೇಳೆ, ಅರ್ಜಿದಾರರ ಪರ ವಕೀಲ ಪುತ್ತಿಗೆ ರಮೇಶ್; ಶೌಚಾಲಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಬಿಬಿಎಂಪಿ ಸಲ್ಲಿಸಿದ ವರದಿಯಲ್ಲಿದ್ದ ನ್ಯೂನ್ಯತೆಗಳನ್ನು ನ್ಯಾಯಪೀಠದ ಗಮನಕ್ಕೆ ತಂದರು.

ವರದಿ ಪರಿಶೀಲಿಸಿದ ನ್ಯಾಯಪೀಠವು ಗರಂ ಆಯಿತಲ್ಲದೆ, ಸಾರ್ವಜನಿಕ ಶೌಚಾಲಯಗಳ ಸುಧಾರಣೆಗೆ ಸಾಕಷ್ಟು ಕೆಲಸ ಆಗಿದೆ ಎಂದು ಬಿಬಿಎಂಪಿ ಹೇಳುತ್ತಿದೆ. ಆದರೆ, ವರದಿಯಲ್ಲಿ ಆಗಿರುವುದಕ್ಕಿಂತ ಆಗದಿರುವುದೇ ಹೆಚ್ಚಿದೆ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

'ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಏನೂ ಹೇಳಿಲ್ಲ. ಎಲ್ಲದ್ದಕ್ಕೂ ಕ್ರಮ ಕೈಗೊಳ್ಳಲಾಗಿದೆ. ಶೌಚಾಲಯಗಳು ಶುಚಿತ್ವದಿಂದ ಕೂಡಿವೆ ಎಂಬ ಸಿದ್ಧ ಉತ್ತರ ನೀಡಲಾಗಿದೆ. ಒಂದೊಮ್ಮೆ ಒಳ್ಳೆಯ ಕೆಲಸ ಮಾಡಿದ್ದರೆ ಅದನ್ನು ಹೇಳಲು ಬಿಬಿಎಂಪಿಯನ್ನು ತಡೆದವರು ಯಾರು? ಯಾರು ಅಧಿಕಾರಿಗಳ ಕೈ ಕಟ್ಟಿ ಹಾಕಿದ್ದಾರೆ' ಎಂದು ಬಿಬಿಎಂಪಿಯನ್ನು ತರಾಟೆಗೆ ತೆಗೆದುಕೊಂಡಿತು.

'ಮೂರು ವಾರಗಳಲ್ಲಿ ಹೊಸದಾಗಿ ವಿವರವಾದ ವರದಿ ಸಲ್ಲಿಸಬೇಕು. ಅದರಲ್ಲಿ ಶೌಚಾಲಯ ನಿರ್ವಹಣೆಗೆ ಕೈಗೊಳ್ಳಬೇಕಾಗಿರುವ ಕ್ರಮಗಳೇನು? ಒಂದೊಮ್ಮೆ ಕ್ರಮಗಳನ್ನು ರೂಪಿಸಿದ್ದರೆ ಅದಕ್ಕೆ ನೀಡಲಾದ ಕಾಲಮಿತಿ ಏನು? ನಗರದಲ್ಲಿನ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಗೆ ಬಿಬಿಎಂಪಿ ಬಳಿ ಸಲಹೆಗಳೇನಾದರೂ ಇದ್ದರೆ ಅದನ್ನು ವರದಿಯಲ್ಲಿ ಸೇರಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಎಸ್‌ಸಿ-ಎಸ್‌ಟಿ ಕಾಯ್ದೆಯಡಿ ಸುಳ್ಳು ಪ್ರಕರಣ: ಕಳವಳ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ಎಸ್‌ಸಿ-ಎಸ್‌ಟಿ) ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾಗುತ್ತಿರುವ ಸುಳ್ಳು ಕ್ರಿಮಿನಲ್ ಪ್ರಕರಣಗಳು ನ್ಯಾಯಾಂಗ ವ್ಯವಸ್ಥೆಗೆ ಅಡ್ಡಿ ಉಂಟು ಮಾಡುತ್ತಿವೆ' ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಎಸ್‌ಸಿ-ಎಸ್‌ಟಿ ದೌರ್ಜನ್ಯ ಕಾಯ್ದೆಯಡಿ ತಮ್ಮ ವಿರುದ್ಧ ದಾಖಲಾಗಿ ಪ್ರಕರಣ ದಾಖಲು ಮಾಡಿರುವುದನ್ನು ಪ್ರಶ್ನಿಸಿ ರಸಿಕ್ ಲಾಲ್ ಮತ್ತು ಪುರುಷೋತ್ತಮ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದ್ದು, ಇಂತಹ ಪ್ರಕರಣಗಳು ನ್ಯಾಯಾಂಗ ಕ್ಷೇತ್ರದ ಅಮೂಲ್ಯ ಸಮಯವನ್ನು ವ್ಯರ್ಥ ಮಾಡುತ್ತಿವೆ ಎಂದು ತಿಳಿಸಿದೆ.

'ನಿಜವಾಗಲೂ ಸಮಸ್ಯೆಗೆ ಸಿಲುಕಿದವರು ನ್ಯಾಯಕ್ಕಾಗಿ ಕಾಯುತ್ತಿರುವ ಸಂದರ್ಭದಲ್ಲಿ ಸುಳ್ಳು ಪ್ರಕರಣವನ್ನು ವಿಚಾರಣೆಗೆ ಒಳಪಡಿಸುವುದು ಅಪಹಾಸ್ಯ' ಎಂದಿರುವ ನ್ಯಾಯಪೀಠ, 'ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿಯ ಸುಳ್ಳು ಪ್ರಕರಣಗಳು ಕಾನೂನಿನ ಪ್ರಕ್ರಿಯೆಯ ದುರುಪಯೋಗವಾಗಲಿದೆ. ಇದನ್ನು ನಿಯಂತ್ರಿಸಲು ವಿಫಲವಾದಲ್ಲಿ ಇಡೀ ಅಪರಾಧ ನ್ಯಾಯ ವ್ಯವಸ್ಥೆಗೆ ದೊಡ್ಡ ಹೊರೆಯಾಗಬಹುದು' ಎಂಬ ಆತಂಕ ವ್ಯಕ್ತಪಡಿಸಿದೆ.

ಮುರುಘಾ ಮಠ: ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ'ಕ್ಕೆ (ಎಸ್‌ಜೆಎಂ) ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರನ್ನು ತಾತ್ಕಾಲಿಕ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿರುವ ಆದೇಶವು ಈ ಸಂಬಂಧದ ಮೇಲ್ಮನವಿ ವಿಚಾರಣೆ ಮುಕ್ತಾಯವಾಗುವತನಕ ಮುಂದುವರಿಯಲಿದೆ' ಎಂದು ಹೈಕೋರ್ಟ್ ಆದೇಶಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಸಲ್ಲಿಸಲಾಗಿರುವ ಒಟ್ಟು ಏಳು ಮೇಲ್ಮನವಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ಮುಂದುವರಿಸಿತು.

ವಿಚಾರಣೆ ವೇಳೆ ಮೇಲ್ಮನವಿದಾರರೂ ಆದ ವಿಧಾನಪರಿಷತ್ ಸದಸ್ಯ ಕೆ.ಎಸ್.ನವೀನ್ ಪರ ಹಿರಿಯ ವಕೀಲ ಕೆ.ಜಿ.ರಾಘವನ್ ಸುದೀರ್ಘ ವಾದ ಮಂಡಿಸಿ, 'ಏಕಸದಸ್ಯ ನ್ಯಾಯಪೀಠ ಗಮನಿಸದೇ ಇರುವ ಅಂಶಗಳನ್ನು ಪರಿಗಣಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ದಿನದ ಕಲಾಪದ ಅವಧಿ ಮುಕ್ತಾಯವಾದ ಕಾರಣ ನ್ಯಾಯಪೀಠವು ವಿಚಾರಣೆಯನ್ನು ಬುಧವಾರ (ಆ.09) ಮಧ್ಯಾಹ್ನ 2.30ಕ್ಕೆ ನಿಗದಿಗೊಳಿಸಿ ಮುಂದೂಡಿತು.

ಪ್ರಕರಣದಲ್ಲಿ ಮೇಲ್ಮನವಿದಾರ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಕೆ.ಎಸ್. ನವೀನ್ ಪರ ಮತ್ತೊಬ್ಬ ಹಿರಿಯ ವಕೀಲ ಗಂಗಾಧರ ಗುರುಮಠ, ಮಾಜಿ ಮಂತ್ರಿ ಎಚ್.ಏಕಾಂತಯ್ಯ, ಮುರುಘಾ ಮಠದ ಪರ ಹಿರಿಯ ವಕೀಲರಾದ ಉದಯ ಹೊಳ್ಳ ಹಾಗೂ ಎಸ್.ಜಯಕುಮಾರ್ ಪಾಟೀಲ್ ಹಾಜರಿದ್ದರು.

ಮಧ್ಯಂತರ ಆದೇಶವೇನಿದೆ?

'ಜಿಲ್ಲಾ ನ್ಯಾಯಾಧೀಶರು ಯಾವುದೇ ಪ್ರಮುಖ ನೀತಿ ನಿರ್ಧಾರ ಕೈಗೊಳ್ಳಬಾರದು. ಮಠ ಮತ್ತು ವಿದ್ಯಾಪೀಠದ ದೈನಂದಿನ ವ್ಯವಹಾರಗಳನ್ನು ಮಾತ್ರವೇ ನಿಭಾಯಿಸಬೇಕು. ಈ ದಿಸೆಯಲ್ಲಿ ಯಾವುದಾದರೂ ನೆರವು ಬೇಕಾದಲ್ಲಿ ಚಿತ್ರದುರ್ಗ ಜಿಲ್ಲಾಧಿಕಾರಿಯನ್ನು ಲಿಖಿತವಾಗಿ ಕೋರಬಹುದು. ಅದರನ್ವಯ ಜಿಲ್ಲಾಧಿಕಾರಿ ತಕ್ಷಣವೇ ಅಗತ್ಯ ನೆರವು ಕಲ್ಪಿಸಬೇಕು' ಎಂದು ಮಧ್ಯಂತರ ಆದೇಶದಲ್ಲಿ ನಿರ್ದೇಶನ ನೀಡಲಾಗಿದೆ. ಅಂತೆಯೇ, ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರು ಕಳೆದ ಜುಲೈ 4ರಂದು ಮಠದ ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಕಾರ್ಪೊರೇಟ್ ಕಂಪನಿಗಳಿಗೆ ಐಐಎಂಬಿ ಪ್ರಾಧ್ಯಾಪಕರ ಪತ್ರ

ಸಾಮರಸ್ಯಕ್ಕೆ ಧಕ್ಕೆ: ಮಾಧ್ಯಮಗಳಿಗೆ ದೇಣಿಗೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದ ಸಾಮರಸ್ಯಕ್ಕೆ ಧಕ್ಕೆ ತರುವ, ದ್ವೇಷ ಭಾಷಣ ಬಿತ್ತರಿಸುವ, ತಪ್ಪು ಮಾಹಿತಿ ರವಾನಿಸುವ ಮಾಧ್ಯಮ ಸಂಸ್ಥೆಗಳಿಗೆ ಹಣ ನೀಡಬಾರದು ಎಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಹಾಲಿ ಹಾಗೂ ನಿವೃತ್ತ ಪ್ರಾಧ್ಯಾಪಕರು ಕಾರ್ಪೊರೇಟ್ ಕಂಪನಿಗಳಿಗೆ ಪತ್ರ ಬರೆದಿದ್ದಾರೆ.

ಕೆಲವು ವರ್ಷಗಳಿಂದ ಟಿ.ವಿ, ಸಾಮಾಜಿಕ ಜಾಲತಾಣಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷಮಯ ಭಾಷಣಗಳು, ಸುದ್ದಿಗಳು ಬಿತ್ತರವಾಗುತ್ತಿವೆ. ಭಾಷೆಯ ಬಳಕೆ ಪ್ರಚೋದನಕಾರಿಯಾಗಿರುತ್ತವೆ. ಹಿಂಸಾತ್ಮಕ, ಅಪರಾಧ ಕೃತ್ಯಗಳನ್ನು ವೈಭವೀಕರಿಸಲಾಗುತ್ತಿದೆ ಎಂದು ಹೇಮಾ ಸ್ವಾಮಿನಾಥನ್, ಅನುಭಾ ಧಸ್ಮನಾ, ಅರ್ಪಿತಾ ಚಟರ್ಜಿ, ಬಿ.ಕೆ.ಚಂದ್ರಶೇಖರ್, ದೀಪಕ್ ಮಲ್ಘನ್, ಕೃಷ್ಣ ಟಿ. ಕುಮಾರ್, ಮಲಯ್ ಭಟ್ಟಾಚಾರ್ಯ ಸೇರಿದಂತೆ 17 ಪ್ರಾಧ್ಯಾಪಕರು ಆತಂಕ ವ್ಯಕ್ತಪಡಿಸಿದ್ದಾರೆ.

ದೇಶದ ಕೋಮು ಗಲಭೆಗಳ ಸಮಯದಲ್ಲಿ ಪೊಲೀಸರು, ಭದ್ರತಾ ಪಡೆಗಳ ನಿಷ್ಕ್ರಿಯತೆ, ಅತ್ಯಾಚಾರ, ಸಾಮೂಹಿಕ ಹತ್ಯೆಯಲ್ಲಿ ಭಾಗಿಯಾಗಿರುವ ಅಪರಾಧಿಗಳನ್ನು ಖುಲಾಸೆಗೊಳಿಸುವುದು ನಡೆದಿದೆ. ಅಧಿಕಾರಸ್ಥರ ಮೌನ ಅಪರಾಧಿಗಳಿಗೆ ಸಮ್ಮತಿಯಂತಾಗಿದೆ ಎಂದಿದ್ದಾರೆ.

ಕಾರ್ಪೊರೇಟ್ ಕಂಪನಿಗಳು ಸುಳ್ಳು ಹಾಗೂ ಪ್ರಚೋದನಾಕಾರಿ ಸುದ್ದಿಗಳನ್ನು ಬಿತ್ತರಿಸುವ ಮಾಧ್ಯಮ ಸಂಸ್ಥೆಗಳಿಗೆ ನೀಡುವ ದೇಣಿಗೆ ಸ್ಥಗಿತಗೊಳಿಸದಿದ್ದರೆ ದೇಶದ ಸಾಮಾಜಿಕ ರಚನೆ, ಆರ್ಥಿಕತೆಗೂ ಧಕ್ಕೆಯಾಗುತ್ತದೆ. ಭಾರತದ ಸಹಿಷ್ಣುತೆ, ಭವಿಷ್ಯದ ಮೇಲೆ ಕರಾಳ ಛಾಯೆ ಆವರಿಸುತ್ತದೆ ಎಂದು ಹೇಳಿದ್ದಾರೆ.



ಹಳೆ ವಿದ್ಯಾರ್ಥಿಗಳ ಸಭೆ

ಸೆಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಹಳೆಯ ವಿದ್ಯಾರ್ಥಿಗಳ ಸಭೆಯಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ಅವರು ಭಾಗವಹಿಸಿದ್ದರು.

ಕಾಂಬೋಡಿಯಾ ಪ್ರವಾಸದಲ್ಲಿ ಎಚ್‌ಡಿಕೆ

ಬೆಂಗಳೂರು: ಕಾಂಬೋಡಿಯಾ ದೇಶದ ಒಳಾಡಳಿತ ಸಚಿವಾಲಯದ ಅಧಿಕೃತ ಆಹ್ವಾನದ ಮೇರೆಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮಂಗಳವಾರ ಅಲ್ಲಿನ ರಾಜಧಾನಿ ಫ್ನೊಮ್ ಪೆನ್ ಪ್ರವಾಸಕ್ಕೆ ತೆರಳಿದ್ದಾರೆ.

'ಫ್ನೊಮ್ ಪೆನ್ ವಿಮಾನ ನಿಲ್ದಾಣದಲ್ಲಿ ಇಳಿದ ಕುಮಾರಸ್ವಾಮಿ ಅವರನ್ನು ಅಲ್ಲಿನ ಒಳಾಡಳಿತ ಸಚಿವಾಲಯದ ಮಹಾ ಪ್ರಧಾನ ಕಾರ್ಯದರ್ಶಿ ಕೆಮ್ ಚೀಟ್ ಸ್ವಾಗತಿಸಿದರು. ಅವರ ಸಲಹೆಗಾರ ಎಸ್. ಸರ್ಜುದ್ದೀನ್ ಕೂಡ ಇದ್ದರು' ಎಂದು ಕುಮಾರಸ್ವಾಮಿ ಅವರ ಕಚೇರಿ ಪ್ರಕಟಣೆ ತಿಳಿಸಿದೆ.

ವಿಧಾನ ಪರಿಷತ್ ಸದಸ್ಯ ಮಂಜೇಗೌಡ, ಮಾಜಿ ಶಾಸಕರಾದ ಸಾ.ರಾ. ಮಹೇಶ್, ಮಂಜುನಾಥ್, ವಿಧಾನ ಪರಿಷತ್ ಮಾಜಿ ಸದಸ್ಯರಾದ ಎಚ್.ಎಂ. ರಮೇಶ್ ಗೌಡ, ಚೌಡರೆಡ್ಡಿ ತೂಪಲ್ಲಿ ಅವರೂ ಕುಮಾರಸ್ವಾಮಿ ಅವರೊಂದಿಗೆ ಪ್ರವಾಸಕ್ಕೆ ತೆರಳಿದ್ದಾರೆ.

'ಗ್ಯಾರಂಟಿ'ಗೆ ಎಸ್‌ಸಿಎಸ್‌ಪಿ ಹಣ: ಜೆಡಿಎಸ್ ವಿರೋಧ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನವನ್ನು 'ಗ್ಯಾರಂಟಿ' ಯೋಜನೆಗಳಿಗೆ ಬಳಸುವುದನ್ನು ಜೆಡಿಎಸ್ ಮಂಗಳವಾರ ವಿರೋಧಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಶಾಸಕ ಎಚ್.ಕೆ. ಕುಮಾರಸ್ವಾಮಿ, 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವುದು ಘೋರ ಅನ್ಯಾಯ. ರಾಜ್ಯ ಸರ್ಕಾರವೇ ಎಸ್‌ಸಿಎಸ್‌ಪಿ- ಟಿಎಸ್‌ಪಿ ಕಾಯ್ದೆ ಉಲ್ಲಂಘಿಸು ತ್ತಿದೆ. ಕಾಯ್ದೆ ರೂಪಿಸಿದವರೇ ಅದನ್ನು ದುರ್ಬಳಕೆ ಮಾಡುತ್ತಿದ್ದಾರೆ. ಪರಿಶಿಷ್ಟರ ಅಭಿವೃದ್ಧಿ ಯೋಜನೆಗಳಿಗೆ ಅನುದಾನದ ಕೊರತೆ ಆಗುತ್ತಿದೆ. ಗ್ಯಾರಂಟಿ ಯೋಜನೆಗಳಿಗೆ ಅನುದಾನ ವರ್ಗಾಯಿಸುವುದನ್ನು ಕೈಬಿಡಬೇಕು' ಎಂದು ಆಗ್ರಹಿಸಿದರು.

ಮಾಜಿ ಸಚಿವ ಆಲ್ಕೋಡ್ ಹನುಮಂತಪ್ಪ, ಮುಖಂಡರಾದ ನಿಸರ್ಗ ನಾರಾಯಣಸ್ವಾಮಿ, ವೀರಭದ್ರಪ್ಪ ಹಾಲಹರವಿ, ದೊಡ್ಡಪ್ಪಗೌಡ ಪಾಟೀಲ ನರಿಬೋಳ ಪತ್ರಿಕಾಗೋಷ್ಠಿಯಲ್ಲಿದ್ದರು.

ಮಲಯಾಳ ಕವಿ ಕೆ. ಸಚ್ಚಿದಾನಂದನ್ ಅಭಿಮತ

'ಬಹುತ್ವವೇ ಭಾರತದ ಜೀವಾಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಹುತ್ವವು ಭಾರತದ ಪ್ರಜಾಪ್ರಭುತ್ವದ ಜೀವಾಳವೇ ಹೊರತು ವಿರೋಧಿಯಲ್ಲ. ಬಹುತ್ವ ಉಳಿಯಬೇಕಾದರೆ ಇಲ್ಲಿರುವ ಹಲವು ಭಾಷೆ, ಧರ್ಮ, ಸಂಸ್ಕೃತಿ ಉಳಿಯಬೇಕು' ಎಂದು ಮಲಯಾಳಂ ಕವಿ ಕೆ. ಸಚ್ಚಿದಾನಂದನ್ ತಿಳಿಸಿದರು.

ಟೊಟೊ ಫಂಡ್ಸ್ ದಿ ಆರ್ಟ್ಸ್ ನಗರದಲ್ಲಿ ಮಂಗಳವಾರ ಆಯೋಜಿಸಿದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ವಿವಿಧತೆಯಲ್ಲಿ ಏಕತೆ ಎಂಬುದಕ್ಕೆ ನಮ್ಮ ಭಾರತ ದೇಶ ಅತ್ಯುತ್ತಮ ಉದಾಹರಣೆ. ನಮ್ಮ ಕಾವ್ಯ, ಕಲೆಯಲ್ಲಿಯೂ ವೈವಿಧ್ಯತೆ ಕಾಣಬಹುದು. ನಮ್ಮಲ್ಲಿನ ಬಹುತ್ವವು ಏಕತೆಗೆ ವಿರುದ್ಧವಾಗಿಲ್ಲ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಎಲ್ಲಾ ಭಾಷೆ, ಸಮುದಾಯದವರು ಒಂದಾಗಿ ಹೋರಾಟ ನಡೆಸಿದರು. ಬಹುತ್ವವೇ ನಮ್ಮ ಶ್ರೀಮಂತ ಭಾರತೀಯ ಸಂಸ್ಕೃತಿಯ ಜೀವಾಳವಾಗಿದೆ. ಆದ್ದರಿಂದ ಬಹುತ್ವದ ಮಹತ್ವವನ್ನು ಅರಿತು ನಾವು ಸಾಗಬೇಕು. ಇಲ್ಲವಾದಲ್ಲಿ ನಮ್ಮ ಸಂಸ್ಕೃತಿ, ಕಲೆ ಮಹತ್ವ ಕಳೆದುಕೊಳ್ಳುತ್ತದೆ' ಎಂದು ಹೇಳಿದರು.

'ಕಾವ್ಯವು ತಾಜಾತನದ ಅನುಭವ ನೀಡಬೇಕು. ಕಲ್ಪನೆ ಮತ್ತು ಅನುಭವಗಳು ಕಾವ್ಯವನ್ನು ಸುಂದರಗೊಳಿಸುತ್ತವೆ. ಈ ಎರಡೂ ಕಾವ್ಯದ ಜೀವಾಳ. ಒಂದು ವಿಷಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವ್ಯಕ್ತಿಗಳಲ್ಲಿ ಕಲ್ಪನೆ ಮತ್ತು ಅನುಭವಗಳು ಬೇರೆಯೇ ಆಗಿರುತ್ತದೆ. ಹೀಗಾಗಿಯೇ ವೈವಿಧ್ಯಮಯವಾದ ಕಾವ್ಯಗಳು ಸೃಷ್ಟಿಯಾಗಲು ಸಾಧ್ಯವಾಗಿದೆ. ಕಾಲ ಬದಲಾದಂತೆ ಕಾವ್ಯದ ಮಾದರಿಗಳೂ ಬದಲಾಗಿವೆ' ಎಂದು ತಿಳಿಸಿದರು.

ಸಂವಾದ ನಿರ್ವಹಿಸಿದ ಕಾದಂಬರಿಗಾರ್ತಿ ಅಂಜುಮ್ ಹಸನ್ 'ಟೊಟೊ ಫಂಡ್ಸ್ ದಿ ಆರ್ಟ್ಸ್ ಸಂಸ್ಥೆಯು ಯುವ ಬರಹಗಾರರನ್ನು ಗುರುತಿಸಿ, ಪ್ರೋತ್ಸಾಹಿಸುತ್ತಿದೆ. ಸಂಗೀತ, ಕಲೆ, ನಾಟಕ ಸೇರಿ ವಿವಿಧ ಕ್ಷೇತ್ರಗಳಿಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ನೆರವಾಗುತ್ತಿದೆ' ಎಂದು ಹೇಳಿದರು.

ಕಳೆದ ವರ್ಷ 'ಟೊಟೊ ಪ್ರಶಸ್ತಿ' ಪಡೆದ ದಾದಾಪೀರ್ ಜೈಮನ್ ಮತ್ತು ಅಪರ್ಣ ಚಿವುಕುಲ ಅವರು ತಮ್ಮ ಬರಹಗಳ ಆಯ್ದ ಭಾಗಗಳನ್ನು ಓದಿದರು.

ಸಂವಾದದಲ್ಲಿ ಕೆ. ಸಚ್ಚಿದಾನಂದನ್ ಮಾತನಾಡಿದರು. ಅಂಜುಮ್ ಹಸನ್ ಇದ್ದಾರೆ —ಪ್ರಜಾವಾಣಿ ಚಿತ್ರ

ತಂತ್ರಜ್ಞಾನ



ಕ್ಯಾನ್ಸರ್ ಜೀವಕೋಶದ ಜೀವಂತ ಕಥೆ

ಕೊಳ್ಳೇಗಾಲ ಶರ್ಮ

ಜೀವಕೋಶ ಎಂದರೆ ಗೊತ್ತಲ್ಲ; ನಿಮ್ಮ, ನಮ್ಮ ದೇಹವನ್ನು ಕಟ್ಟಿರುವ ಜೈವಿಕ ಇಟ್ಟಿಗೆಗಳು. ಅತಿ ಸೂಕ್ಷ್ಮವಾದ, ಕಣ್ಣಿಗೆ ಕಾಣದ, ಶರೀರದ ಘಟಕಗಳು. ಇವು ಕಣ್ಣಿಗೆ ಕಾಣದಿದ್ದರೂ ಅವುಗಳ ಚಟುವಟಿಕೆಯಿಂದ ನಾವೆಲ್ಲರೂ ಪ್ರಭಾವಿತರೇ. ಮೊಟ್ಟೆ ಒಂದು ಜೀವಕೋಶ. ಬಹುಶಃ ಅದರ ಬೆಲೆ ಹತ್ತು ರೂಪಾಯಿಯೊಳಗೇ ಇದೆ. ಆದರೆ ನಮ್ಮ ದೇಹದ ಬೇರೆ ಜೀವಕೋಶಗಳಿಗೂ ಬೆಲೆ ಸಿಗಬಹುದೇ? ಸಿಗಬಹುದು. ಅವು ಜೀವಿವಿಜ್ಞಾನಕ್ಕೆ ಅವಶ್ಯಕವಾದಂಥವು ಎನ್ನಿಸಿದರೆ. ಇದಕ್ಕೆ ಉದಾಹರಣೆ ಹೇಲಾ ಜೀವಕೋಶಗಳು. ಮೊನ್ನೆ ಹೇಲಾ ಜೀವಕೋಶಗಳಿಗೆ ಮೂಲವಾದ ಹೆನ್ರಿಯೆಟ್ಟಾ ಲ್ಯಾಕ್ಸ್ ಎನ್ನುವವಳ ವಾರ ಸುದಾರರ ಜೊತೆಗೆ ಥರ್ಮೋಫಿಶರ್ ಸೈಂಟಿಫಿಕ್ ಎನ್ನುವ ಕಂಪೆನಿ ಒಪ್ಪಂದವೊಂದನ್ನು ಮಾಡಿಕೊಂಡಿರುವುದಾಗಿ ವರದಿಯಾಗಿದೆ. ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಹೆನ್ರಿಯೆಟ್ಟಾ ಲ್ಯಾಕ್ಸಿಗೆ ಆದ ಅನ್ಯಾಯಕ್ಕೆ ಇದು ಪರಿಹಾರ ಎನ್ನಬಹುದು.

ಹೆನ್ರಿಯೆಟ್ಟಾ ಲ್ಯಾಕ್ಸ್ ಒಬ್ಬ ಅಮೆರಿಕನ್ ಕಪ್ಪು ವರ್ಣೀಯ ಮಹಿಳೆ. ಎಪ್ಪತ್ತು ವರ್ಷಗಳ ಹಿಂದೆಯೇ ಈಕೆಯ ಮರಣವಾಗಿದೆ. ಆದರೆ ಅವಳ ಹೆಸರು 'ಹೇಲಾ ಜೀವಕೋಶ'ಗಳ ರೂಪದಲ್ಲಿ ಅಮರವಾಗಿದೆ. ಅಥವಾ ಜೀವಕೋಶಗಳು ಅವಳ ದೇಹದ ಅಂಗವಾಗಿದ್ದರಿಂದ, ಆಕೆ ಇನ್ನೂ ಜೀವಂತವಾಗಿದ್ದಾಳೆ ಎಂದೂ ಹೇಳಬಹುದು. ಎಪ್ಪತ್ತು ವರ್ಷಗಳ ಹಿಂದೆ ಈಕೆ ಗರ್ಭಕೋಶದ ಕ್ಯಾನ್ಸರಿನಿಂದ ಬಳಲುತ್ತಿದ್ದಳು. ಚಿಕಿತ್ಸೆಗಾಗಿ ಆಗಿನ ಸುಪ್ರಸಿದ್ಧ ಜಾನ್ ಹಾಪ್ಕಿನ್ಸ್ ಕ್ಯಾನ್ಸರ್ ಸಂಶೋಧನಾಲಯ ಹಾಗೂ ಆಸ್ಪತ್ರೆಯನ್ನು ಸೇರಿದ್ದಳು. ಚಿಕಿತ್ಸೆ ಗುಣವಾಗದೆ ಮರಣಿಸಿದ್ದಳು.

ಆದರೆ ಆಕೆಯ ಜೀವಕೋಶಗಳು ಇನ್ನೂ ಜೀವಂತವಾಗಿದ್ದುವು. ಆಸ್ಪತ್ರೆಯಲ್ಲಿದ್ದ ಡಾ. ಜಾರ್ಜ್ ಗೇ ಎನ್ನುವ ವಿಜ್ಞಾನಿ ಆಸ್ಪತ್ರೆಗೆ ಬಂದ ಪ್ರತಿಯೊಬ್ಬ ಕ್ಯಾನ್ಸರ್ ರೋಗಿಯಿಂದಲೂ ಬಯಾಪ್ಸಿಗೆಂದು ಜೀವಕೋಶಗಳನ್ನು ಹೆಕ್ಕಿದಾಗ, ಅವನ್ನು ಬೆಳೆಸಲು ಪ್ರಯತ್ನಿಸುತ್ತಿದ್ದ. ಆದರೆ ಬಹುತೇಕ ಅಂತಹ ಕೋಶಗಳೆಲ್ಲವೂ ಅಲ್ಪ ಕಾಲವಷ್ಟೆ ಬದುಕಿ ಇರುತ್ತಿದ್ದುವು. ವಿಚಿತ್ರ ಎಂದರೆ ಲ್ಯಾಕ್ಸಳ ಜೀವಕೋಶಗಳು ಆಕೆಯ ಮರಣದ ನಂತರವೂ ಸಂಖ್ಯೆಯಲ್ಲಿ ಬೆಳೆಯುತ್ತಲೇ ಇದ್ದುವು. ಹೀಗಾಗಿ ಕ್ಯಾನ್ಸರ್ ರೋಗದ ಕಾರಣಗಳು ಹಾಗೂ ಚಿಕಿತ್ಸೆಗೆ ಬೇಕಾದ ಪ್ರಯೋಗಗಳಿಗೆ ಈ ಜೀವಕೋಶಗಳು ನೆರವಾಗಬಹುದು ಎಂದು ತರ್ಕಿಸಿದ ಗೇ ಅವನ್ನು ಹಾಗೆಯೇ ಉಳಿಸಿಕೊಂಡ. ಅಷ್ಟೇ ಅಲ್ಲ. ತನ್ನಂತೆಯೇ ಕ್ಯಾನ್ಸರ್ ಅಧ್ಯಯನದಲ್ಲಿ ತೊಡಗಿಕೊಂಡಿದ್ದವರಿಗೆ ಒಂದಿಷ್ಟು ಹಂಚಿದ. 'ಹೇಲಾ ಕೋಶಗಳು' ಎಂದು ಇವನ್ನು ಗುರುತಿಸಲಾಯಿತು.

ಕ್ರಮೇಣ ಈ ಕೋಶದ ಸಂತಾನಗಳು ವಿಶ್ವದಲ್ಲಿದ್ದ ಬಹುತೇಕ ಕ್ಯಾನ್ಸರ್ ಸಂಶೋಧನಾಲಯಗಳನ್ನು ಸೇರಿದುವು. ಜೊತೆಗೆ ಔಷಧವನ್ನು ರೂಪಿಸುವ ಕಂಪೆನಿಗಳೂ ಇವನ್ನು ಬಳಸಲು ಅರಂಭಿಸಿದುವು. ಮರಣಾನಂತರ ಹೆನ್ರಿಯೆಟ್ಟಾ ಲ್ಯಾಕ್ಸ್ ಜನಪ್ರಿಯಳಾದಳು. ಈ ಮಧ್ಯೆ ರಕ್ತ, ಬಯಾಪ್ಸಿಯ ಜೀವಕೋಶಗಳು, ಮೂಳೆಯ ಮಜ್ಜೆ ಮೊದಲಾದವನ್ನು ರೋಗಿಗಳ ಸಮ್ಮತಿಯಿಲ್ಲದೆ ಪಡೆಯುವುದು ಅನೈತಿಕ ಎನ್ನುವ ನಿಯಮಗಳು ರೂಪುಗೊಂಡವು. ಹೊಸ ಔಷಧಗಳ ಚಿಕಿತ್ಸೆ ನೀಡುವಾಗಲೂ ರೋಗಿಗಳ ಸಮ್ಮತಿ ಪಡೆಯುವುದು ಅನಿವಾರ್ಯವೆನ್ನಿಸಿತು. ಅನುಮತಿ ಪಡೆಯದಂತಹ ಜೀವಕೋಶವೇ ಮೊದಲಾದ ದೇಹದ ಅಂಶಗಳನ್ನು ನಾಶಪಡಿಸಬೇಕೆನ್ನುವ ನಿಯಮ ಗಟ್ಟಿಯಾಯಿತು.



ಆದರೆ ಲ್ಯಾಕ್ಸಳ ಜೀವಕೋಶಗಳ ವಿಷಯದಲ್ಲಿ ಈ ಯಾವುವೂ ನಡೆದಿರಲಿಲ್ಲ. ಆಕೆಗೆ ಚಿಕಿತ್ಸೆ ನೀಡುವಾಗ ಇಂತಹ ನಿಯಮಗಳು ಇರಲಿಲ್ಲವೆಂದರೂ, ಅನಂತರದ ದಿನಗಳಲ್ಲಿ ಈ ಜೀವಕೋಶಗಳನ್ನು ಕೇವಲ ಸಂಶೋಧನೆಗಷ್ಟೆ ಅಲ್ಲದೆ ವ್ಯಾಪಾರಕ್ಕೂ ಬಳಸಲಾಗಿತ್ತು. ಥರ್ಮೋಫೀಶರ್ ಕಂಪೆನಿ ಈ ಜೀವಕೋಶಗಳನ್ನು ಸಂಗ್ರಹಿಸಿ, ಬೆಳೆಸಿ, ಕೆಲವನ್ನು ವಿಶೇಷವಾಗಿ ತಿದ್ದಿ, ಸಂಶೋಧಕರಿಗೆ ಮಾರಾಟ ಮಾಡುತ್ತಿತ್ತು; ಲಾಭ ಪಡೆಯುತ್ತಿತ್ತು.

ಹನ್ನೆರಡು ವರ್ಷಗಳ ಹಿಂದೆ ಹೆನ್ರಿಯೆಟ್ಟಾ ಲ್ಯಾಕ್ಸ್ ಜೀವನ ಕುರಿತು ಪತ್ರಕರ್ತೆ ರೆಬೆಕಾ ಸ್ಕ್ಲೂಟ್ ಎಂಬಾಕೆ 'ದಿ ಇಮ್ಮಾರ್ಟಲ್ ಲೈಫ್ ಆಫ್ ಹೆನ್ರಿಯೆಟ್ಟಾ ಲ್ಯಾಕ್ಸ್' ಎಂಬ ಪುಸ್ತಕವೊಂದನ್ನು ಪ್ರಕಟಿಸಿದ್ದಳು. ಅದರಲ್ಲಿ ಲ್ಯಾಕ್ಸಳ ಅನುಮತಿ ಇಲ್ಲದೆಯೇ ಆಕೆಯ ಜೀವಕೋಶಗಳನ್ನು ಆಸ್ಪತ್ರೆ ಪಡೆದಿದ್ದು ಹಾಗೂ ಅದನ್ನು ವ್ಯಾಪಾರಕ್ಕೆ ಬಳಸಿ ಲಾಭ ಗಳಿಸುತ್ತಿರುವ ಬಗ್ಗೆ ವಿಮರ್ಶಿಸಿದ್ದಳು. ಅಷ್ಟೇ ಅಲ್ಲ, ಬಹುಶಃ ಹೆನ್ರಿಯೆಟ್ಟಾ ಲ್ಯಾಕ್ಸ್ ಅಮೆರಿಕನ್ ಕಪ್ಪು ವರ್ಣೀಯ ಮಹಿಳೆಯಾಗಿದ್ದಕ್ಕೆ ಹೀಗಾಗಿರಬಹುದೇ - ಎನ್ನುವ ಅಸಮಾನತೆಯ ಪ್ರಶ್ನೆಯನ್ನೂ ಮುಂದಿಟ್ಟಳು. ಇದು ವಿವಾದವನ್ನು ಎಬ್ಬಿಸಿತು. ಹೇಲಾ ಜೀವಕೋಶಗಳ ಬಗ್ಗೆ ಜನಸಾಮಾನ್ಯರೂ ತಿಳಿಯುವಂತಾಯಿತು.



> ಹೆನ್ರಿಯೆಟ್ಟಾ ಲ್ಯಾಕ್ಸ್ ಸತ್ತ ಎಪ್ಪತ್ತು ವರ್ಷಗಳ ನಂತರ ಅವಳ ಜೀವಕೋಶಗಳಿಗೆ ಬೆಲೆ ಸಿಕ್ಕಿದೆ.

ತಾನು ಮಾಡಿದ್ದು ತಪ್ಪು ಎಂದು ಜಾನ್ ಹಾಪ್ಕಿನ್ಸ್ ಸಂಸ್ಥೆಯೂ ಹೇಳಿತು. ಪರಿಹಾರವಾಗಿ ಹೆನ್ರಿಯೆಟ್ಟಾ ಲ್ಯಾಕ್ಸಳ ನೆನಪಿನಲ್ಲಿ ಕಟ್ಟಡವೊಂದನ್ನು ಕಟ್ಟಿತು. ಲ್ಯಾಕ್ಸಳ ಕುಟುಂಬವೂ ಈ ಕೋಶಗಳನ್ನು ಸಂಶೋಧನೆಗಾಗಿ ಕೊಡುಗೆ ನೀಡಿದ್ದಾಗಿ ಬರೆದು ಕೊಟ್ಟಿತ್ತು. ಆದರೆ ಅದರಿಂದ ಆಕೆಗಾಗಲಿ ಅವರ ವಾರಸುದಾರರಿಗಾಗಲೀ ಏನು ಲಾಭ ಎನ್ನುವ ಪ್ರಶ್ನೆ ಉಳಿದೇ ಇತ್ತು. ಇದೀಗ ಈ ಪ್ರಶ್ನೆಗೂ ಉತ್ತರ ದೊರಕಿದೆ. ಹೆನ್ರಿಯೆಟ್ಟಾ ಲ್ಯಾಕ್ಸಳ ಕುಟುಂಬದವರೊಟ್ಟಿಗೆ ಥರ್ಮೋಫಿಶರ್ ಕಂಪೆನಿ ಒಂದು ಒಪ್ಪಂದ ಮಾಡಿಕೊಂಡಿದೆ. ಲ್ಯಾಕ್ಸಳ ಜೀವಕೋಶಗಳನ್ನು ಕಂಪೆನಿ ವ್ಯಾಪಾರೋದ್ಯಮಕ್ಕೆ ಬಳಸಿಕೊಳ್ಳಲು ತಮ್ಮ ಅಭ್ಯಂತರವೇನೂ ಇಲ್ಲವೆಂದು ಲ್ಯಾಕ್ಸಳ ಕುಟುಂಬ ಹೇಳಿಕೆ ನೀಡಿದೆ. ಈ ವಿವಾದವನ್ನು ಕೊನೆಗೊಳಿಸಿದೆ. ಹೀಗೆ ಲ್ಯಾಕ್ಸ್ ಸತ್ತ ಎಪ್ಪತ್ತು ವರ್ಷಗಳ ನಂತರ ಅವಳ ಜೀವಕೋಶಗಳಿಗೆ ಬೆಲೆ ಸಿಕ್ಕಿದೆ. ಈ ಒಪ್ಪಂದದ ವಿವರಗಳನ್ನು ಮಾತ್ರ ಕಂಪೆನಿ ಹಾಗೂ ಕುಟುಂಬಗಳು ಗುಟ್ಟಾಗಿಯೇ ಇಟ್ಟಿವೆ.

ಲ್ಯಾಕ್ಸಳ ಜೀವಕೋಶಗಳ ಬಗೆಗಿನ ಸಮಸ್ಯೆ ಪರಿಹಾರವಾಯಿತೇನೋ ಸರಿ. ಆದರೆ ಇದೇ ಬಗೆಯಲ್ಲಿ ಯಾವುದೇ ರೋಗಿಯಿಂದ ಪಡೆದ ಅಂಗಾಂಶಗಳನ್ನು ಸಂಶೋಧನೆಗೆ ಬಳಸಿಕೊಳ್ಳಬಹುದೇ ಎನ್ನುವ ಪ್ರಶ್ನೆ ಮುಂದೆ ಬಂದಿದೆ. ಏಕೆಂದರೆ ಬಹಳ ಅಪರೂಪವಾದ ಹಲವು ಕಾಯಿಲೆಗಳ ಅಧ್ಯಯನ ಆ ಕಾಯಿಲೆಗೆ ಬಲಿಯಾದ ರೋಗಿಗಳ ಅಂಗಾಂಶವನ್ನು ಬಳಸಿಯೇ ಆಗಬೇಕು. ಅದಕ್ಕೆ ಚಿಕಿತ್ಸೆಗೂ ಅದೇ ಹಾದಿಯಾಗುತ್ತದೆ. ಹೊಸ ಔಷಧಗಳು ಫಲಕಾರಿಯೇ ಅಲ್ಲವೇ ಎಂದು ತಿಳಿಯಲೂ ನೆರವಾಗಬಹುದು. ಅಂತಹ ಔಷಧಗಳಿಂದ ಲಾಭ ಪಡೆಯುವ ಕಂಪೆನಿಗಳು ಲಾಭವನ್ನು ಹಂಚಿಕೊಳ್ಳಬೇಕಾಗುತ್ತದೆ.

ಇದೇನೋ ಸರಿ. ಆದರೆ ರೋಗಿಗಳಿಗೆ ಈ ವಿಷಯ ತಿಳಿದಿರಬೇಕಲ್ಲ? ಅದು ಗೊತ್ತಿಲ್ಲದೆ ಕೇವಲ ಚಿಕಿತ್ಸೆ ಪಡೆಯಲೆಂದು ಅನುಮತಿ ನೀಡಿದ್ದರೆ? ಭಾರತದಲ್ಲಿ ಕ್ಲಿನಿಕಲ್ ಸಂಶೋಧನೆ ನಡೆಸುವವರು ಕೊಡುವ ಅನುಮತಿ ಪತ್ರದ ಮೇಲೆ ಅದನ್ನು ಓದದೆಯೇ ರೋಗಿಗಳೂ, ಅವರ ಸಂಬಂಧಿಕರೂ ಸಹಿ ಮಾಡುವುದುಂಟು. ಅಂತಹವರಿಗೆ ನೆರವು ನೀಡುವುದು ಯಾರು? ಈ ಪ್ರಶ್ನೆಗೆ ಉತ್ತರ ಮುಂದೆ ಯಾರಾದರೂ ಹೇಳುವರೋ ಕಾಯೋಣ.

ಸಿಂಧನೂರು ತಾಲ್ಲೂಕಿನ ಈ ಕ್ಯಾಂಪ್ ಗ್ರಾ.ಪಂ.ನಲ್ಲಿ ಬಂಗಾಳಿ, ತಮಿಳು, ತೆಲುಗು ಭಾಷಿಕ ಸದಸ್ಯರೇ ಅಧಿಕ

ಗಾಂಧಿ ಪುರಸ್ಕಾರ ಗ್ರಾಮಕ್ಕೆ 'ಕೋಮು' ಕಂಟಕ

• ಚಂದ್ರಕಾಂತ ಮಸಾನಿ

ಸಿಂಧನೂರು ತಾಲ್ಲೂಕಿನ ಆರ್.ಎಚ್. ಕ್ಯಾಂಪ್–1 (ಪುನರ್ವಸತಿ ಕೇಂದ್ರ) ಪಂಚಾಯಿತಿ ಕಟ್ಟಡ

ರಾಯಚೂರು: ಉತ್ತಮ ಕಾರ್ಯಗಳಿಂದಾಗಿಯೇ ಎರಡು ಬಾರಿ 'ಗಾಂಧಿ ಪುರಸ್ಕಾರ' ಪಡೆದ ಸಿಂಧನೂರು ತಾಲ್ಲೂಕಿನ ಆರ್.ಎಚ್. ಕ್ಯಾಂಪ್–1 (ಪುನರ್ವಸತಿ ಕೇಂದ್ರ) ಗ್ರಾಮ ಪಂಚಾಯಿತಿ ಇದೀಗ 'ಕೋಮು ರಾಜಕೀಯ'ದಿಂದಾಗಿ ರಾಜ್ಯ ಅಷ್ಟೇ ಅಲ್ಲ ನೆರೆಯ ರಾಜ್ಯಗಳಲ್ಲೂ ಸದ್ದು ಮಾಡಿದೆ.

ಬಾಂಗ್ಲಾದೇಶದಲ್ಲಿ ಹಿಂದೂ–ಮುಸ್ಲಿಮರ ನಡುವಿನ ಕೋಮು ಸಂಘರ್ಷದಿಂದಾಗಿ ಬದುಕಿನ ಆಸೆ ಕಳೆದುಕೊಂಡಿದ್ದವರಿಗೆ ಕೇಂದ್ರ ಸರ್ಕಾರ ಇಲ್ಲಿ ಪುನರ್ವಸತಿ ಕಲ್ಪಿಸಿತ್ತು. ಆ ಪುನರ್ವಸತಿ ಕೇಂದ್ರವೇ ಇಂದು ಆರ್.ಎಚ್.ಕ್ಯಾಂಪ್–1 ಆಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಏಳು ಗ್ರಾಮಗಳಿವೆ.

ಮುಸ್ಲಿಂ ಸದಸ್ಯರೊಬ್ಬರು ಪಂಚಾಯಿತಿ ಅಧ್ಯಕ್ಷರಾದ ಒಂದೇ ಕಾರಣಕ್ಕೆ ಬಿಜೆಪಿ ಹಾಗೂ ಜೆಡಿಎಸ್ ಬೆಂಬಲಿತ 15 ಸದಸ್ಯರು ರಾಜೀನಾಮೆ ನೀಡಿದ್ದಾರೆ. ಇದು ಬಂಗಾಲಿ ಪುನರ್ವಸತಿ ಕೇಂದ್ರಗಳ ಜನರ ನೆಮ್ಮದಿಯನ್ನೇ ಹಾಳು ಮಾಡಿದೆ. ಕೋಮುದಳ್ಳುರಿಯಿಂದಾಗಿಯೇ ಬಾಂಗ್ಲಾದೇಶ ತೊರೆದು ಇಲ್ಲಿಗೆ ಬಂದು ನೆಲೆಸಿದರೂ ದ್ವೇಷ ಶಮನಗೊಳ್ಳದಿರುವುದು ಆತಂಕಕ್ಕೆ ಮುಖ್ಯ ಕಾರಣವಾಗಿದೆ.

38 ಸಂಖ್ಯಾಬಲದ ಆರ್.ಎಚ್. ಕ್ಯಾಂಪ್–1 ಪಂಚಾಯಿತಿಯಲ್ಲಿ ಕಾಂಗ್ರೆಸ್ ಬೆಂಬಲಿತ 19, ಬಿಜೆಪಿ, ಜೆಡಿಎಸ್ ಬೆಂಬಲಿತ 15 ಹಾಗೂ

> 'ಮೊದಲ ಬಾರಿಗೆ ಅಧ್ಯಕ್ಷನಾಗಿದ್ದೇನೆ. ನನಗೆ ಗ್ರಾಮಸ್ಥರ ಬೆಂಬಲ ಇದೆ. ಆದರೆ, ಕೆಲವರು ಕೋಮುಬಣ್ಣ ಹಚ್ಚಿ ಜನರ ಮನಸ್ಸು ಕೆಡಿಸುತ್ತಿದ್ದಾರೆ
> **ರೆಹಮತ್ ಪಾಷಾ**
> ಅಧ್ಯಕ್ಷ, ಆರ್.ಎಚ್. ಕ್ಯಾಂಪ್–1 ಗ್ರಾ.ಪಂ.

ಪ್ರಜಾವಾಣಿ ವಿಶೇಷ

ನಾಲ್ವರು ಸ್ವತಂತ್ರ ಸದಸ್ಯರು ಇದ್ದಾರೆ. ಆಗಸ್ಟ್ 2ರಂದು ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿತ್ತು.

ಕಾಂಗ್ರೆಸ್, ಬಿಜೆಪಿ ಬೆಂಬಲಿತರಲ್ಲಿ ತಲಾ ಒಬ್ಬರು ಹಾಗೂ ಸ್ವತಂತ್ರವಾಗಿ ಒಬ್ಬರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ 19 ಮತಗಳೊಂದಿಗೆ ಆಯ್ಕೆಯಾಗಿದ್ದರು. ಒಂದು ಮತ ತಿರಸ್ಕೃತಗೊಂಡಿತ್ತು. ಪಕ್ಷೇತರ ಅಭ್ಯರ್ಥಿಗೆ ಒಂದೇ ಮತ ಬಂದಿತ್ತು. ಬಿಜೆಪಿ ಬೆಂಬಲಿತ ಅಭ್ಯರ್ಥಿ 17 ಮತಗಳನ್ನು ಪಡೆದಿದ್ದರು. ಮತದಾನದವರೆಗೂ ಸುಮ್ಮನಿದ್ದ ಬಿಜೆಪಿ–ಜೆಡಿಎಸ್ ಬೆಂಬಲಿತ ಸದಸ್ಯರು ಮುಸ್ಲಿಂ ವ್ಯಕ್ತಿ ಗೆದ್ದ ನಂತರ ತಕಾರರು ಎತ್ತಿದ್ದಾರೆ.

ಜುಲೈನಲ್ಲಿ ಕ್ಯಾಂಪ್‌ನಲ್ಲಿ ನಡೆದ ಹಿಂದೂ–ಮುಸ್ಲಿಮರ ನಡುವಿನ ಗಲಾಟೆ ವಿಷಯವನ್ನೇ ರಾಜಕೀಯಕ್ಕೆ ಬಳಸಿಕೊಂಡು 15 ಸದಸ್ಯರು ಇದೀಗ ರಾಜೀನಾಮೆ ಸಲ್ಲಿಸಿದ್ದಾರೆ. 'ಅಧ್ಯಕ್ಷರು ಮುಸ್ಲಿಮರು ಎಂಬ ಕಾರಣಕ್ಕೆ ರಾಜೀನಾಮೆ ನೀಡಿದ್ದೇವೆ' ಎಂದು ಬಹಿರಂಗವಾಗಿಯೇ ಹೇಳಿರುವುದು ಚರ್ಚೆಗೆ ಎಡೆಮಾಡಿಕೊಟ್ಟಿದೆ.

ವಿವಾದ ಸೃಷ್ಟಿಸಲು ರಾಜೀನಾಮೆ:

ನಿಯಮಾವಳಿ ಪ್ರಕಾರ ಸದಸ್ಯರು ಅಧ್ಯಕ್ಷರಿಗೆ ನೇರವಾಗಿ ರಾಜೀನಾಮೆ ಸಲ್ಲಿಸಬೇಕು. ಆದರೆ, ಪಿಡಿಒ ಕಚೇರಿಯಲ್ಲಿದ್ದಾಗಲೇ ರಾಜೀನಾಮೆ ಪತ್ರಗಳನ್ನು ಕಚೇರಿಯ ಇನ್‌ವರ್ಡ್‌ನಲ್ಲಿ ಕೊಟ್ಟಿದ್ದಾರೆ. ಪಂಚಾಯಿತಿ ಅಧ್ಯಕ್ಷರಿಗೆ ಸಾಮಾನ್ಯ ಸಭೆ ಕರೆದು ರಾಜೀನಾಮೆ ಸ್ವೀಕರಿಸುವ ಅಧಿಕಾರ ಇದೆ.

ಒಬ್ಬರೇ ಮುಸ್ಲಿಂ ಸದಸ್ಯ

ಒಟ್ಟು 38 ಸದಸ್ಯರಲ್ಲಿ 20 ಬಂಗಾಳಿ, 5 ತಮಿಳು, 8 ಕನ್ನಡ, 4 ತೆಲುಗು ಹಾಗೂ ಒಬ್ಬರು ಮಾತ್ರ ಉರ್ದು ಭಾಷಿಕರಿದ್ದಾರೆ. ಇವರೆಲ್ಲರೂ 50 ವರ್ಷಗಳ ಹಿಂದೆ ಹೊರಗಿನಿಂದ ಬಂದು ನೆಲೆಸಿದ್ದಾರೆ.

ಸಿಂಧನೂರಿನ ಮೂಲದವರೇ ಆಗಿರುವ ರೆಹಮತ್ ಪಾಷಾ ಅವರಿಗೆ ಕನ್ನಡ ಓದುಬರಹ ಬರುತ್ತದೆ. ಇವರ ಸಾಮಾಜಿಕ ಸೇವೆಯನ್ನು ಪರಿಗಣಿಸಿಯೇ ಮತದಾರರು ಆಯ್ಕೆ ಮಾಡಿದ್ದಾರೆ. ಪ್ರಾರಂಭದಲ್ಲಿ ಎಲ್ಲ ಬಂಗಾಳಿ ಸದಸ್ಯರು ಇವರನ್ನೇ ಬೆಂಬಲಿಸಿದ್ದರು. ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಸೋತ ನಂತರ ರಾಜಕೀಯ ವಾತಾವರಣ ಕಲುಷಿತಗೊಂಡಿದೆ ಎಂದು ಗ್ರಾಮಸ್ಥರು ಬೇಸರಿಸುತ್ತಾರೆ.

'ಕಾಂಗ್ರೆಸ್ ಚುನಾಯಿತ ಸದಸ್ಯರ ಸಭೆಯಲ್ಲಿ ಬಂಗಾಲಿ ಸಮುದಾಯದವರೇ ಅಧಿಕ ಇರುವ ಕಾರಣ ಬಂಗಾಲಿಯವರು ಸದಸ್ಯರಾಗುವುದು ಒಳಿತು ಎಂದು ನಾನೇ ಸಲಹೆ ನೀಡಿದ್ದೆ. ಆದರೆ, ಬಂಗಾಲಿಗಳು ನನ್ನ ಮೇಲೆ ವಿಶ್ವಾಸ ಇಟ್ಟು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವಂತೆ ಮನವಿ ಮಾಡಿ, ಆಯ್ಕೆಯನ್ನೂ ಮಾಡಿದರು' ಎಂದು ರೆಹಮತ್ ಪಾಷಾ ಪ್ರತಿಕ್ರಿಯಿಸಿದ್ದಾರೆ.

'ಜಾತಿ ರಾಜಕಾರಣ ತಪ್ಪು'

'ಬಿಜೆಪಿ ಬೆಂಬಲಿತನಾಗಿ ನಾನು ಸ್ಪರ್ಧಿಸಿದ್ದೆ. 19 ಜನ ನನಗೆ ಆಶ್ವಾಸನೆ ನೀಡಿದ್ದರೂ 17 ಜನ ಮಾತ್ರ ನನ್ನ ಪರವಾಗಿ ಮತ ಚಲಾಯಿಸಿದ್ದರು. ನಾನು ಆಸ್ಪತ್ರೆಗೆ ದಾಖಲಾಗಿದ್ದ ಅವಧಿಯಲ್ಲಿ 15 ಜನ ರಾಜೀನಾಮೆ ಸಲ್ಲಿಸಿದ್ದು, ಕಾರಣ ತಿಳಿದಿಲ್ಲ. ನಾನು ರಾಜೀನಾಮೆ ಕೊಟ್ಟಿಲ್ಲ' ಎಂದು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಪರಾಭವಗೊಂಡ ಸದಸ್ಯ ಪ್ರದೀಪ ದಾಸರ್ ತಿಳಿಸಿದರು.

'ಪಂಚಾಯಿತಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಮುಸ್ಲಿಮರು ಅಧ್ಯಕ್ಷರಾಗಿಲ್ಲ. ಮುಸ್ಲಿಂ ಎಂಬ ಕಾರಣಕ್ಕೆ ಹೊಸ ಅಧ್ಯಕ್ಷರ ಆಯ್ಕೆಯನ್ನು ವಿರೋಧಿಸಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗೌರವಿಸುತ್ತೇನೆ. ರಾಜೀನಾಮೆ ನೀಡಿದ 15 ಜನರನ್ನು ಕರೆಸಿ ಈಗಾಗಲೇ ತಾಲ್ಲೂಕು ಪಂಚಾಯಿತಿ ಇಒ ಮಾತನಾಡಿದ್ದಾರೆ. ಅಭಿವೃದ್ಧಿಗೆ ಆದ್ಯತೆ ಕೊಟ್ಟು ರಾಜೀನಾಮೆ ಹಿಂದಕ್ಕೆ ಪಡೆಯುವಂತೆ ಮನವಿ ಮಾಡಿದ್ದಾರೆ. ರಾಜೀನಾಮೆ ಹಿಂದಕ್ಕೆ ಪಡೆಯುವ ವಿಚಾರ ಸದಸ್ಯರಿಗೆ ಬಿಟ್ಟಿದ್ದು' ಎಂದು ಹೇಳಿದರು.

'ಕಾನೂನು ಬದ್ಧವಾಗಿಯೇ ನಡೆದುಕೊಳ್ಳಬೇಕಿದ್ದರೆ ಸದಸ್ಯರು ನನಗೆ ರಾಜೀನಾಮೆ ಪತ್ರ ಸಲ್ಲಿಸಬಹುದಿತ್ತು. ಆದರೆ, ಸದಸ್ಯರು ಟಪಾಲು ಬರುವ ಇನ್‌ವರ್ಡ್‌ನಲ್ಲಿ ಕೊಟ್ಟಿದ್ದಾರೆ. ರಾಜೀನಾಮೆ ಪತ್ರ ವಾಪಸ್ ಪಡೆಯಲು ಅಧ್ಯಕ್ಷರಿಗೇ ಮನವಿ ಕೊಡಬೇಕಾಗುತ್ತದೆ. ರಾಜೀನಾಮೆ ಕೊಟ್ಟು 15 ದಿನ ಕಳೆದರೂ ಸುಮ್ಮನೆ ಕುಳಿತರೆ ಸ್ವೀಕೃತ ಎಂದೇ ಭಾವಿಸಬೇಕಾಗುತ್ತದೆ' ಎಂದು ಲಿಂಗಸುಗೂರು ಉಪ ವಿಭಾಗಾಧಿಕಾರಿ ಅವಿನಾಶ ಶಿಂದೆ ಹೇಳಿದ್ದಾರೆ.

'15 ಸದಸ್ಯರು ವೈಯಕ್ತಿಕ ಕಾರಣ ನೀಡಿ ರಾಜೀನಾಮೆ ಕೊಟ್ಟಿದ್ದಾರೆ. ರಾಜೀನಾಮೆ ಪತ್ರಗಳು ಪಂಚಾಯಿತಿಯಲ್ಲಿದ್ದು, ಸದಸ್ಯರ ಮನವೊಲಿಸುವ ಪ್ರಯತ್ನ ನಡೆದಿದೆ. 15 ದಿನ ಕಾದು ಅವುಗಳನ್ನು ಉಪ ವಿಭಾಗಾಧಿಕಾರಿ ಅವರಿಗೆ ಒಪ್ಪಿಸುತ್ತೇವೆ. ಮುಂದಿನ ನಿರ್ಧಾರ ಚುನಾವಣಾ ಅಧಿಕಾರಿಗಳಿಗೆ ಬಿಟ್ಟಿದ್ದು' ಎಂದು ಪಂಚಾಯಿತಿ ಅಧ್ಯಕ್ಷ ರೆಹಮತ್ ಪಾಷಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

'ಪಂಚಾಯಿತಿ ಸದಸ್ಯರು ಸ್ವಇಚ್ಛೆಯಿಂದ ರಾಜೀನಾಮೆ ನೀಡಿದ ದಿನದಿಂದ 15 ದಿನ ಕಾಯುತ್ತೇವೆ. ಈ ಅವಧಿಯಲ್ಲಿ ರಾಜೀನಾಮೆ ವಾಪಸ್ ಪಡೆದಿರುವ ಕುರಿತು ಲಿಖಿತ ಪತ್ರ ಕೊಟ್ಟರೆ ಸದಸ್ಯತ್ವ ಮುಂದುವರಿಯಲಿದೆ. ಇಲ್ಲದಿದ್ದರೆ ನಂತರ ತೆರವಾದ ಸ್ಥಾನಗಳಿಗೆ ಹೊಸದಾಗಿ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸುತ್ತೇವೆ' ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಚಂದ್ರಶೇಖರ ನಾಯಕ ತಿಳಿಸಿದ್ದಾರೆ.

ಸದಸ್ಯರು ತರಾಟೆಗೆ: ರಾಜೀನಾಮೆ ಸಲ್ಲಿಸಿದ ಸದಸ್ಯರ ವಿರುದ್ಧ ಗ್ರಾಮಗಳಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದೆ. 'ನೀವು ರಾಜೀನಾಮೆ ಸಲ್ಲಿಸುವುದೇ ಆಗಿದ್ದರೆ ಚುನಾವಣೆಗೆ ಸ್ಪರ್ಧಿಸಿದ್ದು ಏಕೆ?' ಎಂದು ಪಂಚಾಯಿತಿಗೆ ಆಯ್ಕೆಯಾಗಿರುವ ಸದಸ್ಯರು, ಮಹಿಳಾ ಸದಸ್ಯರು ಹಾಗೂ ಅವರ ಗಂಡಂದಿರನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಮಿತ್ ಶಾ ಅವರಿಗೆ ಬಸವರಾಜ ಬೊಮ್ಮಾಯಿ ಹೂಗುಚ್ಛ ನೀಡಿದರು

ಶಾ–ಬೊಮ್ಮಾಯಿ ಭೇಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಅವರು ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರನ್ನು ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಈ ಭೇಟಿಯ ವೇಳೆ ರಾಜ್ಯದ ಪ್ರಸಕ್ತ ರಾಜಕೀಯ ವಿಚಾರಗಳ ಕುರಿತು ಚರ್ಚೆ ನಡೆಸಲಾಯಿತು ಎಂದು ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.

ರಾಜ್ಯದಲ್ಲಿ ವಿಧಾನಸಭೆ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷಗಳ ನಾಯಕರ ಆಯ್ಕೆ ಇನ್ನೂ ಆಗಿಲ್ಲ. ವಿಧಾನಸಭೆ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಬೊಮ್ಮಾಯಿ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ವರಿಷ್ಠರನ್ನು ಭೇಟಿ ಮಾಡುವ ಉದ್ದೇಶದಿಂದ ಬೊಮ್ಮಾಯಿ ಭಾನುವಾರ ರಾತ್ರಿಯೇ ದೆಹಲಿಗೆ ಬಂದಿದ್ದರು. ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಲು ಸೋಮವಾರ ದಿನವಿಡೀ ಪ್ರಯತ್ನ ನಡೆಸಿದ್ದರು. ಆದರೆ, ಭೇಟಿ ಸಾಧ್ಯವಾಗಿರಲಿಲ್ಲ. ಮಂಗಳವಾರ ಮಧ್ಯಾಹ್ನದ ನಂತರ ಬೊಮ್ಮಾಯಿ ಅವರಿಗೆ ಶಾ ಅವರನ್ನು ಭೇಟಿ ಮಾಡುವ ಅವಕಾಶ ಲಭಿಸಿತು. ನಡ್ಡಾ ಅವರನ್ನು ಬುಧವಾರ ಭೇಟಿ ಮಾಡುವ ಸಾಧ್ಯತೆ ಇದೆ.

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಹ ದೆಹಲಿಗೆ ಬಂದಿದ್ದು, ಅಮಿತ್ ಶಾ ಹಾಗೂ ನಡ್ಡಾ ಭೇಟಿಗೆ ಕಾಲಾವಕಾಶ ಕೇಳಿದ್ದಾರೆ.

ಉಡುಪಿ: ಸಿಐಡಿ ತನಿಖೆ ಆರಂಭ

ಪ್ರಜಾವಾಣಿ ವಾರ್ತೆ

ಉಡುಪಿ: ಇಲ್ಲಿಯ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ವಿಡಿಯೊ ಚಿತ್ರೀಕರಣ ಪ್ರಕರಣದ ಕುರಿತು ಮಾಹಿತಿ ಪಡೆಯಲು ಮಂಗಳವಾರ ಸಿಐಡಿ ಅಧಿಕಾರಿಗಳ ತಂಡ ಉಡುಪಿಗೆ ಭೇಟಿ ನೀಡಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಭೇಟಿ ನೀಡಿದ ಸಿಐಡಿ ಡಿವೈಎಸ್‌ಪಿ ಅಂಜುಮಾಲಾ ನಾಯಕ್ ನೇತೃತ್ವದ ಅಧಿಕಾರಿಗಳ ತಂಡ, ಎಸ್‌ಪಿ ಹಾಕೆ ಅಕ್ಷಯ್ ಮಚ್ಚಿಂದ್ರ ಹಾಗೂ ಪ್ರಕರಣದ ಹಿಂದಿನ ತನಿಖಾಧಿಕಾರಿಯಾಗಿದ್ದ ಡಿವೈಎಸ್‌ಪಿ ಬೆಳ್ಳಿಯಪ್ಪ ಅವರ ಬಳಿ ಪ್ರಕರಣದ ಮಾಹಿತಿ ಪಡೆಯಿತು.

ಉಡುಪಿಯಲ್ಲಿ ಬೀಡುಬಿಟ್ಟಿರುವ ತಂಡ ಶೀಘ್ರ ಕಾಲೇಜಿಗೆ ಭೇಟಿ ನೀಡಲಿದ್ದು ಆಡಳಿತ ಮಂಡಳಿ, ಪ್ರಕರಣದ ಸಂತ್ರಸ್ತೆ ಹಾಗೂ ಆರೋಪಿತ ವಿದ್ಯಾರ್ಥಿನಿಯರನ್ನು ವಿಚಾರಣೆಗೊಳಪಡಿಸಲಿದೆ.

ಪ್ರಕರಣದಲ್ಲಿ ಈಚೆಗೆ ಸಂತ್ರಸ್ತೆ ನ್ಯಾಯಾಲಯಕ್ಕೆ ಹಾಜರಾಗಿ ಹೇಳಿಕೆ ದಾಖಲಿಸಿದ್ದು, ಆರೋಪಿತ ವಿದ್ಯಾರ್ಥಿಯರು ಜಾಮೀನು ಪಡೆದುಕೊಂಡಿದ್ದಾರೆ. ಪ್ರಕರಣದಲ್ಲಿ ಇದುವರೆಗೂ 70ಕ್ಕೂ ಹೆಚ್ಚು ಮಂದಿಯಿಂದ ಹೇಳಿಕೆ ಪಡೆದುಕೊಳ್ಳಲಾಗಿದೆ.

ಆಳ್ವಾಸ್‌ನ 99 ವಿದ್ಯಾರ್ಥಿಗಳು ತೇರ್ಗಡೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಸಿ.ಎ ಫೌಂಡೇಷನ್ ಪರೀಕ್ಷೆಯಲ್ಲಿ ಆಳ್ವಾಸ್ ಪದವಿ ಮತ್ತು ಪದವಿಪೂರ್ವ ಕಾಲೇಜಿನ 99 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಶ್ರೀಲಕ್ಷ್ಮೀ ಟಿ. (306), ಆದಿತ್ಯ ಶರ್ಮ (303), ಭಾವನಾ (302), ವೈಷ್ಣವಿ ಬಿ.ವಿ.(297), ಅಮನ್‌ರಾಜ್ (291), ಕಾರ್ತಿಕ್ ಇಂದ್ರ (290), ರಾನ್ಸನ್ (284), ಶಿವಾನಿ (284), ಸುಮಂತ್ ಮೋಹನ್ (284), ಕೆ.ದಿಶಾ ರಾವ್ (273), ಪೃಥ್ವಿ (282), ರಾಮನಾಥ ಪ್ರಭು (281), ಸೃಷ್ಟಿ(281), ಚಿನ್ಮಯಿ ಆಳ್ವಿ (280) ಅವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದರು.

2023ರ ಫೆಬ್ರುವರಿಯಲ್ಲಿ ಪ್ರಕಟಗೊಂಡಿದ್ದ ಸಿ.ಎ ಫೌಂಡೇಷನ್ ಪರೀಕ್ಷೆಯಲ್ಲಿ 97 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಈಗ 99 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಈ ವರ್ಷ ಸಂಸ್ಥೆಯ ಒಟ್ಟು 196 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಅವರು ಹೇಳಿದರು.

ಶ್ರೀಲಕ್ಷ್ಮಿ

ಭಾವನಾ

ವೈಷ್ಣವಿ

ಅಮನ್‌ರಾಜ್

ಕಾರ್ತಿಕ್

ಆದಿತ್ಯ

ದೇಗುಲದಲ್ಲಿ ಪರಿಶಿಷ್ಟ ವ್ಯಕ್ತಿಯ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಕುರಗುಂದ ಗ್ರಾಮದ ಆಂಜನೇಯ ದೇವಸ್ಥಾನಕ್ಕೆ ಹೋಗಿದ್ದ ಪರಿಶಿಷ್ಟ ಸಮುದಾಯದ ರವಿಸಿದ್ದಯ್ಯ ಎಂಬುವವರ ಮೇಲೆ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿರುವ ಕುರಿತು ಜಾವಗಲ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ.

ಆ.5 ರಂದು ಅವರು ದರ್ಶನಕ್ಕೆಂದು ಹೋದಾಗ, ಅದೇ ಗ್ರಾಮದ ಹೇಮಂತ, ಪ್ರವೀಣ, ರಮೇಶರೆಡ್ಡಿ, ಪ್ರತಾಪ್, ಮಹದೇವಪ್ಪ, ಮನೋಜ, ಸುನಿಲ್, ಅಮಿತ್, ಸಂಜು, ರವಿಕುಮಾರ, ರೇಣುಕ ಎಂಬುವವರು ತಡೆಯೊಡ್ಡಿದ್ದರು.

'ಟವೆಲ್‌ನಿಂದ ಕುತ್ತಿಗೆ ಬಿಗಿದು, ಕೆಳಕ್ಕೆ ಕೆಡವಿ ಕಾಲಿನಿಂದ ತುಳಿದಿದ್ದು, ರಸ್ತೆಯ ಮೇಲೆ ಎಳೆದು, ಊಟ ಮಾಡಿ ಬಿಸಾಕಿದ ಎಲೆಗಳನ್ನು ಮೈಮೇಲೆ ಹಾಕಿದರು. ಬಟ್ಟೆಗಳನ್ನು ಹರಿದು, ಅರೆಬೆತ್ತಲೆ ಮಾಡಿ, ದೊಣ್ಣೆಗಳಿಂದ ಹಲ್ಲೆ ಮಾಡಿದರು. ಜಾತಿ ನಿಂದನೆ ಮಾಡಿದರು' ಎಂದು ದೂರಿನಲ್ಲಿ ತಿಳಿಸಲಾಗಿದೆ.

'ದೇವಾಲಯಕ್ಕೆ ಬಂದರೆ ಮನೆಗೆ ಬೆಂಕಿ ಹಾಕಿ ಕುಟುಂಬವನ್ನು ನಾಶ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಯಾರೂ ಇವನಿಗೆ ಅನ್ನ, ನೀರು ಕೊಡಬೇಡಿ ಎಂದು ಬಹಿಷ್ಕಾರ ಹಾಕಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ. ಜಾತಿ ನಿಂದನೆ ಮಾಡಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆ.7 ರಂದು ಜಾವಗಲ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಲೈಂಗಿಕ ಅಪರಾಧದ ಆರೋಪಿಗಳಿಗೆ ಸರ್ಕಾರಿ ಉದ್ಯೋಗ ಇಲ್ಲ: ಗೆಹಲೋತ್

ಜೈಪುರ(ಪಿಟಿಐ): ಅತ್ಯಾಚಾರ ಹಾಗೂ ಇತರ ಲೈಂಗಿಕ ಅಪರಾಧ ಪ್ರಕರಣಗಳ ಆರೋಪಿಗಳನ್ನು ಸರ್ಕಾರಿ ಉದ್ಯೋಗಗಳಿಂದ ನಿಷೇಧಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮಂಗಳವಾರ ಹೇಳಿದ್ದಾರೆ.

ಭಿಲ್ವಾರದಲ್ಲಿ 14 ವರ್ಷದ ಬಾಲಕಿಯ ಅತ್ಯಾಚಾರ ಮತ್ತು ಕೊಲೆ ಕುರಿತು ರಾಜ್ಯದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿರುವ ಬೆನ್ನಲ್ಲೇ, ಅವರು ಸರ್ಕಾರದ ಈ ತೀರ್ಮಾನ ತಿಳಿಸಿದ್ದಾರೆ.

'ಇಂತಹ ಪ್ರಕರಣಗಳ ಆರೋಪಿಗಳ ಕುರಿತು ಎಲ್ಲ ಪೊಲೀಸ್ ಠಾಣೆಗಳಲ್ಲಿ ದಾಖಲೆಗಳನ್ನು ನಿರ್ವಹಿಸಲಾಗುವುದು. ಸರ್ಕಾರಿ ನೌಕರಿಗಾಗಿ ಸಲ್ಲಿಸಬೇಕಿರುವ ನಡತೆ ಪ್ರಮಾಣಪತ್ರದಲ್ಲಿ ಈ ಕುರಿತು ನಮೂದಿಸಲಾಗುವುದು' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಯುಸಿಸಿ ವಿರುದ್ಧ ಕೇರಳ ನಿರ್ಣಯ

ತಿರುವನಂತಪುರ (ಪಿಟಿಐ): ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿ ಮಾಡದಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಕೇರಳ ವಿಧಾನಸಭೆ ಮಂಗಳವಾರ ಅವಿರೋಧವಾಗಿ ಅಂಗೀಕರಿಸಿತು.

ಸದನದಲ್ಲಿ ನಿರ್ಣಯ ಮಂಡಿಸಿದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಏಕರೂಪ ನಾಗರಿಕ ಸಂಹಿತೆ ಅನುಷ್ಠಾನವು ಕೇಂದ್ರ ಸರ್ಕಾರದ ಏಕಪಕ್ಷೀಯ ಮತ್ತು ಆತುರದ ನಿರ್ಧಾರ' ಎಂದು ಹೇಳಿದರು.

'ಸಂಘ ಪರಿವಾರ ಹೇಳುತ್ತಿರುವ ಯುಸಿಸಿ ಸಂವಿಧಾನಕ್ಕೆ ಪೂರಕವಾಗಿಲ್ಲ ಬದಲಾಗಿ 'ಮನುಸ್ಮೃತಿ' ಆಧಾರಿತವಾಗಿದೆ' ಎಂದು ದೂರಿದರು.

ಸಿಬಿಐ ತನಿಖೆಗೆ ಬಾರದ ಶಿಫಾರಸು

ರಾಜ್ಯದ ಸಹಕಾರಿ ಬ್ಯಾಂಕ್‌ಗಳಲ್ಲಿ ಅಕ್ರಮ ● ಗೃಹ ಸಚಿವಾಲಯ ಹೇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಕೆಲವು ಸಹಕಾರಿ ಬ್ಯಾಂಕ್‌ಗಳಲ್ಲಿ ನಡೆದಿರುವ ಹಣಕಾಸು ಅವ್ಯವಹಾರಗಳ ಕುರಿತು ಸಿಬಿಐ ತನಿಖೆ ನಡೆಸುವಂತೆ ಕರ್ನಾಟಕ ಸರ್ಕಾರವು ಯಾವುದೇ ಶಿಫಾರಸು ಮಾಡಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ.

ರಾಜ್ಯಸಭೆಯಲ್ಲಿ ಬಿಜೆಪಿಯ ಸದಸ್ಯ ಲಹರ್ ಸಿಂಗ್ ಸರೋಯಾ ಮಂಗಳವಾರ ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಹಣಕಾಸು ಖಾತೆಯ ರಾಜ್ಯ ಸಚಿವ ಭಾಗವತ್ ಕರಾಡ್ ಈ ಉತ್ತರ ನೀಡಿದ್ದಾರೆ.

ದೇಶದ ವಿವಿಧ ಸಹಕಾರಿ ಬ್ಯಾಂಕ್‌ಗಳಲ್ಲಿ 2020–21ನೇ ಸಾಲಿನಲ್ಲಿ ₹1,985 ಕೋಟಿ, 2021–22ರಲ್ಲಿ ₹536 ಕೋಟಿ ಹಾಗೂ 2022–23ರಲ್ಲಿ ₹791 ಕೋಟಿ ಅಕ್ರಮ ನಡೆದಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಬೆಂಗಳೂರಿನ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಅವ್ಯವಹಾರ ಹಗರಣವನ್ನು ಸಿಬಿಐಗೆ ವಹಿಸಲು ಎಲ್ಲ ರೀತಿಯ ತಯಾರಿ ನಡೆದಿದೆ ಎಂದು ಕರ್ನಾಟಕದ ಸಹಕಾರ ಸಚಿವರು ಈ ವರ್ಷದ ಜನವರಿಯಲ್ಲಿ ತಿಳಿಸಿದ್ದರು. ಸಿಐಡಿ, ಸಹಕಾರ ಇಲಾಖೆ ಮತ್ತು ಇ.ಡಿ (ಜಾರಿ ನಿರ್ದೇಶನಾಲಯ) ಹಗರಣದ ತನಿಖೆ ನಡೆಸಿ, ₹1,290 ಕೋಟಿ ವಂಚನೆ ಪತ್ತೆಹಚ್ಚಿವೆ. ಸಿಐಡಿ ತನಿಖೆ ಸಮರ್ಪಕವಾಗಿ ನಡೆಯುತ್ತಿದೆ. ಈ ಹಂತದಲ್ಲಿ ಸಿಬಿಐಗೆ ವಹಿಸಿದರೆ ತನಿಖೆ ವಿಳಂಬ ಆಗಬಹುದು ಎಂಬ ಕಾರಣಕ್ಕೆ ತಡೆಹಿಡಿಯಲಾಗಿತ್ತು ಎಂದೂ ಸಮಜಾಯಿಷಿ ನೀಡಿದ್ದರು.

ಜೂನ್‌ನಲ್ಲಿ ನಡೆದ ವಿಧಾನ ಪರಿಷತ್ ಅಧಿವೇಶನದಲ್ಲಿ ಉತ್ತರಿಸಿದ್ದ ಸಹಕಾರ ಸಚಿವ ಕೆ.ಎನ್.ರಾಜಣ್ಣ, 'ಈ ಪ್ರಕರಣದ ವಿಚಾರಣೆಯನ್ನು ಸಿಬಿಐಗೆ ವಹಿಸುವ ಬಗ್ಗೆ ಇದೇ ವರ್ಷದ ಜನವರಿ 17ರಂದೇ ಅಂದಿನ ಸಹಕಾರ ಸಚಿವರ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ, ನಿರ್ಣಯವನ್ನು ಜಾರಿಗೊಳಿಸಲಿಲ್ಲ' ಎಂದು ಹೇಳಿದ್ದರು. ಅವ್ಯವಹಾರದ ತನಿಖೆಯನ್ನು ಸಿಬಿಐಗೆ ವಹಿಸಲು ಕ್ರಮ ಕೈಗೊಳ್ಳಲಾಗುವುದು ಎಂದೂ ಭರವಸೆ ನೀಡಿದ್ದರು.

ರಾಜ್ಯಕ್ಕಿಲ್ಲ ಏಮ್ಸ್

ಹುಬ್ಬಳ್ಳಿ–ಧಾರವಾಡದಲ್ಲಿ ಏಮ್ಸ್ ಸ್ಥಾಪಿಸುವಂತೆ ಕರ್ನಾಟಕ ಸರ್ಕಾರವು ಪ್ರಸ್ತಾವನೆ ಸಲ್ಲಿಸಿತ್ತು. ಆದರೆ, ಅದಕ್ಕೆ ಅನುಮೋದನೆ ನೀಡಿಲ್ಲ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಸ್ಪಷ್ಟಪಡಿಸಿದೆ.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ಲಹರ್ ಸಿಂಗ್ ಸರೋಯಾ ಅವರ ಮತ್ತೊಂದು ಪ್ರಶ್ನೆಗೆ ಉತ್ತರ ನೀಡಿರುವ ಆರೋಗ್ಯ ಖಾತೆಯ ರಾಜ್ಯ ಸಚಿವರಾದ ಡಾ.ಭಾರತಿ ಪ್ರವೀಣ್ ಪವಾರ್, 'ತೃತೀಯ ಆರೋಗ್ಯ ಸೌಲಭ್ಯಗಳ ಲಭ್ಯತೆಯ ಅಂತರವನ್ನು ಗಮನದಲ್ಲಿಟ್ಟುಕೊಂಡು ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯಡಿ ದೇಶದ ವಿವಿಧ ಭಾಗಗಳಲ್ಲಿ ಏಮ್ಸ್ ಸ್ಥಾಪಿಸಲಾಗುತ್ತಿದೆ. ಈ ಯೋಜನೆಯಡಿ ಈವರೆಗೆ 22 ಏಮ್ಸ್‌ಗಳನ್ನು ಮಂಜೂರು ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

ಹೇಮಂತ್ ಸೊರೇನ್‌ಗೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗಾಗಿ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ನೀಡಿದೆ ಎಂದು ಅಧಿಕೃತ ಮೂಲಗಳು ಮಂಗಳವಾರ ತಿಳಿಸಿವೆ.

ರಾಂಚಿಯಲ್ಲಿರುವ ಕಚೇರಿಗೆ ಹಾಜರಾಗಿ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಹೇಳಿಕೆ ದಾಖಲಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿವೆ. ಯಾವ ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿದೆ ಎಂದು ತಕ್ಷಣಕ್ಕೆ ತಿಳಿದುಬಂದಿಲ್ಲ.

ಹಿಂದೂಯೇತರರಿಗೆ ಪ್ರವೇಶ ನಿಷೇಧ ಕೋರಿ ಪಿಐಎಲ್

ಜ್ಞಾನವಾಪಿ ಆವರಣ ಮುಚ್ಚುವ ಕೋರಿಕೆಗೆ ನಕಾರ

ಪ್ರಜಾವಾಣಿ ವಾರ್ತೆ

ಲಖನೌ: ಜ್ಞಾನವಾಪಿ ಮಸೀದಿ ಆವರಣವನ್ನು ಸಂಪೂರ್ಣವಾಗಿ ಮುಚ್ಚಲು ಹಾಗೂ ಹಿಂದೂಯೇತರರಿಗೆ ಈ ಆವರಣದಲ್ಲಿ ಪ್ರವೇಶ ನಿಷೇಧ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಅಲಹಾಬಾದ್ ಹೈಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿಗಳಾದ ಪ್ರೀತಿಂಕರ್ ದಿವಾಕರ್ ಮತ್ತು ನ್ಯಾಯಮೂರ್ತಿ ಆಶುತೋಷ್ ಶ್ರೀವಾಸ್ತವ ಅವರನ್ನೊಳಗೊಂಡ ವಿಭಾಗೀಯ ನ್ಯಾಯಪೀಠವು ಪಿಐಎಲ್‌ನಲ್ಲಿ ಯಾವುದೇ ಹುರುಳಿಲ್ಲ ಎಂದು ಅರ್ಜಿಯನ್ನು ವಜಾಗೊಳಿಸಿತು. ವಿಶ್ವ ವೈದಿಕ ಸನಾತನ ಸಂಘದ ಅಧ್ಯಕ್ಷ ಜಿತೇಂದ್ರ ಸಿಂಗ್ ವಿಸೇನ್ ಹಾಗೂ ಮತ್ತೊಬ್ಬರು ಪಿಐಎಲ್ ಸಲ್ಲಿಸಿದ್ದರು.

ಹಿಂದೂ ಅರ್ಜಿದಾರರು ಜ್ಞಾನವಾಪಿ ಮಸೀದಿಯ ಗೋಡೆಗಳ ಮೇಲಿರುವ ಹಿಂದೂ ದೇವತೆಗಳನ್ನು ಪೂಜಿಸಲು ಕೋರಿ ಸಲ್ಲಿಸಿರುವ ಶೃಂಗಾರ ಗೌರಿ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಹಾಗಾಗಿ, ಹಿಂದೂಯೇತರರಿಗೆ ಮಸೀದಿ ಆವರಣದಲ್ಲಿ ಪ್ರವೇಶ ನಿಷೇಧಿಸಬೇಕೆಂದು ಅರ್ಜಿದಾರರು ಪ್ರತಿಪಾದಿಸಿದ್ದರು.

ಈ ನಡುವೆ ಮಸೀದಿಯ ಸಂಕೀರ್ಣದೊಳಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ತಂಡವು ನಡೆಸುತ್ತಿರುವ ವೈಜ್ಞಾನಿಕ ಸಮೀಕ್ಷೆಯು ಮಂಗಳವಾರ ಆರನೇ ದಿನಕ್ಕೆ ಕಾಲಿಟ್ಟಿದೆ.

ದ್ವೇಷ ಭಾಷಣ ವಿರುದ್ಧ ಅರ್ಜಿ

ನವದೆಹಲಿ (ಪಿಟಿಐ): ಹರಿಯಾಣ ಸೇರಿ ದೇಶದ ವಿವಿಧ ರಾಜ್ಯಗಳಲ್ಲಿ ಈಚೆಗೆ ನಡೆದ ರ‍್ಯಾಲಿಗಳಲ್ಲಿ 'ನಿರ್ಲಜ್ಜವಾಗಿ ದ್ವೇಷ ಭಾಷಣ'ಗಳನ್ನು ಮಾಡಲಾಗಿದೆ ಎಂದು ಆರೋಪಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ಮುಸ್ಲಿಮರನ್ನು ಕೊಲ್ಲಲು ಮತ್ತು ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಬಹಿಷ್ಕರಿಸುವಂತೆ ಕರೆ ನೀಡಲಾಗುತ್ತಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಶಾಹೀನ್ ಅಬ್ದುಲ್ಲಾ ಎಂಬ ಪತ್ರಕರ್ತೆ ಸಲ್ಲಿಸಿರುವ ಈ ಅರ್ಜಿಯನ್ನು ವಿಚಾರಣೆಗಾಗಿ ಮಂಗಳವಾರ ಪಟ್ಟಿ ಮಾಡಲಾಗಿತ್ತು.

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ ವಿಧಿ 370ನ್ನು ರದ್ದುಪಡಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸುತ್ತಿದ್ದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಸಾಂವಿಧಾನಿಕ ಪೀಠದ ಎದುರು ಹಿರಿಯ ವಕೀಲ ಕಪಿಲ್ ಸಿಬಲ್ ಅವರು ದ್ವೇಷ ಭಾಷಣಕ್ಕೆ ಸಂಬಂಧಿಸಿದ ಈ ಅರ್ಜಿ ಕುರಿತು ಪ್ರಸ್ತಾಪಿಸಿದರು.

ಗುರುಗ್ರಾಮದಲ್ಲಿಯ ಸದ್ಯದ ಬೆಳವಣಿಗೆಯು ಆತಂಕಕಾರಿಯಾಗಿದೆ. ಮುಸ್ಲಿಮರಿಗೆ ಉದ್ಯೋಗ ನೀಡುವವರನ್ನು 'ದ್ರೋಹಿ'ಗಳು ಎಂದು ಕರೆಯುವಂತೆ ಕರೆ ನೀಡಲಾಗುತ್ತಿದೆ ಎಂದರು.

ಶಾಹೀನ್ ಸಲ್ಲಿಸಿರುವ ಅರ್ಜಿಯಲ್ಲಿ, 'ಹರಿಯಾಣದಲ್ಲಿ ದ್ವೇಷ ಭಾಷಣಗಳು, ಹಿಂಸಾಚಾರ ಮತ್ತು ಸ್ವತ್ತುಗಳ ಹಾನಿ ನಡೆಯದಂತೆ ರಾಜ್ಯ ಸರ್ಕಾರ ಹಾಗೂ ಪೊಲೀಸರು ಎಚ್ಚರ ವಹಿಸುತ್ತಾರೆ ಎಂಬ ನಂಬಿಕೆ ಇದೆ ಎಂದು ಸುಪ್ರೀಂ ಕೋರ್ಟ್ ಆಗಸ್ಟ್ 2ರಂದು ಹೊರಡಿಸಿದ್ದ ಆದೇಶದಲ್ಲಿ ಉಲ್ಲೇಖಿಸಿತ್ತು. ಆದೇಶದ ಹೊರತಾಗಿಯೂ ವಿವಿಧ ರಾಜ್ಯಗಳಲ್ಲಿ ನಡೆದ ಸುಮಾರು 27 ರ‍್ಯಾಲಿಗಳಲ್ಲಿ ದ್ವೇಷ ಭಾಷಣಗಳನ್ನು ಮಾಡಲಾಗಿದೆ' ಎಂದು ಆರೋಪಿಸಿದ್ದಾರೆ. ಜೊತೆಗೆ, ಕೆಲ ವಿಡಿಯೊ ಲಿಂಕ್‌ಗಳನ್ನೂ ಅರ್ಜಿಯೊಂದಿಗೆ ನೀಡಿದ್ದಾರೆ.

ಮಧ್ಯಪ್ರದೇಶದ ಸಾಗರ್ ಜಿಲ್ಲೆಯಲ್ಲಿ ಆಗಸ್ಟ್ 4ರಂದು ನಡೆದ ರ‍್ಯಾಲಿಯೊಂದರಲ್ಲಿ ವಿಶ್ವ ಹಿಂದೂ ಪರಿಷತ್‌ನ ಮುಖಂಡರೊಬ್ಬರು ಪೊಲೀಸರ ಸಮ್ಮುಖದಲ್ಲೇ ಮುಸ್ಲಿಮರ ವಿರುದ್ಧ ಹಿಂಸಾಚಾರ ನಡೆಸಲು ಕರೆ ನೀಡಿದ್ದಾರೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಸುದ್ದಿ 2 ನಿಮಿಷ

ಪ್ರಕಾಶ್ ರಾಜ್ ಜತೆ ಸಂವಾದ ವೇದಿಕೆ ತೊಳೆದ ವಿದ್ಯಾರ್ಥಿಗಳು

ಭದ್ರಾವತಿ: ನಗರದ ಸರ್ ಎಂ. ವಿಶ್ವೇಶ್ವರಯ್ಯ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ನಟ ಪ್ರಕಾಶ್ ರಾಜ್ ಅವರ ಸಂವಾದ ಕಾರ್ಯಕ್ರಮದ ನಂತರ ಕೆಲವು ವಿದ್ಯಾರ್ಥಿಗಳು ವೇದಿಕೆ ಮತ್ತು ಸಭಾಂಗಣವನ್ನು ತೊಳೆದಿದ್ದಾರೆ.

ನಗರದ ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕಾರುಣ್ಯ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ನ್ಯೂಟೌನ್‌ನಲ್ಲಿರುವ ಕಾಲೇಜಿನಲ್ಲಿ 'ರಂಗಭೂಮಿ, ಸಿನಿಮಾ ಮತ್ತು ಸಮಾಜ' ವಿಷಯ ಕುರಿತು ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಪ್ರಕಾಶ್ ರಾಜ್ ಪಾಲ್ಗೊಂಡಿದ್ದರು.

ಸಂವಾದದ ನಂತರ ಸಮವಸ್ತ್ರದಲ್ಲಿರುವ ಕೆಲವು ವಿದ್ಯಾರ್ಥಿಗಳು ಸಭಾಂಗಣದೆದುರು ನೆರೆದಿದ್ದಾರೆ. ನಟ ಪ್ರಕಾಶ್ ರಾಜ್ ಕುಳಿತಿದ್ದ ವೇದಿಕೆ ಹಾಗೂ ಓಡಾಡಿದ್ದ ಜಾಗದಲ್ಲಿ ವಿದ್ಯಾರ್ಥಿಯೊಬ್ಬ ಬಾಟಲಿಯಿಂದ ನೀರು ಸುರಿಯುವುದು. ಉಳಿದವರು ಆತನಿಗೆ ಮಾರ್ಗದರ್ಶನ ನೀಡಿದ್ದಾರೆ. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಮಧ್ಯಾಹ್ನ ಕಾಲೇಜಿನ ಆವರಣದಲ್ಲಿ ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಧರ್ಮಪ್ರಸಾದ್ ನೇತೃತ್ವದಲ್ಲಿ ಸಂವಾದ ಕಾರ್ಯಕ್ರಮ ವಿರೋಧಿಸಿ ಪ್ರತಿಭಟನೆ ನಡೆಸಲಾಗಿತ್ತು. ಈ ವೇಳೆ ಕೆಲವು ವಿದ್ಯಾರ್ಥಿಗಳು 'ತುಕ್ಡೆ ಗ್ಯಾಂಗ್ ನಾಯಕ ಪ್ರಕಾಶ ರಾಜ್‌ಗೆ ಧಿಕ್ಕಾರ' ಎಂದು ಘೋಷಣೆ ಕೂಗಿದ್ದರು.

ಪೌರಾಯುಕ್ತರ ಕಾರಿಗೆ ಯುವತಿ ಬಲಿ

ರಾಮನಗರ: ನಗರಸಭೆ ಪೌರಾಯುಕ್ತ ಎಲ್. ನಾಗೇಶ್ ಚಾಲನೆ ಮಾಡುತ್ತಿದ್ದ ಕಾರು ಡಿಕ್ಕಿ ಹೊಡೆದು ಬೈಕ್ ಹಿಂಬದಿಯಲ್ಲಿ ಕುಳಿತಿದ್ದ ಬೆಂಗಳೂರಿನ ಸಿದ್ಧಿಕಾ ಅಂಜುಮ್ (22) ಎಂಬ ಯುವತಿ ಮೃತಪಟ್ಟಿದ್ದಾರೆ. ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಮಂಗಳವಾರ ಬೆಳಿಗ್ಗೆ ಘಟನೆ ನಡೆದಿದೆ.

ಬೈಕ್ ಸವಾರ ಸಯ್ಯದ್ ಇದಾಯತ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಘಟನೆ ಕುರಿತು ಪೌರಾಯುಕ್ತರ ವಿರುದ್ಧ ರಾಮನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಅವರು ಬೆಳಗ್ಗೆ ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿದ್ದರು. ಪೌರಾಯುಕ್ತರು ಅಲ್ಲಿಗೆ ಅವಸರದಲ್ಲಿ ತೆರಳುವ ವೇಳೆ ಈ ಘಟನೆ ನಡೆದಿದೆ. ಬೆಂಗಳೂರಿನ ಅವಲಹಳ್ಳಿ ನಿವಾಸಿಯಾದ ಸಿದ್ಧಿಕಾ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಬೆಳಗ್ಗೆ ಸೋದರ ಸಂಬಂಧಿ ಸಯ್ಯದ್ ಇದಾಯತ್ ಜೊತೆ ರಾಮನಗರದ ಯಾರಬ್ ನಗರದಲ್ಲಿರುವ ಅಜ್ಜಿ ಮನೆಗೆ ಬೈಕ್‌ನಲ್ಲಿ ಬರುತ್ತಿದ್ದರು.

ಡಿಕ್ಕಿಯ ರಭಸಕ್ಕೆ ಸಿದ್ಧಿಕಾ ನೆಲಕ್ಕೆ ಬಿದ್ದಿದ್ದಾರೆ. ಹಾಫ್ ಹೆಲ್ಮೆಟ್ ಧರಿಸಿದ್ದ ಅವರ ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಸ್ತೆ ಅಕ್ಕಪಕ್ಕದಲ್ಲಿದ್ದ ಸ್ಥಳೀಯರ ನೆರವಿನಿಂದ ಆಯುಕ್ತರ ಕಾರಿನಲ್ಲಿ ಶವವನ್ನು ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತು. ಗಾಯಾಳು ಸಯ್ಯದ್ ಅವರಿಗೆ ಚಿಕಿತ್ಸೆ ಕೊಡಿಸಲಾಗಿದೆ ಎಂದು ರಾಮನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ಘಟನೆ ಕುರಿತು ಯುವತಿ ಸಂಬಂಧಿಕರು ನೀಡಿದ ದೂರಿನ ಮೇರೆಗೆ ಪೌರಾಯುಕ್ತ ನಾಗೇಶ್ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.30	5,012	5,353
ಹಾರಂಗಿ	2,859	2,858.41	1,890	2,800
ಕಬಿನಿ	2284.00	2,282.41	4,034	5,875
ಹೇಮಾವತಿ	2,922	2,916.03	3,286	960
ಲಿಂಗನಮಕ್ಕಿ	1,819	1,790.60	10,071	7,481.90
ಸೂಪಾ (ಮೀ)	564	546.64	8,931	5,376
ಮಾಣಿ	595	581.64	1,168	140
ತುಂಗಭದ್ರಾ	1,633	1,627.86	16,500	8,892
ಮಲಪ್ರಭಾ	2079.5	2,066.30	4,638	194
ಘಟಪ್ರಭಾ	2175	2,163.66	8,850	1,763
ಭದ್ರಾ	186	166.10	6,027	194
ಆಲಮಟ್ಟಿ (ಮೀ)	519.60	519.48	58,484	62,397
ನಾರಾಯಣಪುರ (ಮೀ)	492.25	491.74	60,500	55,938

* ನೆಲಮಟ್ಟದಿಂದ

ಕವಾಡಿಗರಹಟ್ಟಿ: ಕಾಲರಾ ದೃಢ

ಒಂದನೇ ಪುಟದಿಂದ...

ನಗರಸಭೆ ವತಿಯಿಂದ ಕವಾಡಿಗರಹಟ್ಟಿಗೆ ಪೂರೈಕೆ ಮಾಡಿದ್ದ ನೀರು ಕುಡಿಯಲು ಯೋಗ್ಯವಾಗಿರಲಿಲ್ಲ ಎಂದು ಆರೋಗ್ಯ ಇಲಾಖೆಯ ಜಿಲ್ಲಾ ಸರ್ವೇಕ್ಷಣಾ ಘಟಕ ಆಗಸ್ಟ್ 3ರಂದು ವರದಿ ನೀಡಿತ್ತು. ಕಾಲರಾ ಹರಡಬಹುದಾದ ಬ್ಯಾಕ್ಟೀರಿಯಾ ಕೂಡ ಪತ್ತೆಯಾಗಿತ್ತು. ಇದನ್ನು ಖಚಿತಪಡಿಸಿಕೊಳ್ಳಲು ಬೆಂಗಳೂರಿನ ವೈದ್ಯಕೀಯ ಕಾಲೇಜಿನ ಪ್ರಯೋಗಾಲಯಕ್ಕೆ ಮಾದರಿ ರವಾನೆ ಮಾಡಲಾಗಿತ್ತು. ಕಲುಷಿತ ನೀರು ಕುಡಿದು ಈವರೆಗೆ ಐವರು ಮೃತಪಟ್ಟಿದ್ದಾರೆ.

ಮಿದುಳು ರಕ್ತಸ್ರಾವದಿಂದ ಸಾವು:

ಕಲುಷಿತ ನೀರು ಕುಡಿದು ಮೃತಪಟ್ಟಿದ್ದಾರೆ ಎನ್ನಲಾದ ಚಿತ್ರದುರ್ಗ ತಾಲ್ಲೂಕಿನ ಚಿಕ್ಕಪುರ ಗ್ರಾಮದ ಕರಿಬಸಪ್ಪ (35) ಸಾವಿಗೆ ಮಿದುಳು ರಕ್ತಸ್ರಾವ ಕಾರಣ ಎಂಬುದು ವೈದ್ಯಕೀಯ ವರದಿಯಿಂದ ಖಚಿತಪಟ್ಟಿದೆ. ಮಿದುಳು ಪಾರ್ಶ್ವವಾಯು ಕಾರಣಕ್ಕೆ ರಕ್ತಸ್ರಾವ ಉಂಟಾಗಿರುವ ಸಾಧ್ಯತೆ ಇದೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ.

'ಕರಿಬಸಪ್ಪ ಅಸ್ವಸ್ಥಗೊಂಡು ಜಿಲ್ಲಾ ಆಸ್ಪತ್ರೆಗೆ ದಾಖಲಾಗುವ ಹತ್ತು ದಿನಗಳ ಹಿಂದಿನಿಂದಲೂ ಗ್ರಾಮದಲ್ಲಿಯೇ ವಾಸವಾಗಿದ್ದರು ಎಂಬುದಾಗಿ ಮಾಹಿತಿ ನೀಡಿದ್ದಾರೆ. ಹೆಚ್ಚಿನ ಚಿಕಿತ್ಸೆಗೆ ಬಸವೇಶ್ವರ ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿ ಕವಾಡಿಗರಹಟ್ಟಿಯ ಸಹೋದರಿಯ ಮನೆಗೆ ಭೇಟಿ ನೀಡಿದ್ದ ಕುರಿತ ವಿವರ ಒದಗಿಸಿಲ್ಲ. ಕವಾಡಿಗರಹಟ್ಟಿಗೆ ಬಂದು ಹೋಗಿದ್ದರು ಎಂದು ಅವರ ಸಂಬಂಧಿಕರು ಹೇಳುತ್ತಿದ್ದಾರೆ. ಈ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ' ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ತಿಳಿಸಿದ್ದಾರೆ.

'ವಾಂತಿ–ಭೇದಿ ಕಾಣಿಸಿಕೊಂಡ ತಕ್ಷಣ ನಿರ್ಜಲೀಕರಣ ಉಂಟಾಗುತ್ತದೆ. ರಕ್ತದೊತ್ತಡ ಕಡಿಮೆಯಾಗಿ ಸಮಸ್ಯೆ ಸೃಷ್ಟಿಯಾಗುತ್ತದೆ. ಕರಿಬಸಪ್ಪ ಅವರು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಬಂದಾಗಲೇ ಮಿದುಳಿನಲ್ಲಿ ರಕ್ತಸ್ರಾವವಾಗಿತ್ತು. ಕವಾಡಿಗರಹಟ್ಟಿಗೆ ಬಂದು ಹೋಗಿದ್ದರೇ ಎಂಬ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಆರ್. ರಂಗನಾಥ್ ಹೇಳಿದ್ದಾರೆ.

ಎಸ್ಪಿಗೆ ಕೃಷಿ ಇಲಾಖೆ ಜೆ.ಡಿ ದೂರು

ಮಂಡ್ಯ: 'ಇಲಾಖೆಯ ಸಹಾಯಕ ನಿರ್ದೇಶಕರ ಹೆಸರಿನಲ್ಲಿ ರಾಜ್ಯಪಾಲರಿಗೆ ಪತ್ರ ಬರೆದಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಕೃಷಿ ಇಲಾಖೆಯ ಮಂಡ್ಯ ಜಂಟಿ ನಿರ್ದೇಶಕ ವಿ.ಎಸ್.ಅಶೋಕ್ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದಾರೆ. ಈ ದೂರನ್ನು ಆಧರಿಸಿ ಎಫ್ಐಆರ್ ದಾಖಲಿಸಲಾಗಿದ್ದು, ಆರೋಪಿಗಳ ಪತ್ತೆಗೆ ತನಿಖೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಪ್ರತಿಕ್ರಿಯಿಸಿದ್ದಾರೆ.

ಬಾಲಕಿಯರ ಮೇಲೆ ಸಾಮೂಹಿಕ ಅತ್ಯಾಚಾರ

ರೇವಾ (ಪಿಟಿಐ): ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ಇಬ್ಬರು ಬಾಲಕಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿರುವ ಬಗ್ಗೆ ದೂರು ದಾಖಲಿಸಿಕೊಂಡಿರುವ ಪೊಲೀಸರು 7 ಆರೋಪಿಗಳಲ್ಲಿ ಐವರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅತ್ಯಾಚಾರದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

ಸುಮಾರು 25 ದಿನಗಳ ಹಿಂದೆ ಹನುಮಾನ್ ಪೊಲೀಸ್ ಠಾಣಾ ವ್ಯಾಪ್ತಿಯ ಕಾಡಿನಲ್ಲಿ ಕುರಿ ಮೇಯಿಸಲು ತೆರಳಿದ್ದ 14ಮತ್ತು 16 ವರ್ಷದ ಸಹೋದರಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ವಿಡಿಯೊ ಸೆರೆಹಿಡಿಯಲಾಗಿತ್ತು. ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬೆದರಿಕೆ ಒಡ್ಡಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಗೃಹಲಕ್ಷ್ಮಿ: ವಾರ್ಡ್ ಮಟ್ಟದಲ್ಲೂ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹಲಕ್ಷ್ಮಿ' ಗ್ಯಾರಂಟಿ ಯೋಜನೆ ಅನುಷ್ಠಾನದ ಉದ್ಘಾಟನಾ ಸಮಾರಂಭ ನಡೆಯಲಿರುವ ಆಗಸ್ಟ್ 20ರಂದು ರಾಜ್ಯದಾದ್ಯಂತ ವಾರ್ಡ್ ಮಟ್ಟದಿಂದ ಜಿಲ್ಲಾ ಮಟ್ಟದವರೆಗೂ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಪಕ್ಷದ ಶಾಸಕರು, ಸಂಸದರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದರು.

ಕಾರ್ಯಕ್ರಮದ ಪೂರ್ವಸಿದ್ಧತೆ ಕುರಿತು ಕಾಂಗ್ರೆಸ್ ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಂಸದರ ಜತೆ ಇಬ್ಬರೂ ನಾಯಕರು ಮಂಗಳವಾರ ರಾತ್ರಿ ವಿಡಿಯೊ ಸಂವಾದ ನಡೆಸಿದರು. ಗ್ರಾಮ ಪಂಚಾಯಿತಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಾರ್ಡ್ ಮಟ್ಟದಲ್ಲಿ ಉದ್ಘಾಟನಾ ಕಾರ್ಯಕ್ರಮ ಆಯೋಜಿಸುವಂತೆ ಸೂಚನೆ ನೀಡಿದರು.

'ಎಲ್ಲ ಹಂತಗಳಲ್ಲಿ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಬೇಕು. ಮಹಿಳೆಯರಿಗೆ ಗ್ಯಾರಂಟಿ ಅನುಷ್ಠಾನ ಪತ್ರಗಳ ವಿತರಣೆಗೆ ವ್ಯವಸ್ಥೆ ಮಾಡಬೇಕು. ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸುವಂತೆ ವ್ಯವಸ್ಥೆ ಮಾಡಬೇಕು' ಎಂದು ಇಬ್ಬರೂ ಸೂಚಿಸಿದರು.

ಆರೋಗ್ಯ ಇಲಾಖೆಯಿಂದ ವೈದ್ಯಕೀಯ ಸಿಬ್ಬಂದಿಗೆ ತರಬೇತಿ • ರಾಜ್ಯದಾದ್ಯಂತ ಶೀಘ್ರ ಜಾರಿ

ಹಠಾತ್ ಹೃದಯಾಘಾತಕ್ಕೆ ತ್ವರಿತ ಚಿಕಿತ್ಸೆ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ



ಹೃದಯಾಘಾತ ಸಂಭವಿಸಿದ ಒಂದು ಗಂಟೆಯೊಳಗೆ ಹೆಪ್ಪುಗಟ್ಟಿದ ರಕ್ತ ಕರಗಿಸಲು ಚಿಕಿತ್ಸೆ ಅಗತ್ಯ. ನಮ್ಮಲ್ಲಿನ ತಜ್ಞರ ನೆರವಿನಿಂದ ತಾಲ್ಲೂಕು ಆಸ್ಪತ್ರೆಯಲ್ಲೇ ಆರಂಭಿಕ ಚಿಕಿತ್ಸೆ ಒದಗಿಸಲಾಗುತ್ತದೆ

ಡಾ.ಸಿ.ಎನ್. ಮಂಜುನಾಥ್,
ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

ಬೆಂಗಳೂರು: ಹೃದಯಾಘಾತ ಸಂಭವಿಸಿದ ಒಂದು ಗಂಟೆಯೊಳಗೆ ಅಗತ್ಯ ಚಿಕಿತ್ಸೆ ಒದಗಿಸಿ, ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ಆರೋಗ್ಯ ಇಲಾಖೆ ರೂಪಿಸಿರುವ ಯೋಜನೆ ಪ್ರಾಯೋಗಿಕವಾಗಿ ಯಶಸ್ವಿಯಾಗಿದ್ದು, ಶೀಘ್ರದಲ್ಲಿಯೇ ರಾಜ್ಯದಾದ್ಯಂತ ಜಾರಿ ಆಗಲಿದೆ.

ಇತ್ತೀಚೆಗೆ ಹಠಾತ್ ಹೃದಯಾಘಾತದಿಂದ ನಿಧನರಾಗುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಆರೋಗ್ಯವಂತ ವ್ಯಕ್ತಿಗಳು ಸಹ 30-40 ವರ್ಷಗಳ ಆಸುಪಾಸಿನಲ್ಲಿಯೇ ಸಾವಿಗೀಡಾಗುವ ಪ್ರಕರಣಗಳು ವರದಿ ಆಗುತ್ತಿವೆ. ಇದಕ್ಕೆ ನಟ ಪುನೀತ್ ರಾಜ್‌ಕುಮಾರ್, ನಟ ವಿಜಯ ರಾಘವೇಂದ್ರ ಅವರ ಪತ್ನಿ ಸ್ಪಂದನಾ ಉದಾಹರಣೆ. ಇಂತಹ ಸಾವಿನ ಪ್ರಕರಣಗಳ ಪ್ರಮಾಣ ತಗ್ಗಿಸಲು ಮುಂದಾಗಿರುವ ಇಲಾಖೆ, ಪುನೀತ್ ರಾಜ್‌ಕುಮಾರ್ ಅವರ ಹೆಸರಿನಲ್ಲಿಯೇ ಹೃದಯ ಚಿಕಿತ್ಸೆಗೆ ಯೋಜನೆ ರೂಪಿಸಿದೆ.

ವ್ಯಕ್ತಿಗೆ ಹೃದಯಾಘಾತ ಸಂಭವಿಸಿದ ಒಂದು ಗಂಟೆ ನಿರ್ಣಾಯಕವಾಗಿರುತ್ತದೆ. ಈ ಅವಧಿಯಲ್ಲಿ ತಾಲ್ಲೂಕು ಮಟ್ಟದಲ್ಲಿಯೇ ಚಿಕಿತ್ಸೆ ಒದಗಿಸಲು ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) 'ಸ್ಟೆಮಿ' (ಹೃದಯ ಸ್ನಾಯುವಿನ ಸೋಂಕು ನಿವಾರಣೆ) ಯೋಜನೆಯನ್ನು ಪ್ರಾಯೋಗಿಕವಾಗಿ ರಾಜ್ಯದ 10 ಜಿಲ್ಲಾ ಆಸ್ಪತ್ರೆಗಳು ಸೇರಿ 45 ಆರೋಗ್ಯ ಕೇಂದ್ರಗಳಲ್ಲಿ ಈಗಾಗಲೇ ಕಾರ್ಯಗತಗೊಳಿಸಲಾಗಿದೆ.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ಘಟಕವನ್ನು ಕಾರ್ಯಾಚರಣೆಯ ಕೇಂದ್ರಗಳನ್ನಾಗಿ ಬಳಸಿಕೊಂಡು, ಸೇವೆ ನೀಡಲಾಗಿದೆ. ಇದರ ಯಶಸ್ಸಿನಿಂದ ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ ಹಠಾತ್ ಹೃದಯ ಸಂಬಂಧಿ ಸಾವು ತಡೆಯಲು ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ 'ಆಟೊಮೇಟೆಡ್ ಎಕ್ಸ್‌ಟರ್ನಲ್ ಡಿಫೈಬ್ರಿಲ್ಲೇಟರ್ಸ್ (ಎಇಡಿ)' ಸಾಧನ ಅಳವಡಿಸಲಾಗುತ್ತಿದೆ. ಈ ಸಾಧನವು ನಿಂತುಹೋದ ಎದೆ ಬಡಿತವನ್ನು ಪುನರಾರಂಭಿಸಲು ಸಹಕಾರಿಯಾಗಲಿದೆ.

ಹೃದ್ರೋಗಿಗಳ ಸಂಖ್ಯೆ ಹೆಚ್ಚಳ

ಹೃದಯ ಸಂಬಂಧಿ ಸಮಸ್ಯೆಗಳಿಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಭೇಟಿ ನೀಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಬೆಂಗಳೂರಿನಲ್ಲಿರುವ ಸಂಸ್ಥೆಯು ಮೈಸೂರು ಹಾಗೂ ಕಲಬುರಗಿಯಲ್ಲಿ ಶಾಖೆ ಹೊಂದಿದ್ದು, 1,630 ಹಾಸಿಗೆ ಹೊಂದಿದೆ. ಸಂಸ್ಥೆಗೆ ವರ್ಷಕ್ಕೆ ಭೇಟಿ ನೀಡುವವರ ಹೊರ ರೋಗಿಗಳ ಸಂಖ್ಯೆ 6 ಲಕ್ಷ ದಾಟಿದೆ. ಕಳೆದ ವರ್ಷ 60 ಸಾವಿರಕ್ಕೂ ಅಧಿಕ ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. 2022ರಲ್ಲಿ 3.78 ಲಕ್ಷ ಮಂದಿಗೆ ಇಸಿಜಿ ಹಾಗೂ 37,515 ಮಂದಿಗೆ ಟ್ರೆಡ್ ಮಿಲ್ ಪರೀಕ್ಷೆ ನಡೆಸಲಾಗಿದೆ. 2021ರಲ್ಲಿ ಈ ಪರೀಕ್ಷೆಗಳು ಕ್ರಮವಾಗಿ 2.80 ಲಕ್ಷ ಹಾಗೂ 29,366 ನಡೆದಿತ್ತು.

ಸಿಬ್ಬಂದಿಗೆ ತರಬೇತಿ: 'ತಾಲ್ಲೂಕು ಆಸ್ಪತ್ರೆಗಳಿಗೆ ಎಇಡಿ ಸಾಧನಗಳನ್ನು ಪೂರೈಸಲಾಗುತ್ತಿದೆ. ಹೃದಯಾಘಾತಕ್ಕೆ ಒಳಗಾದ ವ್ಯಕ್ತಿಗೆ ತಕ್ಷಣ ಇಸಿಜಿ ಸೇರಿದಂತೆ ವಿವಿಧ ಪರೀಕ್ಷೆಗಳನ್ನು ನಡೆಸಿ, ಜಯದೇವ ಸಂಸ್ಥೆಗೆ ವರದಿ ರವಾನಿಸಲಾಗುತ್ತದೆ. ಅಲ್ಲಿನ ತಜ್ಞರು ವರದಿ ಪರಿಶೀಲಿಸಿ, ಅಗತ್ಯ ಸಲಹೆ ನೀಡಲಿದ್ದಾರೆ. ಹೃದಯಾಘಾತ ದೃಢಪಟ್ಟವರಿಗೆ ಅಗತ್ಯ ಮಾತ್ರೆಗಳು ಹಾಗೂ ತಲಾ ₹25 ಸಾವಿರ ದರದ ಚುಚ್ಚುಮದ್ದುಗಳನ್ನು ಉಚಿತವಾಗಿ ನೀಡಲಾಗುತ್ತದೆ. ಹೆಚ್ಚಿನ ಚಿಕಿತ್ಸೆಗಳು ಅಗತ್ಯವಿದ್ದಲ್ಲಿ ಜಯದೇವಕ್ಕೆ ಕಳುಹಿಸಲಾಗುತ್ತದೆ. ಇನ್ನು 15 ರಿಂದ 20 ದಿನಗಳಲ್ಲಿ ರಾಜ್ಯದಾದ್ಯಂತ ಈ ಯೋಜನೆ ಪ್ರಾರಂಭಿಸಲಾಗುತ್ತದೆ' ಎಂದು ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪನಿರ್ದೇಶಕ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

'45 ಕೇಂದ್ರಗಳಲ್ಲಿ ವೈದ್ಯರು, ಶುಶ್ರೂಷಕರು, ವೈದ್ಯಕೀಯ ಸಿಬ್ಬಂದಿ ಹಾಗೂ ಆಂಬುಲೆನ್ಸ್ ಚಾಲಕರಿಗೆ ಜಯದೇವ ಸಂಸ್ಥೆಯಿಂದ ಚಿಕಿತ್ಸೆ ಬಗ್ಗೆ ತರಬೇತಿ ನೀಡಲಾಗಿದೆ. ಇನ್ನುಳಿದ ಕೇಂದ್ರಗಳಲ್ಲಿ ಸಿಬ್ಬಂದಿ ತರಬೇತಿಗೆ ಈಗಾಗಲೇ ಅನುದಾನ ಬಿಡುಗಡೆಯಾಗಿದೆ' ಎಂದು ಹೇಳಿದರು.

ವಕೀಲರ ಪರಿಷತ್ ಆಹ್ವಾನ ಪತ್ರಿಕೆ: ಡಿಕೆಶಿ ಹೆಸರಿಗೆ ಕೊಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್ ವತಿಯಿಂದ ಮೈಸೂರಿನಲ್ಲಿ ಇದೇ 12ರಂದು ನಡೆಯಲಿರುವ ವಕೀಲರ ರಾಜ್ಯ ಮಟ್ಟದ ಹತ್ತನೇ ಸಮಾವೇಶದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೆಸರನ್ನು ಆಹ್ವಾನ ಪತ್ರಿಕೆಯಿಂದ ಕೈಬಿಡಲಾಗಿದೆ.

ಉಳಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ. ಎಸ್. ಬೋಪಣ್ಣ, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಸೇರಿದಂತೆ ಇತರ ಗಣ್ಯರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಲಾಗಿದೆ.

ಈ ಮೊದಲು ಡಿ.ಕೆ.ಶಿವಕುಮಾರ್ ಅವರ ಹೆಸರನ್ನು 'ಮುಖ್ಯ ಅತಿಥಿ' ಎಂದು ಆಹ್ವಾನ ಪತ್ರಿಕೆಯಲ್ಲಿ ಉಲ್ಲೇಖಿಸಲಾಗಿತ್ತು. ಆದರೆ, ಅವರು ಹಲವು ಗಂಭೀರ ಕ್ರಿಮಿನಲ್ ಪ್ರಕರಣಗಳ ಆರೋಪಿಯಾಗಿದ್ದು, ಜಾಮೀನಿನ ಮೇಲೆ ಹೊರಗಿದ್ದಾರೆ. ಏತನ್ಮಧ್ಯೆ, ಅವರನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಜೊತೆಗೆ ವೇದಿಕೆ ಹಂಚಿಕೊಳ್ಳಲು ಅನುವು ಮಾಡಿಕೊಟ್ಟಿದ್ದನ್ನು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಬಲವಾಗಿ ಆಕ್ಷೇಪಿಸಿದ್ದರು.

ಈ ಕುರಿತಂತೆ ಅವರು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಪತ್ರಮುಖೇನ ತಮ್ಮ ಆಕ್ಷೇಪಣೆಯನ್ನು ದಾಖಲಿಸುತ್ತಿದ್ದಂತೆಯೇ, ಇದು ವಿವಾದದ ಸ್ವರೂಪ ಪಡೆಯುತ್ತಿರುವುದನ್ನು ಗಮನಿಸಿದ ರಾಜ್ಯ ವಕೀಲರ ಪರಿಷತ್ ಹೊಸ ಆಹ್ವಾನ ಪತ್ರಿಕೆಯನ್ನು ಮುದ್ರಿಸಿದ್ದು ಅದರಲ್ಲಿ ಶಿವಕುಮಾರ್ ಹೆಸರನ್ನು ಕೈಬಿಟ್ಟಿದೆ.

ಕೆಎಸ್‌ಆರ್‌ಟಿಸಿಗೆ ಏಷ್ಯಾ ಮಟ್ಟದ ಪ್ರಶಸ್ತಿ

ಬೆಂಗಳೂರು: 2023ನೇ ಸಾಲಿನ ಏಷ್ಯಾದ ಅತ್ಯುತ್ತಮ ಉದ್ಯೋಗದಾತ ಬ್ರಾಂಡ್ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದೆ.

ಅತ್ಯುತ್ತಮ ಮಾನವ ಸಂಪನ್ಮೂಲ ಉಪಕ್ರಮಗಳ ಅನುಷ್ಠಾನ ವರ್ಗದಲ್ಲಿ ಆಯ್ಕೆಯಾಗಿದ್ದು, ಪ್ರಶಸ್ತಿ ಪ್ರದಾನ ಆ. 17ರಂದು ಸಿಂಗಪುರದಲ್ಲಿ ನಡೆಯಲಿದೆ.

ಸಂವಾದದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮಾಹಿತಿ

'ವಿಧಾನಸೌಧ ಪ್ರವೇಶಕ್ಕೆ ನಿಲ್ಲಬೇಕಿಲ್ಲ ಸರದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧ ಪ್ರವೇಶಕ್ಕೆ ಸಾರ್ವಜನಿಕರು ಇನ್ನು ಮುಂದೆ ಸರದಿಯಲ್ಲಿ ಕಾಯಬೇಕಿಲ್ಲ. ಸಮಯ ವ್ಯರ್ಥ ಮಾಡಿಕೊಂಡು ದಿನಗಟ್ಟಲೆ ಅಲೆಯಬೇಕಿಲ್ಲ. ಶಾಸಕರ ಸೋಗಿನಲ್ಲಿ ಬೇರೊಬ್ಬರು ಸದನದ ಒಳಗೆ ಪ್ರವೇಶಿಸಲೂ ಸಾಧ್ಯವಿಲ್ಲ.

ಬೆಂಗಳೂರು ಪ್ರೆಸ್‌ಕ್ಲಬ್ ಮಂಗಳವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಈ ಕುರಿತು ಮಾಹಿತಿ ಹಂಚಿಕೊಂಡ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನಸೌಧ, ವಿಕಾಸಸೌಧಕ್ಕೆ ಕೆಲಸದ ನಿಮಿತ್ತ ಭೇಟಿ ನೀಡುವ ಸಾರ್ವಜನಿಕರು ತಾವು ಯಾರನ್ನು ಭೇಟಿಯಾಗಬೇಕು, ಭೇಟಿಯ ಉದ್ದೇಶ ಏನು ಎಂಬ ವಿವರಗಳನ್ನು ಹೊಸದಾಗಿ ರೂಪಿಸಲಾಗುತ್ತಿರುವ ಪೋರ್ಟಲ್‌ನಲ್ಲಿ ನಮೂದಿಸಿದರೆ ಸಾಕು. ಭೇಟಿಯಾಗಬೇಕಾದ ಸಚಿವರು, ಅಧಿಕಾರಿಗಳ ಲಭ್ಯತೆಯ ಆಧಾರದಲ್ಲಿ ದಿನ, ಸಮಯ ನೀಡಲಾಗುತ್ತದೆ. ಈ ಕುರಿತು ಪೊಲೀಸ್, ತಾಂತ್ರಿಕ ಕ್ಷೇತ್ರದ ಪರಿಣತರು, ವಿಧಾನಸೌಧದ ಅಧಿಕಾರಿಗಳ ಜತೆ ಮಾತುಕತೆ ನಡೆಸಲಾಗಿದೆ. ನೂತನ ವ್ಯವಸ್ಥೆ ಶೀಘ್ರ ಜಾರಿಗೊಳಿಸಲಾಗುವುದು ಎಂದರು.

ಅಧಿವೇಶನ ವೀಕ್ಷಣೆಗೆ ಬರುವವರಿಗೂ ಇದೇ ಮಾದರಿಯನ್ನು ಅನ್ವಯಿಸಲಾಗುವುದು. ಶಾಲಾ ಆಡಳಿತ ಮಂಡಳಿಗಳು ಅಧಿವೇಶನಕ್ಕೆ ಕರೆ ತರುವ ಮಕ್ಕಳ ಸಂಖ್ಯೆ ನೀಡಿದರೆ ಸಾಕು. ಭೇಟಿ ನೀಡಬೇಕಾದ ದಿನ ಮೊಬೈಲ್‌ಗೆ ರವಾನಿಸಲಾಗುವುದು. ಮಕ್ಕಳು ಅನಗತ್ಯವಾಗಿ ಸರದಿಯಲ್ಲಿ ನಿಲ್ಲುವುದು, ಕಾಯುವುದು ತಪ್ಪಲಿದೆ. ಬ್ಯಾಂಕ್ವೆಂಟ್‌ಹಾಲ್ ಬಳಿ ಮಕ್ಕಳಿಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಶಾಸಕರು, ಸಚಿವರು, ಅಧಿಕಾರಿಗಳು, ಸಿಬ್ಬಂದಿ ಪ್ರವೇಶಕ್ಕೂ ಐರಿಶ್ ಯಂತ್ರಗಳನ್ನು ಬಳಸಲಾಗುವುದು. ಇಡೀ ವಿಧಾನಸೌಧಕ್ಕೆ ಸಿಸಿಟಿವಿ ಕಣ್ಗಾವಲು ಹಾಕಲಾಗುವುದು. ಇದರಿಂದ ಶಾಸಕರ ಸೋಗಿನಲ್ಲಿ ಬೇರೆಯವರು ಶಾಸನಸಭೆಯ ಒಳಗೆ ಪ್ರವೇಶಿಸುವುದನ್ನು ತಡೆಯಬಹುದು. ಈ ವ್ಯವಸ್ಥೆಯ ನಿರ್ವಹಣೆಗೆ ಪ್ರತ್ಯೇಕ ಘಟಕ ಸ್ಥಾಪಿಸಲಾಗುವುದು ಎಂದರು.

'ಕನ್ನಡ ಉಚ್ಚಾರಣೆ ಉತ್ತಮಗೊಳಿಸಿಕೊಳ್ಳುವೆ'

ಕನ್ನಡ ಮಾತಿನ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಮಾಡಿದ್ದು ನೋವಾಗಿಲ್ಲ. ಉಚ್ಚಾರಣೆ ಇನ್ನಷ್ಟು ಉತ್ತಮಗೊಳಿಸಿಕೊಳ್ಳಲು ಪ್ರಯತ್ನಿಸಿರುವೆ. ದಕ್ಷಿಣ ಕನ್ನಡದಲ್ಲಿ ಹಲವರು ತುಳು, ಮುಸ್ಲಿಮರು ಬ್ಯಾರಿ, ಕ್ರೈಸ್ತರು ಕೊಂಕಣಿ ಬಳಸುತ್ತಾರೆ. ಮನೆಯಲ್ಲಿ ಬಹುಭಾಷೆ ಮಾತಾಡುವ ಜನರು ಶಾಲೆಯಲ್ಲಷ್ಟೆ ಕನ್ನಡ ಕಲಿಯುತ್ತಾರೆ. ಇದರಿಂದ ಬಳಕೆಯಲ್ಲಿ ಸ್ಪಷ್ಟತೆ ಕಾಣುವುದಿಲ್ಲ. ಟ್ರೋಲ್ ಮಾಡುವವರಿಗೆ ಇದೆಲ್ಲ ಅರ್ಥವಾಗುವುದಿಲ್ಲ ಎಂದು ಖಾದರ್ ಪ್ರತಿಕ್ರಿಯಿಸಿದರು.



ಖಾದರ್

ಇಂದು ಸ್ಪಂದನಾ ಅಂತ್ಯಸಂಸ್ಕಾರ

ಸ್ಪಂದನಾ

ಬೆಂಗಳೂರು: ಬ್ಯಾಂಕಾಕ್‌ನಲ್ಲಿ ಹೃದಯಾಘಾತದಿಂದ ನಿಧನರಾದ ಸ್ಪಂದನಾ ಮೃತದೇಹವನ್ನು ಬೆಂಗಳೂರಿಗೆ ತರುವ ಪ್ರಕ್ರಿಯೆ ಮಂಗಳವಾರವಿಡೀ ನಡೆಯಿತು. ಇನ್ನೊಂದೆಡೆ ಸ್ಪಂದನಾ ಅಂತ್ಯಸಂಸ್ಕಾರಕ್ಕೆ ಸಿದ್ಧತೆ ನಡೆದಿದೆ.

'ಥಾಯ್ಲೆಂಡ್ ರಾಷ್ಟ್ರದ ಎಲ್ಲ ಪ್ರಕ್ರಿಯೆಗಳನ್ನು ಮುಗಿಸಿ ಮಂಗಳವಾರ ರಾತ್ರಿ ಪಾರ್ಥಿವ ಶರೀರವನ್ನು ಬೆಂಗಳೂರಿಗೆ ತರಲಾಗುವುದು. ಬಳಿಕ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಿ, ವಿಜಯ ರಾಘವೇಂದ್ರ ಸೂಚಿಸಿದ ಸ್ಥಳದಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಸಲಾಗುವುದು' ಎಂದು ಸ್ಪಂದನಾ ಅವರ ಚಿಕ್ಕಪ್ಪ ಬಿ.ಕೆ.ಹರಿಪ್ರಸಾದ್ ಹೇಳಿದ್ದರು.

'ಮಾನಗೇಡಿ ಕೃತ್ಯಕ್ಕೆ ಸಿಎಂ ಬೆಂಬಲ'

ಬೆಂಗಳೂರು: 'ಮಂತ್ರಿಗಳ ಮಾನಗೇಡಿ ಕೃತ್ಯಗಳನ್ನೂ ರಾಜ್ಯದ ಮುಖ್ಯಮಂತ್ರಿ ಲಜ್ಜೆಗೇಡಿಯಂತೆ ಸಮರ್ಥಿಸಿಕೊಳ್ಳುತ್ತಿದ್ದಾರೆ. ಸಚಿವರು ನಡೆಸುತ್ತಿರುವ ಸುಲಿಗೆಯನ್ನು ಮುಖ್ಯಮಂತ್ರಿ ಬೆಂಬಲಿಸುತ್ತಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

'ಸಚಿವ ಎನ್. ಚಲುವರಾಯಸ್ವಾಮಿ ವಿರುದ್ಧ ರಾಜ್ಯಪಾಲರಿಗೆ ಬರೆದಿರುವ ಪತ್ರದ ಸೃಷ್ಟಿಕರ್ತ ನಿಮ್ಮ ಬ್ರದರ್ರೋ?' ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಶ್ನೆ ಕುರಿತು ಟ್ವಿಟರ್‌ನಲ್ಲಿ ಮಂಗಳವಾರ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ, ತೀವ್ರ ವಾಗ್ದಾಳಿ ನಡೆಸಿದ್ದಾರೆ.

'ನಕಲಿ ಪತ್ರ ಎಂದು ಹೇಳಿದ್ದೀರಿ. ಹಾಗಿದ್ದರೆ ರಾಜ್ಯಪಾಲರ ಕಾರ್ಯಾಲಯ ನಕಲಿ ಪತ್ರದ ಮೇಲೆ ಕ್ರಮ ಜರುಗಿಸಿ ಎಂದು ಷರಾ ಬರೆದಿದೆಯೆ? ಸುಳ್ಳಿನ ಪತ್ರಕ್ಕೆ ರಾಜ್ಯಪಾಲರು ಸ್ಪಂದಿಸಿದ್ದಾರೆಯೆ? ರಾಜಧರ್ಮದ ಪ್ರವಚನಕಾರರೇ ರಾಜಭವನದ ಪಾವಿತ್ರ್ಯವನ್ನು ಶಂಕಿಸುವುದು ಸರಿಯೆ' ಎಂದು ಪ್ರಶ್ನಿಸಿದ್ದಾರೆ.

'ಕಂಡವರ ಭುಜದ ಮೇಲೆ ಬಂದೂಕು ಇರಿಸಿ ಇನ್ನೊಬ್ಬರ ರಾಜಕೀಯ ಜೀವನ ಮುಗಿಸುವ ನಿಮ್ಮಂತಹವರಿಗೆ ನಕಲಿ ಪತ್ರಗಳ ಸೃಷ್ಟಿ ಬೆಣ್ಣೆ ಕಡೆದಷ್ಟೇ ಸಲೀಸು. ಕಾಂಗ್ರೆಸ್ ಶಾಸಕರು ನಿಮ್ಮ ಸಚಿವರ ವಿರುದ್ಧ ಪತ್ರ ಬರೆದಾಗಲೂ ಹೀಗೆಯೇ ಹೇಳಿದ್ದೀರಿ. ಶಾಸಕಾಂಗ ಪಕ್ಷದ ಸಭೆಯ ಬಳಿಕ ಆ ಪತ್ರ ಅಸಲಿಯಾದುದರ ಹಕೀಕತ್ತು ಏನಿರಬಹುದು?' ಎಂದು ಕುಮಾರಸ್ವಾಮಿ ಕೇಳಿದ್ದಾರೆ.

'ವರ್ಗಾವಣೆ ಪಟ್ಟಿಗೆ ಸಿದ್ದರಾಮಯ್ಯ 'ಟಿಕ್' ಮಾಡುತ್ತಾರೆ' ಎಂದು ಆರೋಪಿಸಿರುವ ಅವರು, 'ವರ್ಗಾವಣೆ ಪಟ್ಟಿಗೆ ಬಿದ್ದ ಟಿಕ್ಕುಗಳ ಲೆಕ್ಕ ಹೇಳಬೇಕಾ' ಎಂದು ಪ್ರಶ್ನಿಸಿದ್ದಾರೆ.

'ಮಾನಸಿಕ ಸ್ಥಿಮಿತ ಕಳೆದುಕೊಂಡಂತಿದೆ'

ಎಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪಗಳಿಗೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಇತ್ತೀಚೆಗೆ ನೀವು ನನ್ನ ವಿರುದ್ಧ ಮಾಡುತ್ತಿರುವ ವೈಯಕ್ತಿಕ ಮಟ್ಟದ ಆರೋಪಗಳು ಮತ್ತು ಬಳಸುತ್ತಿರುವ ಭಾಷೆಯನ್ನು ಗಮನಿಸಿದರೆ ಚುನಾವಣಾ ಸೋಲಿನ ಆಘಾತದಿಂದಾಗಿ ನೀವು ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡಂತೆ ಕಾಣುತ್ತಿದೆ' ಎಂದಿದ್ದಾರೆ.

'ಶೀಘ್ರವಾಗಿ ಗುಣಮುಖರಾಗಿ ಎಂದಷ್ಟೇ ನಾನು ಹಾರೈಸಬಲ್ಲೆ. ಇನ್ನು ನೀವು ಪ್ರಸ್ತಾಪಿಸಿರುವ ಶಾಸಕರ ಪತ್ರದ ನಕಲಿ-ಅಸಲಿ ವಿಚಾರ ಶೀಘ್ರದಲ್ಲಿಯೇ ತನಿಖೆಯಿಂದ ಹೊರಬೀಳಲಿದೆ' ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ.

ಗಂಡ ಕಪ್ಪೆಂದು ಜರೆದ ಹೆಂಡತಿ: ವಿಚ್ಛೇದನ ಮಂಜೂರು

ಬೆಂಗಳೂರು: ಪತಿಯನ್ನು ಕಪ್ಪು ಚರ್ಮದವನು ಎಂದು ಜರೆಯುತ್ತಿದ್ದ ಪತ್ನಿಯ ಧೋರಣೆಯನ್ನು 'ಕ್ರೌರ್ಯ' ಎಂದು ಪರಿಗಣಿಸಿರುವ ಹೈಕೋರ್ಟ್, ದಂಪತಿಯ ಮದುವೆಯನ್ನು ಅಸಿಂಧುಗೊಳಿಸಿ ವಿಚ್ಛೇದನ ಮಂಜೂರು ಮಾಡಿದೆ.

ವಿಚ್ಛೇದನ ಮಂಜೂರಾತಿಗೆ ನಿರಾಕರಿಸಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪತಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಲೋಕ್ ಆರಾಧೆ (ಈಗ ತೆಲಂಗಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ) ಹಾಗೂ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ಇತ್ತೀಚೆಗೆ ಈ ಆದೇಶ ನೀಡಿದ್ದು, 'ಒಂದು ವೇಳೆ ಪತ್ನಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದರೆ ಕೌಟುಂಬಿಕ ನ್ಯಾಯಾಲಯ ಅದನ್ನು ಪರಿಶೀಲಿಸಿ ನಿರ್ಧರಿಸಬೇಕು' ಎಂದು ತಿಳಿಸಿದೆ.

'ಸಕಾರಣ ಇಲ್ಲದಿದ್ದರೂ ಪತ್ನಿ, ಪತಿಯ ಜೊತೆ ವಾಸ ಮಾಡದೆ ತವರು ಮನೆ ಸೇರಿದ್ದಾರೆ. ಪತಿಯ ವಿರುದ್ಧ ಅಕ್ರಮ ಸಂಬಂಧದ ಸುಳ್ಳು ಆರೋಪ ಹೊರಿಸಿದ್ದಾರೆ. ಇದು ನಿಸ್ಸಂದೇಹವಾಗಿ ಕ್ರೌರ್ಯ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಜೆಟಿಒ ಆಯ್ಕೆ ಪಟ್ಟಿ ರೀಡೂ

ಒಂದನೇ ಪುಟದಿಂದ...

'ಅತೀ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳ ಸೇವಾನುಭವ ಪ್ರಮಾಣಪತ್ರ ಸರಿ ಇಲ್ಲವೆಂಬ ಕಾರಣಕ್ಕೆ ಅಂತಿಮ ಆಯ್ಕೆ ಪಟ್ಟಿಯಿಂದ ಹಲವು ಅಭ್ಯರ್ಥಿಗಳನ್ನು ತಿರಸ್ಕರಿಸಲಾಗಿತ್ತು. ಇದೀಗ, ಸೇವಾನುಭವ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ಉದ್ಯೋಗದಾತರಿಂದ (ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆ) ಸ್ಪಷ್ಟೀಕರಣ ಪಡೆದು ಆಯ್ಕೆ ಪಟ್ಟಿ ಸಿದ್ಧಪಡಿಸುವಂತೆ ಹೈಕೋರ್ಟ್ ಆದೇಶ ನೀಡಿದೆ. ಅದರಂತೆ ಪಟ್ಟಿ ಪರಿಷ್ಕರಿಸಬೇಕಿದೆ' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಪ್ರಕರಣದ ವಿಚಾರಣೆ ವೇಳೆ, 'ಐಟಿಐಗಳಲ್ಲಿ 1,900ಕ್ಕೂ ಹೆಚ್ಚು ಜೆಟಿಒ ಹುದ್ದೆ ಖಾಲಿ ಇದ್ದರೂ, 2018ರಿಂದಲೂ ಈ ಅಧಿಕಾರಿಗಳ ನೇಮಕಾತಿ ಅಂತಿಮಗೊಳಿಸಿಲ್ಲ. ನೇಮಕಾತಿಗೆ ಸಂಬಂಧಿಸಿದಂತೆ ಕೆಎಟಿ ಬೇರೆ ಬೇರೆ ಆದೇಶಗಳನ್ನು ನೀಡಿರುವ ಕಾರಣ ಇಡೀ ಆಯ್ಕೆಯನ್ನು ರೀಡೂ ಮಾಡುವಂತೆ ಕೆಪಿಎಸ್‌ಸಿಗೆ ಅನುಮತಿಸಬಹುದು' ಎಂದು ಸರ್ಕಾರದ ಪರ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಹೈಕೋರ್ಟ್‌ಗೆ ಮನವಿ ಮಾಡಿದ್ದರು. ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಸಲ್ಲಿಸಿದ್ದ ದಾಖಲೆ ಪರಿಗಣಿಸಿ, ಅಗತ್ಯವಿದ್ದರೆ ಉದ್ಯೋಗದಾತರಿಂದ ಸ್ಪಷ್ಟೀಕರಣ ಪಡೆದು ಕಾನೂನುಬದ್ಧವಾಗಿ ಆಯ್ಕೆ ಮಾಡಲು ಕೆಪಿಎಸ್‌ಸಿಗೆ ಸ್ವಾತಂತ್ರ್ಯ ನೀಡಬಹುದು' ಎಂದಿದ್ದರು. ಕೆಪಿಎಸ್‌ಸಿ ಪರ ವಕೀಲರು ಅದಕ್ಕೆ ಸಹಮತಿ ಸೂಚಿಸಿದ್ದರು. ಹೊಸ ಆಯ್ಕೆ ಪಟ್ಟಿಯನ್ನು ಕೋರ್ಟ್‌ಗೆ ಕೆಪಿಎಸ್‌ಸಿ ಸಲ್ಲಿಸಬೇಕು' ಎಂದು ಅರ್ಜಿದಾರರ ಪರ ವಕೀಲರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ವಾದ ಆಲಿಸಿದ್ದ ಪೀಠ, ಹೊಸ ಪಟ್ಟಿಯನ್ನು ಸಿದ್ಧಪಡಿಸಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು ಎಂದು ಆದೇಶ ನೀಡಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆಯ ಆಯುಕ್ತರಾದ ಕೆ. ಜ್ಯೋತಿ, 'ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಅರ್ಹತೆ ಇದ್ದರೂ ಸೇವಾನುಭವ ಪ್ರಮಾಣಪತ್ರ ಸರಿ ಇಲ್ಲವೆಂಬ ಕಾರಣಕ್ಕೆ ಆಯ್ಕೆಯಾಗದವರು ಕೋರ್ಟ್ ಮೆಟ್ಟಿಲೇರಿದ್ದಾರೆ. ಮೆರಿಟ್ ಪರಿಗಣಿಸದೆ, ಸೇವಾನುಭವದ ಪ್ರಮಾಣಪತ್ರದ ಆಧಾರದಲ್ಲಿ ಆಯ್ಕೆ ಪಟ್ಟಿ ಮಾಡಿರುವುದು ಸರಿಯಲ್ಲವೆಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಹೀಗಾಗಿ, ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅಭ್ಯರ್ಥಿಗಳು ಆಯಾ ವಿಷಯದಲ್ಲಿ ಸಲ್ಲಿಸಿರುವ ಸೇವಾನುಭವ ಪ್ರಮಾಣಪತ್ರವನ್ನು ಮತ್ತೊಮ್ಮೆ ಪರಿಶೀಲಿಸಬೇಕಿದೆ. ಇದಕ್ಕಾಗಿ ಇಲಾಖೆಯಿಂದ ಜೆಟಿಒ ಆಗಿ ಪ್ರಾಂಶುಪಾಲರಾಗಿರುವವರ ಸಮಿತಿ ರಚಿಸಿ, ಅಂತಿಮ ಆಯ್ಕೆ ಪಟ್ಟಿ ಮಾಡಲು ಕೆಪಿಎಸ್‌ಸಿಗೆ ನೆರವು ನೀಡುತ್ತೇವೆ' ಎಂದರು.

7 ಸಾವಿರಕ್ಕೂ ಹೆಚ್ಚು 'ಅರ್ಹರು' ತಿರಸ್ಕೃತ!

ಪರೀಕ್ಷೆಯಲ್ಲಿ ಅರ್ಹತೆ ಪಡೆದಿದ್ದ ಏಳು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಸೇವಾನುಭವ ಪ್ರಮಾಣಪತ್ರದಲ್ಲಿ 'ನಿರ್ದಿಷ್ಟ ಕಾರ್ಯಕ್ಷೇತ್ರದ ಕಾರ್ಯಾನುಭವದಲ್ಲಿ ಸ್ಪಷ್ಟತೆ ಇಲ್ಲ' ಎಂದು ಕಾರಣ ನೀಡಿ ಕೆಪಿಎಸ್‌ಸಿ ತಿರಸ್ಕರಿಸಿತ್ತು. ಹುದ್ದೆಗೆ ತಿರಸ್ಕೃತಗೊಂಡ ಅಭ್ಯರ್ಥಿಗಳಿಗಿಂತಲೂ ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ ಅಭ್ಯರ್ಥಿಗಳು ಆಯ್ಕೆಗೊಂಡಿರುವುದು ಗೊಂದಲಕ್ಕೆ ಕಾರಣವಾಗಿತ್ತು. 400 ಅಂಕಗಳ ಪರೀಕ್ಷೆಯಲ್ಲಿ ಕೇವಲ 60, 80 ಅಂಕ ಗಳಿಸಿದವರೂ ನೇಮಕಗೊಂಡವರಲ್ಲಿ ಇದ್ದಾರೆ ಎಂದು ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆಯ ಮೂಲಗಳು ತಿಳಿಸಿವೆ.

ಸುಧಾ, ಮಯೂರ ಓದಿರಿ...

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು-27.
ಸಂಖ್ಯೆ: ಬೆಮಸಾ/ಕೇಕ/ಕಾಇ/ಕಾನಿಅ/549-550/2023-24 ದಿನಾಂಕ: 08.08.2023

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-6-7/2023-24

ಅರ್ಹ ಗುತ್ತಿಗೆದಾರರಿಂದ 1) **ಬೆಂಗಳೂರು ಕೆ.ಆರ್.ಪುರಂ ಬೆಂ.ಮ.ಸಾ.ಸಂಸ್ಥೆಯ ಬಸ್ ಘಟಕ-29 ರಲ್ಲಿ ವಿದ್ಯುತ್ ಬಸ್ ಚಾರ್ಜಿಂಗ್‌ಗೆ 4100 ಕೆ.ವಿ.ಎ. ಸಾಮರ್ಥ್ಯದ ಹೆಚ್.ಟಿ. ವಿದ್ಯುತ್ ಸಂಪರ್ಕ ಒದಗಿಸುವುದು**" ಟೆಂಡರ್‌ಗಿಟ್ಟ ಮೊತ್ತ **ರೂ. 116.00** ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ **ರೂ. 2,00,000/-**. 2) **ಬೆಂಗಳೂರು ಶಾಂತಿನಗರ ಬೆಂ.ಮ.ಸಾ.ಸಂಸ್ಥೆಯ ಬಸ್ ಘಟಕ-3 ರಲ್ಲಿ ವಿದ್ಯುತ್ ಬಸ್ ಚಾರ್ಜಿಂಗ್‌ಗೆ 5200 ಕೆ.ವಿ.ಎ. ಸಾಮರ್ಥ್ಯದ ಹೆಚ್.ಟಿ. ವಿದ್ಯುತ್ ಸಂಪರ್ಕ ಒದಗಿಸುವುದು**". ಟೆಂಡರ್‌ಗಿಟ್ಟ ಮೊತ್ತ **ರೂ. 97.00** ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ **ರೂ. 1,94,000/-** ಕೆಲಸಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಭಾಗವಹಿಸುವ ಗುತ್ತಿಗೆದಾರರು ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

(1) ಟೆಂಡರ್ ಸಲ್ಲಿಸಲು ಕಡೆ ದಿನಾಂಕ: **18.08.2023. (2)** ಟೆಂಡರ್ ತೆರೆಯುವ ದಿನಾಂಕ: **21.08.2023**

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಬೆ.ಮ.ಸಾ.ಸಂಸ್ಥೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91-80-22977666/276/433/216/217 ಟೆಲಿ-ಫ್ಯಾಕ್ಸ್:080-26534477
ಇ-ಮೇಲ್: pstodirectorsjicr@gmail.com / pe.sjicrblr@gmail.com

ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ದ್ವಿ-ಲಕೋಟೆ ಪದ್ಧತಿಯನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ವಿವರಗಳು
1	ಎಸ್‌ಜೆಐಸಿಆರ್/2023-24/ IND0004 ದಿನಾಂಕ:07.08.2023	ವೈದ್ಯಕೀಯ ಉಪಕರಣಗಳ ಪೂರೈಕೆ
2	ಎಸ್‌ಜೆಐಸಿಆರ್/2023-24/ IND0001 ದಿನಾಂಕ: 07.08.2023	ಪೀಠೋಪಕರಣಗಳು & ನೆಲಹಾಸುಗಳು, ಲಾಂಡ್ರಿ ರಾಸಾಯನಿಕಗಳು, ಎಲೆಕ್ಟ್ರಿಕಲ್ ಐಟಮ್ಸ್, ಪ್ಲಂಬಿಂಗ್ ಮತ್ತು ಸ್ಯಾನಿಟರಿ ಐಟಮ್ಸ್ ಮತ್ತು ಹವಾನಿಯಂತ್ರಣದ ಉಪಕರಣಗಳ ಸರಬರಾಜು
3	ಎಸ್‌ಜೆಐಸಿಆರ್/2023-24/ IND0002 ದಿನಾಂಕ: 07.08.2023	ವೈದ್ಯಕೀಯ ಉಪಕರಣಗಳಿಗೆ ಬಿಡಿಭಾಗಗಳು, ಉಪಯುಕ್ತ ವಸ್ತುಗಳು ಮತ್ತು ಬಿಡಿಭಾಗಗಳ ಪೂರೈಕೆ
4	ಎಸ್‌ಜೆಐಸಿಆರ್/2023-24/ IND0005 ದಿನಾಂಕ: 07.08.2023	ರವಾನೆ ಆಧಾರದ ಮೇಲೆ TAVI/TAVR (ಟ್ರಾನ್ಸ್ ಕ್ಯಾತಿಟರ್ ಮಹಾಪಧಮನಿಯ ವಾಲ್ವ್ ಇಂಪ್ಲಾಂಟ್/ ಬದಲಿ- ಸೆಲ್ಫ್ ಎಕ್ಸ್‌ಪ್ಯಾಂಡಿಂಗ್ /ಬಲೂನ್ ಎಕ್ಸ್‌ಪ್ಯಾಂಡಿಂಗ್) ಗಳ ಪೂರೈಕೆ.

1. ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ : 10.08.2023** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **11.09.2023ರ ಸಂಜೆ 4.00 ಗಂಟೆಯವರೆಗೆ.**
2. ಪೂರ್ವಭಾವಿ ಸಭೆ ದಿನಾಂಕ : **23.08.2023ರ ಬೆಳಿಗ್ಗೆ 11:30 ಗಂಟೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **12.09.2023 ಸಂಜೆ 4:00 ಗಂಟೆಗೆ.**
4. **ಇ.ಎಂ.ಡಿ. :** ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಿರುವಂತೆ.
5. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.jayadevacardiology. com** ನ್ನು ನೋಡಬಹುದು.

ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ ತಿರಸ್ಕರಿಸುವ / ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/-
ಮುಖ್ಯ ಆಡಳಿತಾಧಿಕಾರಿಗಳು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಅಲ್ಪಾವಧಿ / ಇ-ಟೆಂಡರ ಅಧಿಸೂಚನೆ

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2022-23 ದಿನಾಂಕ: 09-08-2023

ಉಲ್ಲೇಖ: ಜಾಹಿರಾತು ನಂ:- 1316, ದಿನಾಂಕ :-23-03-2023, ಜಾಹಿರಾತು ನಂ:- 1290, ದಿನಾಂಕ :-17-03-2023

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸನ್ 2022-23, 2023-24ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿಯ ಅನುದಾನ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆಕ್ಟ್ 2000 ನಿಯಮದನ್ವಯ ಕಥಅ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : (1) ಇಂಡೆಂಟ್ ನಂ- 2038 ರೂ. 3.00ಲಕ್ಷ **(2)** ಇಂಡೆಂಟ್ ನಂ- 1721 ರೂ. 13.00ಲಕ್ಷ **(3)** ಇಂಡೆಂಟ್ ನಂ- 2064 ರೂ. 10.00ಲಕ್ಷ **(4)** ಇಂಡೆಂಟ್ ನಂ- 2083 ರೂ. 35.00ಲಕ್ಷ **(5)** ಇಂಡೆಂಟ್ ನಂ- 1722 ರೂ. 19.30ಲಕ್ಷ

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ: (6) ಇಂಡೆಂಟ್ ನಂ- 2133 ರೂ. 47.90ಲಕ್ಷ **(7)** ಇಂಡೆಂಟ್ ನಂ- 1724 ರೂ. 2.45ಲಕ್ಷ

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : (8) ಇಂಡೆಂಟ್ ನಂ- 1731 ರೂ. 40.00ಲಕ್ಷ **(9)** ಇಂಡೆಂಟ್ ನಂ- 2050 ರೂ. 8.00ಲಕ್ಷ **(10)** ಇಂಡೆಂಟ್ ನಂ- 2360 ರೂ. 4.33ಲಕ್ಷ **(11)** ಇಂಡೆಂಟ್ ನಂ- 1725 ರೂ. 4.25ಲಕ್ಷ **(12)** ಇಂಡೆಂಟ್ ನಂ- 1720 ರೂ. 21.00ಲಕ್ಷ **(13)** ಇಂಡೆಂಟ್ ನಂ-2453 ರೂ. 15.00ಲಕ್ಷ **(14)** ಇಂಡೆಂಟ್ ನಂ-2465 ರೂ. 48.00ಲಕ್ಷ **(15)** ಇಂಡೆಂಟ್ ನಂ-2570 ರೂ. 48.00ಲಕ್ಷ **(16)** ಇಂಡೆಂಟ್ ನಂ- 2082 ರೂ. 35.00ಲಕ್ಷ **(17)** ಇಂಡೆಂಟ್ ನಂ- 2137 ರೂ. 17.30ಲಕ್ಷ **(18)** ಇಂಡೆಂಟ್ ನಂ- 2008 ರೂ. 1.50ಲಕ್ಷ **(19)** ಇಂಡೆಂಟ್ ನಂ- 2194 ರೂ. 13.70ಲಕ್ಷ **(20)** ಇಂಡೆಂಟ್ ನಂ- 2192 ರೂ. 22.00ಲಕ್ಷ **(21)** ಇಂಡೆಂಟ್ ನಂ- 2197 ರೂ. 12.30ಲಕ್ಷ **(22)** ಇಂಡೆಂಟ್ ನಂ- 2196 ರೂ. 5.95ಲಕ್ಷ **(23)** ಇಂಡೆಂಟ್ ನಂ- 2079 ರೂ. 15.00ಲಕ್ಷ **(24)** ಇಂಡೆಂಟ್ ನಂ- 2054 ರೂ. 15.86ಲಕ್ಷ

ಮರು ಕರೆ ಕಾಮಗಾರಿಗಳು : ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : (25) ಇಂಡೆಂಟ್ ನಂ-2412 ರೂ. 49.80ಲಕ್ಷ (2ನೇ ಕರೆ) **(26)** ಇಂಡೆಂಟ್ ನಂ-2295 ರೂ. 34.20ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : (27) ಇಂಡೆಂಟ್ ನಂ-2309 ರೂ. 31.00ಲಕ್ಷ (3ನೇ ಕರೆ) **(28)** ಇಂಡೆಂಟ್ ನಂ-2323 ರೂ. 6.10ಲಕ್ಷ (5ನೇ ಕರೆ) **(29)** ಇಂಡೆಂಟ್ ನಂ-2305 ರೂ. 12.32ಲಕ್ಷ (4ನೇ ಕರೆ) **(30)** ಇಂಡೆಂಟ್ ನಂ-2420 ರೂ. 7.20ಲಕ್ಷ (4ನೇ ಕರೆ) **(31)** ಇಂಡೆಂಟ್ ನಂ-2421 ರೂ. 7.20ಲಕ್ಷ (4ನೇ ಕರೆ) **(32)** ಇಂಡೆಂಟ್ ನಂ-2296 ರೂ. 4.40ಲಕ್ಷ (2ನೇ ಕರೆ) **(33)** ಇಂಡೆಂಟ್ ನಂ-2411 ರೂ. 10.00ಲಕ್ಷ (2ನೇ ಕರೆ) **(34)** ಇಂಡೆಂಟ್ ನಂ-2303 ರೂ. 5.00ಲಕ್ಷ (3ನೇ ಕರೆ) **(35)** ಇಂಡೆಂಟ್ ನಂ-2297 ರೂ. 5.00ಲಕ್ಷ (3ನೇ ಕರೆ) **(36)** ಇಂಡೆಂಟ್ ನಂ-2301 ರೂ. 32.70ಲಕ್ಷ (3ನೇ ಕರೆ) **(37)** ಇಂಡೆಂಟ್ ನಂ-2410 ರೂ. 28.00ಲಕ್ಷ (4ನೇ ಕರೆ) **(38)** ಇಂಡೆಂಟ್ ನಂ-2352 ರೂ. 15.00ಲಕ್ಷ (3ನೇ ಕರೆ) **(39)** ಇಂಡೆಂಟ್ ನಂ-2327 ರೂ. 28.50ಲಕ್ಷ (5ನೇ ಕರೆ) **(40)** ಇಂಡೆಂಟ್ ನಂ-2307 ರೂ. 22.35ಲಕ್ಷ (6ನೇ ಕರೆ) **(41)** ಇಂಡೆಂಟ್ ನಂ-2298 ರೂ. 7.20ಲಕ್ಷ (4ನೇ ಕರೆ) **(42)** ಇಂಡೆಂಟ್ ನಂ-2408 ರೂ. 36.00ಲಕ್ಷ (3ನೇ ಕರೆ) **(43)** ಇಂಡೆಂಟ್ ನಂ-2405 ರೂ. 3.00ಲಕ್ಷ (2ನೇ ಕರೆ) **(44)** ಇಂಡೆಂಟ್ ನಂ-2328 ರೂ. 12.00ಲಕ್ಷ (2ನೇ ಕರೆ) **(45)** ಇಂಡೆಂಟ್ ನಂ-2392 ರೂ. 33.00ಲಕ್ಷ (2ನೇ ಕರೆ) **(46)** ಇಂಡೆಂಟ್ ನಂ-2414 ರೂ. 30.00ಲಕ್ಷ (4ನೇ ಕರೆ) **(47)** ಇಂಡೆಂಟ್ ನಂ-2338 ರೂ. 8.40ಲಕ್ಷ (3ನೇ ಕರೆ) **(48)** ಇಂಡೆಂಟ್ ನಂ-2369 ರೂ. 18.00ಲಕ್ಷ (3ನೇ ಕರೆ) **(49)** ಇಂಡೆಂಟ್ ನಂ-2348 ರೂ. 5.40ಲಕ್ಷ (3ನೇ ಕರೆ) **(50)** ಇಂಡೆಂಟ್ ನಂ-2415 ರೂ. 35.00ಲಕ್ಷ (3ನೇ ಕರೆ) **(51)** ಇಂಡೆಂಟ್ ನಂ-2413 ರೂ. 8.60ಲಕ್ಷ (2ನೇ ಕರೆ) **(52)** ಇಂಡೆಂಟ್ ನಂ-2329 ರೂ. 15.00ಲಕ್ಷ (2ನೇ ಕರೆ) **(53)** ಇಂಡೆಂಟ್ ನಂ-2376 ರೂ. 3.00ಲಕ್ಷ (4ನೇ ಕರೆ) **(54)** ಇಂಡೆಂಟ್ ನಂ-2416 ರೂ. 28.50ಲಕ್ಷ (9ನೇ ಕರೆ) **(55)** ಇಂಡೆಂಟ್ ನಂ-2396 ರೂ. 30.00ಲಕ್ಷ (5ನೇ ಕರೆ) **(56)** ಇಂಡೆಂಟ್ ನಂ-2452 ರೂ. 12.00ಲಕ್ಷ (4ನೇ ಕರೆ) **(57)** ಇಂಡೆಂಟ್ ನಂ-2424 ರೂ. 14.00ಲಕ್ಷ (4ನೇ ಕರೆ) **(58)** ಇಂಡೆಂಟ್ ನಂ-2422 ರೂ. 5.20ಲಕ್ಷ (3ನೇ ಕರೆ) **(59)** ಇಂಡೆಂಟ್ ನಂ-2587 ರೂ. 18.00ಲಕ್ಷ (2ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ:0836:2213834ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ: **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರಮೆಂಟ್‌ನಲ್ಲಿ **ದಿನಾಂಕ: 10-08-2023** ಪಡೆಯಬಹುದಾಗಿದೆ.

ಕ್ರ. ಸಂ 01, 02, 07 ರಿಂದ 15 ಹಾಗೂ ಕ್ರ. ಸಂ 25, 32 ರಿಂದ 59 ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 21-08-2023 ರಂದು ಸಾಯಂಕಾಲ 4.00 ಘಂಟೆಯವರೆಗೆ ಕ್ರ. ಸಂ 01, 02, 07 ರಿಂದ 15 ಹಾಗೂ ಕ್ರ. ಸಂ 25, 32 ರಿಂದ 59 ಟೆಂಡರ್ ತೆರೆಯುವ ದಿನಾಂಕ:22-08-2023 ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು.

ಕ್ರ. ಸಂ. 03 ರಿಂದ 06 ಹಾಗೂ 16 ರಿಂದ 24, 26 ರಿಂದ 31 ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 28-08-2023 ರಂದು ಸಾಯಂಕಾಲ 4.00 ಘಂಟೆಯವರೆಗೆ ಕ್ರ. ಸಂ. 03 ರಿಂದ 06 ಹಾಗೂ 16 ರಿಂದ 24, 26 ರಿಂದ 31 ಟೆಂಡರ್ ತೆರೆಯುವ ದಿನಾಂಕ: 29-08-2023 ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು.

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ./ಧಾರವಾಡ/153/2023-24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಕೊಪ್ಪಳ
(ಅಕ್ಷರ ದಾಸೋಹ ವಿಭಾಗ)
E-mail ID : eomdmkpl@gmail.com Phone: 08539-220186
ಸಂಖ್ಯೆ: ಜಿಪಂಕೊ/ಅದಾ/ಆ.ಧಾನ್ಯ.ಸಾ.ಟೆಂ/06/2023-24/10 ದಿನಾಂಕ: 07.08.2023

-:: ಅಲ್ಪಾವದಿ ಮರು ಇ-ಪ್ರೋಕ್ಯೂರಮೆಂಟ ಪ್ರಕಟಣೆ ::-

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಕೊಪ್ಪಳ ಇವರು ಅಕ್ಷರ ದಾಸೋಹ ಕಾರ್ಯಕ್ರಮದಡಿ 2023-24 ನೇ ಸಾಲಿನಲ್ಲಿ ಆಹಾರ ಧಾನ್ಯಗಳನ್ನು ಆಯಾ ತಾಲೂಕಿನ ಕೆ.ಎಫ್.ಸಿ. ಎಸ್.ಸಿ. ಗೋದಾಮುಗಳಿಂದ ತಾಲೂಕಿನ ಸರಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಅಡುಗೆ ಕೇಂದ್ರಗಳಿಗೆ ಆಹಾರ ಧಾನ್ಯಗಳನ್ನು ಸಾಗಾಣಿಕೆ ಮಾಡಲು (ಪ್ರತ್ಯೇಕವಾಗಿ) ಅರ್ಹ ಸಾಗಾಣಿಕೆದಾರರಿಂದ ಇ-ಪ್ರೋಕ್ಯೂರಮೆಂಟ್ ಮೂಲಕ ಟೆಂಡರ್ ಅಹ್ವಾನಿಸಲಾಗಿದೆ.

ಟೆಂಡರ್ ವೇಳಾಪಟ್ಟಿಯ ವಿವರ:
1. ಶೆಡ್ಯೂಲಗಳನ್ನು ಆನ್‌ಲೈನನಲ್ಲಿ ಬಿಡುವ ದಿನಾಂಕ: **09.08.2023**. 2. ಭರ್ತಿ ಮಾಡಿದ ಟೆಂಡರಗಳನ್ನು ಆನ್‌ಲೈನ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ: **14.08.2023 ಸಂಜೆ 5.00 ಘಂಟೆವರೆಗೆ.** 3. ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **19.08.2023. ಬೆಳಿಗ್ಗೆ 10.30 ಘಂಟೆಗೆ.** 4. ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **21.08.2023. ಬೆಳಿಗ್ಗೆ 10.30 ಘಂಟೆಗೆ.**

ಟೆಂಡರ್ ಇಂಡೆಟ್ ಸಂಖ್ಯೆಗಳ ವಿವರ:
1. INDENT No : GVT TQ / MDM / KFCSC TO SCHOOL/TRANSPORT TENDER / 101/ C-2 / 2023-24.
2. INDENT No : KPL TQ / MDM / KFCSC TO SCHOOL/TRANSPORT TENDER / 102/ C-2 / 2023-24.
3. INDENT No : KST TQ / MDM / KFCSC TO SCHOOL/ TRANSPORT TENDER /103/ C-2 / 2023-24.
4. INDENT No : YLB TQ / MDM / KFCSC TO SCHOOL/TRANSPORT TENDER /104/ C-2 / 2023-24.

ಸಾಗಾಣಿಕೆ ಗುತ್ತಿಗೆಯ ಟೆಂಡರ್ ಅರ್ಜಿಗಳು, ವಿವರ, ಷರತ್ತು ಹಾಗೂ ನಿಂಬಂಧನೆಗಳಿಗಾಗಿ ವೆಬ್‌ಸೈಟ್ http://www.eproc.karnataka.gov.in ಸಂಪರ್ಕಿಸ ಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ **(08539-220186)** ಅಥವಾ **7259924795**. ಶಿಕ್ಷಣಾಧಿಕಾರಿಗಳು ಜಿಲ್ಲಾ ಪಂಚಾಯತ ಕೊಪ್ಪಳ (ಅಕ್ಷರ ದಾಸೋಹ ವಿಭಾಗ)

ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್ ಕೊಪ್ಪಳ

ವಾ.ಸಾ.ಇ./ಕೊಪ್ಪಳ/91/2023-24/ದೇಶಪಾಂಡೆ ಪಬ್ಲಿಸಿಟಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001,
ಫೋನ್: 080-22215601,22215801, ಫ್ಯಾಕ್ಸ್ : 080-22215602

ಸಂಖ್ಯೆ: ಡಿವೈಇಎಸ್/ಎಸ್ಎಸ್‌ಹೆಚ್/81/2023-24 ದಿನಾಂಕ: 08.08.2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಉಪ-ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001, ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯಗಳಲ್ಲಿ ತರಬೇತಿ ಪಡೆಯುತ್ತಿರುವ ಕ್ರೀಡಾಪಟುಗಳ ದೈನಂದಿನ ಕ್ರೀಡಾ ತರಬೇತಿಗೆ ಅಗತ್ಯವಾದ ಕ್ರೀಡಾ ಸಮವಸ್ತ್ರಗಳನ್ನು ಖರೀದಿಸಲು ಇ-ಟೆಂಡರ್ ಮೂಲಕ ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	ಕ್ರೀಡಾ ಸಮವಸ್ತ್ರಗಳ ಸರಬರಾಜು	ರೂ.4,04,02,418/-	ರೂ.6,06,036/-

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 24.08.2023 ಸಮಯ 16.00 ಗಂಟೆ
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25.08.2023 ಸಮಯ 16.30 ಗಂಟೆ ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/-
ಉಪ-ನಿರ್ದೇಶಕರು (ಆಡಳಿತ),
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

ವಾ.ಸಾ.ಸಂ.ಇ/ವಾಪ್ರ/840/ಆಕಾರ್/2023-24

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ,
ದೂರವಾಣಿ:0831-2406310 FAX-2452644 Email-deo.belagavi@gmail.com
ಸಂಖ್ಯೆ:ಕಂಶಾ/ಎಜೆಎಎಸ್‌ಕೆ/ವಿವ/07/2023-24 ದಿನಾಂಕ:08.08.2023

-:: ಟೆಂಡರ್ ಪ್ರಕಟಣೆ ::-

ಬೆಳಗಾವಿ ಜಿಲ್ಲೆಯ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಡಾಟಾ ಎಂಟ್ರಿ ಆಪರೇಟರ್ ಸೇವೆಯನ್ನು ಒಗಿಸಲು ಅರ್ಹ ಮತ್ತು ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಲಾಗಿದೆ. ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ.

ಇ-ಪ್ರೊಕ್ಯೂರಮೆಂಟ್ ತಾಣದಿಂದ ಟೆಂಡರ್ ಪತ್ರಿಕೆ ಪಡೆಯುವ ದಿನಾಂಕ	08.08.2023
ಟೆಂಡರ್ ವಿವರಗಳ ಬಗ್ಗೆ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ	09.08.2023 ಸಾಂಯಕಾಲ 5.00 ಗಂಟೆಗೆ
ಬಿಡ್ ಪೂರ್ವ ಸಭೆ (ಅಗತ್ಯವಾದರೆ ಮಾತ್ರ)	10.08.2023 ಮಧ್ಯಾಹ್ನ 3-00 ಗಂಟೆಗೆ
ಇ-ಪ್ರೊಕ್ಯೂರ್‌ಮೆಂಟ್ ತಾಣದಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	23.08.2023 ಸಾಂಯಕಾಲ 5-30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ:	24.08.2023
ಹಣಕಾಸು ಬಿಡ್ ತೆರೆಯುವ ದಿನಾಂಕ:	29.08.2023
ಟೆಂಡರ್ ತೆರೆಯುವ ಕಚೇರಿಯ ವಿಳಾಸ	ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ ದೂರವಾಣಿ ಸಂಖ್ಯೆ: 0831-2406310 ಇ-ಮೇ: ajskbhoomi@gmail.com
ಇ.ಎಂ.ಡಿ ಮೊತ್ತ	ರೂ. 6,66,000-00

ಟೆಂಡರ್ ಕುರಿತು ಹೆಚ್ಚಿನ ವಿವರಗಳು ಹಾಗೂ ಮಾಹಿತಿಗೆ http://eproc.karnataka.gov.in ಅಥವಾ ಜಿಲ್ಲಾಧಿಕಾರಿಗಳ ಕಾರ್ಯಾಲಯವನ್ನು ಸಂಪರ್ಕಿಸಲು ಕೋರಿದೆ.

ಸಹಿ/-(ನಿತೇಶ್ ಕೆ ಪಾಟೀಲ)
ಜಿಲ್ಲಾಧಿಕಾರಿಗಳು, ಬೆಳಗಾವಿ

DIPR/BGM/RO-NO-251/MCA/2023-24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ನಾನು ಯಾರಿಗೂ ಹೆದರುವುದಿಲ್ಲ. ಆದರೆ ಎಲ್ಲರನ್ನೂ ಗೌರವಿಸುತ್ತೇನೆ.

—ರೋಜರ್ ಫೆಡರರ್

ಒಕ್ಕೂಟ ವ್ಯವಸ್ಥೆಯ ಮಹತ್ವವನ್ನು ಗೌಣವಾಗಿಸಿದ ‘ದೆಹಲಿ’ ಮಸೂದೆ

ಸಂಸತ್ತಿನ ಉಭಯ ಸದನಗಳಲ್ಲೂ ಅಂಗೀಕಾರಗೊಂಡಿರುವ ‘ದೆಹಲಿ ರಾಷ್ಟ್ರ ರಾಜಧಾನಿ ಪ್ರದೇಶ (ತಿದ್ದುಪಡಿ) ಮಸೂದೆ’ಯು ದೆಹಲಿ ಮಾತ್ರವಲ್ಲದೆ ದೇಶದ ಇತರ ಭಾಗಗಳಲ್ಲೂ ಪ್ರತಿಕೂಲ ಪರಿಣಾಮವನ್ನು ಬೀರುವಂಥದ್ದು. ಅಷ್ಟೇ ಅಲ್ಲ, ಶಾಸನದ ತಕ್ಷಣದ ಉದ್ದೇಶಗಳಿಗೆ ಸೀಮಿತವಾಗಿ ಮಾತ್ರವಲ್ಲದೆ ಬೇರೆ ರೀತಿಯಿಂದಲೂ ಪರಿಣಾಮವನ್ನು ಉಂಟುಮಾಡುವಂಥದ್ದು. ಪೊಲೀಸ್, ಸುವ್ಯವಸ್ಥೆ ಹಾಗೂ ಜಮೀನಿಗೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲ ಆಡಳಿತಾತ್ಮಕ ಸೇವೆಗಳ ಮೇಲೆ ದೆಹಲಿಯ ಚುನಾಯಿತ ಸರ್ಕಾರಕ್ಕೆ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಕೋರ್ಟ್ ತೀರ್ಪಿನ ಅನುಷ್ಠಾನದ ಹೊಣೆಯಿಂದ ಪಾರಾಗಲು ಕೇಂದ್ರ ಸರ್ಕಾರವು ಮೇ 19ರಂದು ಸುಗ್ರೀವಾಜ್ಞೆಯನ್ನು ಹೊರಡಿಸುವ ಮೂಲಕ ದೆಹಲಿ ಆಡಳಿತಾತ್ಮಕ ಸೇವೆಗಳ ಮೇಲಿನ ನಿಯಂತ್ರಣವನ್ನು ತನ್ನ ಬಳಿಯೇ ಉಳಿಸಿಕೊಂಡಿತ್ತು. ಕೋರ್ಟ್, ಈ ಹಿಂದೆ ಯಾವ ಲೋಪವನ್ನು ಸರಿಪಡಿಸಿತ್ತೋ ಆ ಲೋಪವನ್ನು ಮೊದಲು ಸುಗ್ರೀವಾಜ್ಞೆಯ ಮೂಲಕ, ಬಳಿಕ ಈ ಮಸೂದೆಯ ಮೂಲಕ ಕೇಂದ್ರ ಸರ್ಕಾರ ಮರುಸ್ಥಾಪಿಸಿದೆ. ಕೇಂದ್ರ ಸರ್ಕಾರದಿಂದ ನೇಮಕವಾದ ಅಧಿಕಾರಿಗಳು, ದೆಹಲಿಯ ಚುನಾಯಿತ ಮುಖ್ಯಮಂತ್ರಿಯ ಆದೇಶವನ್ನೂ ಮೀರುವ ಅವಕಾಶವನ್ನು ಈ ಮಸೂದೆ ನೀಡಿದೆ. ಹೀಗಾಗಿ, ದೆಹಲಿ ಆಡಳಿತಾತ್ಮಕ ಸೇವೆಗಳ ವಿಷಯದಲ್ಲಿ ಲೆಫ್ಟಿನೆಂಟ್ ಗವರ್ನರ್ ಅವರೇ ನೈಜ ಶಕ್ತಿಕೇಂದ್ರ ಎನ್ನುವ ವಿಷಯದಲ್ಲಿ ಈಗ ಯಾವುದೇ ಅನುಮಾನ ಉಳಿದಿಲ್ಲ. ಮಸೂದೆಯ ಪ್ರಕಾರ, ಸೇವೆಗಳಿಗೆ ಸಂಬಂಧಿಸಿದ ಎಲ್ಲ ನೇಮಕಾತಿಗಳನ್ನು ಮುಖ್ಯ ಕಾರ್ಯದರ್ಶಿ ಮತ್ತು ಗೃಹ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಅವರನ್ನೊಳಗೊಂಡ ಸಮಿತಿಯ ಮೂಲಕವೇ ನಡೆಸಬೇಕು. ಚುನಾಯಿತ ಸರ್ಕಾರವನ್ನು ಅಧಿಕಾರಶಾಹಿಯ ಅಧೀನವಾಗಿಸುವ ಈ ನಡೆಯು ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಒಕ್ಕೂಟ ವ್ಯವಸ್ಥೆಯ ಆಶಯಗಳಿಗೆ ಸಂಪೂರ್ಣವಾಗಿ ತದ್ವಿರುದ್ಧವಾಗಿದೆ.

ಸರ್ಕಾರದ ಈ ನಡೆಯು ಚುನಾಯಿತ ಸರ್ಕಾರವನ್ನು ಅಧಿಕಾರಶಾಹಿಯ ಅಧೀನವಾಗಿಸುತ್ತದೆ

ಚುನಾಯಿತ ಸರ್ಕಾರಕ್ಕೆ ಇರುವ ಅಧಿಕಾರ ಏನೆಂಬುದನ್ನು ತೋರಿಸಿಕೊಟ್ಟಿದ್ದ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುವಾಗ ಒಕ್ಕೂಟ ತತ್ವದ ಮಹತ್ವ ಏನೆಂಬುದನ್ನೂ ಸಾರಿದ್ದ ಸುಪ್ರೀಂ ಕೋರ್ಟ್‌ನ ತೀರ್ಪನ್ನೇ ಈ ಮಸೂದೆ ಗೌಣವಾಗಿಸಿದೆ. ಕೇಂದ್ರ ಸರ್ಕಾರವು ಗೃಹ ಸಚಿವ ಅಮಿತ್ ಶಾ ಅವರ ಮುಂದಾಳತ್ವದಲ್ಲಿ ಮಸೂದೆಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದು, ‘ದೆಹಲಿಯಲ್ಲಿ ಭ್ರಷ್ಟಾಚಾರ ಮುಕ್ತ ಹಾಗೂ ಜನಪರ ಆಡಳಿತ ನೀಡಲು ಈ ನಡೆ ಅಗತ್ಯವಾಗಿತ್ತು’ ಎಂದು ಪ್ರತಿಪಾದಿಸಿದೆ. ಆದರೆ, ಕೇಂದ್ರವು ರಾಜಕೀಯ ಉದ್ದೇಶದಿಂದಲೇ ಆತುರಾತುರವಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದು ಮತ್ತು ಈಗ ಅಷ್ಟೇ ಅವಸರದಲ್ಲಿ ಮಸೂದೆಗೆ ಅಂಗೀಕಾರ ಪಡೆದಿದ್ದು ಜಗಜ್ಜಾಹೀರಾಗಿದೆ. ಎಎಪಿ ನೇತೃತ್ವದ ಸರ್ಕಾರದ ಜತೆಗೆ ಅದು ನಡೆಸಿರುವ ಸಂಘರ್ಷವನ್ನು ನಿರಂತರವಾಗಿ ಮುಂದುವರಿಸಲು ಉತ್ಸುಕವಾಗಿ ಇರುವುದನ್ನೂ ಈ ನಡೆ ಎತ್ತಿ ತೋರುತ್ತದೆ. ಎಲ್ಲ ಕೇಂದ್ರಾಡಳಿತ ಪ್ರದೇಶಗಳಿಗೆ ಕಾಯ್ದೆಗಳನ್ನು ರೂಪಿಸುವ ಅಧಿಕಾರವು ತನಗಿದ್ದು, ದೆಹಲಿಯೂ ಇದಕ್ಕೆ ಹೊರತೇನಲ್ಲ ಎಂದೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪ್ರತಿಪಾದಿಸಿದೆ. ಇದೇ ಬಿಜೆಪಿಯು ಈ ಹಿಂದೆ ಹೊಂದಿದ್ದ ನಿಲುವಿಗೆ ಈ ಪ್ರತಿಪಾದನೆ ಸಂಪೂರ್ಣ ತದ್ವಿರುದ್ಧವಾಗಿದೆ. ದೆಹಲಿಗೆ ಪರಿಪೂರ್ಣ ರಾಜ್ಯದ ಸ್ಥಾನಮಾನ ಕೊಡಬೇಕು ಮತ್ತು ಎಲ್ಲ ಅಧಿಕಾರಗಳೂ ಅದಕ್ಕೆ ಇರಬೇಕು ಎಂದು ಆ ಪಕ್ಷ ಮೊದಲಿನಿಂದಲೂ ಆಗ್ರಹಿಸುತ್ತಾ ಬಂದಿತ್ತು.

ಸುಪ್ರೀಂ ಕೋರ್ಟ್‌ನ ತೀರ್ಪನ್ನು ನಿಷ್ಕ್ರಿಯಗೊಳಿಸಲು ಕೇಂದ್ರ ಸರ್ಕಾರವು ಸಂಸತ್ತಿನ ಮೂಲಕ ಹಿಂಬಾಗಿಲ ಹಾದಿ ಹಿಡಿದಿದೆ ಎಂಬ ವಿರೋಧ ಪಕ್ಷಗಳ ವಾದದಲ್ಲಿ ತಥ್ಯವಿದೆ. ಈ ಹಿಂದೆ ಹೊರಡಿಸಲಾಗಿದ್ದ ಸುಗ್ರೀವಾಜ್ಞೆ ಕೂಡ ನ್ಯಾಯಪೀಠದ ಪರಿಶೀಲನೆಯಲ್ಲಿತ್ತು. ಮುಂದೆ ಕಾಯ್ದೆಯಾಗಿ ರೂಪುಗೊಳ್ಳಲಿರುವ ಈ ಮಸೂದೆಯನ್ನೂ ಅದು ಪರಿಶೀಲನೆಗೆ ಒಳಪಡಿಸಬಹುದು. ಈ ಮಸೂದೆಯು ಸಂವಿಧಾನದತ್ತವಾದ ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುವ ಮತ್ತೊಂದು ಪ್ರಯತ್ನ ಎಂದು ಬಹುತೇಕ ವಿರೋಧ ಪಕ್ಷಗಳು ಪರಿಭಾವಿಸಿದ್ದರಿಂದಲೇ ಅವುಗಳು ಒಟ್ಟಾಗಿ ವಿರೋಧ ವ್ಯಕ್ತಪಡಿಸಿವೆ. ಆದ್ದರಿಂದಲೇ ಇದು ದೆಹಲಿ ಆಚೆಗೂ ಪರಿಣಾಮ ಬೀರಬಹುದಾದ ಮಸೂದೆ ಎಂಬ ವ್ಯಾಖ್ಯಾನಕ್ಕೆ ಒಳಗಾಗಿದೆ. ರಾಜ್ಯಸಭೆಯಲ್ಲೂ ಈ ಮಸೂದೆಗೆ ಸುಲಭವಾಗಿ ಅಂಗೀಕಾರ ದೊರೆತಿದೆ. ಬಿಜೆಡಿ ಮತ್ತು ವೈಎಸ್‌ಆರ್ ಕಾಂಗ್ರೆಸ್ ಪಕ್ಷಗಳ ನೆರವಿನಿಂದ ಇದು ಸಾಧ್ಯವಾಗಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಈ ಮಸೂದೆಯು ದೂರಗಾಮಿಯಾಗಿ ಬೀರಬಹುದಾದ ಪರಿಣಾಮಗಳನ್ನು ಗ್ರಹಿಸುವಲ್ಲಿ ಆ ಎರಡೂ ಪಕ್ಷಗಳು ವಿಫಲವಾಗಿವೆ ಎಂದೇ ಅರ್ಥೈಸಬೇಕಾಗುತ್ತದೆ.

ದಿನದ ಟ್ವೀಟ್

ಕೃಷಿ ಸಾಧಕಿಯರು



2015-16ರ ಕೃಷಿ ಗಣತಿ ಪ್ರಕಾರ, ಒಟ್ಟು ಭೂ ಹಿಡುವಳಿಯಲ್ಲಿ ಶೇ 13.96ರಷ್ಟನ್ನು ಮಹಿಳೆಯರು ನಿರ್ವಹಿಸುತ್ತಿದ್ದಾರೆ. 2011ರ ಜನಗಣತಿಯ ಪ್ರಕಾರ, ಒಟ್ಟು ಸಾಗುವಳಿದಾರರಲ್ಲಿ (11.8 ಕೋಟಿ) ಶೇ 30.3ರಷ್ಟು ಮಂದಿ ಮಹಿಳೆಯರು. 14.4 ಕೋಟಿಯಷ್ಟಿರುವ ಕೃಷಿ ಕಾರ್ಮಿಕರಲ್ಲಿ ಶೇ 42.6ರಷ್ಟು ಮಂದಿ ಮಹಿಳೆಯರು. ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರವನ್ನು ನಾವು ಒಪ್ಪಿಕೊಳ್ಳಲೇಬೇಕಾದ ಸಮಯ ಬಂದಿದೆ!

ರಮಣ್‌ದೀಪ್ ಸಿಂಗ್ ಮಾನ್, ಎಂಜಿನಿಯರ್

ಕಿಡಿನುಡಿ

ಕರ್ನಾಟಕ ಕ್ರಿಕೆಟ್ ಅಂದರೆ ಅದು ಬೆಂಗಳೂರಿಗೆ ಮಾತ್ರ ಸೀಮಿತವಲ್ಲ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಪ್ರಮುಖರು ಇದನ್ನು ಅರ್ಥಮಾಡಿಕೊಳ್ಳಲು ಇದು ಸಕಾಲ. ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ ಮತ್ತು ಇತರ ಎರಡನೇ ಹಂತದ ನಗರಗಳಲ್ಲಿ ರಣಜಿ ಟ್ರೋಫಿಯನ್ನು ಆಯೋಜಿಸದೇ ಇರುವುದು –ಆಯೋಜನೆಯಲ್ಲಿ ಎದುರಿಸಬೇಕಾದ ಸವಾಲುಗಳ ನೆಪವೊಡ್ಡಿ– ಅಭಿಮಾನಿಗಳಿಗೆ ಮಾಡುವ ದೊಡ್ಡ ಅಪಚಾರ.

ರಾಮಚಂದ್ರ ಎಂ.

25 ವರ್ಷಗಳ ಹಿಂದೆ

ಭಾನುವಾರ, 9-8-1998

• **ಕಾವೇರಿ ಸೂತ್ರಕ್ಕೆ ಜಯಾ ತಿರಸ್ಕಾರ, ಮತ್ತೆ ಬಿಕ್ಕಟ್ಟು**

ನವದೆಹಲಿ, ಆ. 8 (ಪಿಟಿಐ, ಯುಎನ್‌ಐ)– ಕಾವೇರಿ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ಗೆ ಇದೇ ತಿಂಗಳ 12ರೊಳಗೆ ಯೋಜನೆಯೊಂದನ್ನು ಸಲ್ಲಿಸಲು ಕೇಂದ್ರ ಸಜ್ಜಾಗುತ್ತಿರುವ ಬೆನ್ನ ಹಿಂದೆಯೇ ಆಡಳಿತಾರೂಢ ಬಿಜೆಪಿ ಮಿತ್ರಪಕ್ಷವಾದ ಎಐಎಡಿಎಂಕೆ ಹಾಗೂ ಅದರ ಬೆಂಬಲಿಗ ಪಕ್ಷಗಳು ಈ ಯೋಜನೆಯನ್ನು ತಿರಸ್ಕರಿಸಿವೆ.

ಇದರಿಂದಾಗಿ ಕಾವೇರಿ ನೀರು ಹಂಚಿಕೆ ಸಂಬಂಧದಲ್ಲಿ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಮಧ್ಯೆ ಶುಕ್ರವಾರ ಆದ ಒಪ್ಪಂದದ ಜಾರಿಗೆ ರಾಜಕೀಯ ತೊಡಕು ಎದುರಾಗಿದೆ.

• **ಊಹಾಪೋಹಕ್ಕೆ ಎಡೆಮಾಡಿರುವ ‘ಕಿವಿಮಾತು’ ಸಭೆ**

ಬೆಂಗಳೂರು, ಆ. 8– ಯಾವುದೇ ಗಳಿಗೆಯಲ್ಲಿ ಲೋಕಸಭೆಗೆ ಚುನಾವಣೆ ನಡೆಯಬಹುದೆಂಬ ನಿರೀಕ್ಷೆಯ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಜನತಾದಳವನ್ನು ಬಲಪಡಿಸುವ ಉದ್ದೇಶದಿಂದ ಜಿಲ್ಲಾ ಅಧ್ಯಕ್ಷರು ಹಾಗೂ ಶಾಸಕರಿಗೆ ‘ಕಿವಿಮಾತು’ ಹೇಳಲು ಆಗಸ್ಟ್ 12 ಹಾಗೂ 13ರಂದು ನಗರದಲ್ಲಿ ಸಭೆ ಕರೆಯುವ ಸಂಭವವಿದ್ದು, ಇದು ನಾನಾ ರೀತಿಯ ಊಹಾಪೋಹಗಳಿಗೆ ಕಾರಣವಾಗಿದೆ.

ಕಾವೇರಿ ವಿವಾದಕ್ಕೆ ಸಂಬಂಧಿಸಿದಂತೆ ಪ್ರಧಾನಿ ಕರೆದಿದ್ದ ಮುಖ್ಯಮಂತ್ರಿಗಳ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದ್ದ ಜೆ.ಎಚ್.ಪಟೇಲರು, ಉಪ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸೇರಿದಂತೆ ಹಿರಿಯ ಸಚಿವರ ತಂಡದೊಂದಿಗೆ ಪಕ್ಷದ ವರಿಷ್ಠರು ಈ ವಿಚಾರದಲ್ಲಿ ಸುದೀರ್ಘ ಚರ್ಚೆ ನಡೆಸಿದರೆಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 9-8-1973

• **ಗಡಿ ಚಳವಳಿ ಬೇಡ: ಸೌಹಾರ್ದ ಇತ್ಯರ್ಥಕ್ಕೆ ಪ್ರಯತ್ನ– ಪಂತ್**

ನವದೆಹಲಿ, ಆ. 8– ಗಡಿ ವಿವಾದಗಳ ವಿಷಯದಲ್ಲಿ ಚಳವಳಿಗಳನ್ನು ನಡೆಸದಿರಬೇಕೆಂದು ಮಹಾರಾಷ್ಟ್ರ ಮತ್ತು ಮೈಸೂರು ಜನರನ್ನು ಗೃಹಶಾಖೆ ರಾಜ್ಯ ಸಚಿವ ಕೆ.ಸಿ. ಪಂತ್ ಅವರು ಇಂದು ಕೇಳಿದ್ದಾರೆ.

ಮೈಸೂರಿನ ಹೆಸರನ್ನು ಕರ್ನಾಟಕ ಎಂದು ಬದಲಾಯಿಸುವ ವಿಧೇಯಕದ ಮೇಲೆ ರಾಜ್ಯಸಭೆಯಲ್ಲಿ ಸ್ವಲ್ಪ ಕಾಲ ನಡೆದ ಚರ್ಚೆಗೆ ಪಂತ್ ಅವರು ಉತ್ತರ ಕೊಟ್ಟು, ಸಮಸ್ಯೆಯು ‘ಶಾಂತಿಯುತವಾಗಿ ಮತ್ತು ಪರಸ್ಪರ ಸದಿಚ್ಛೆಗಳಿಂದ’ ಇತ್ಯರ್ಥವಾಗುವಂತಹ ವಾತಾವರಣಕ್ಕೆ ಉತ್ತೇಜನ ಕೊಡುವಂತೆ ಉಭಯ ರಾಜ್ಯಗಳ ನಾಯಕರನ್ನೂ ಕೋರಿದರು. ಮಹಾಜನ್ ಆಯೋಗದ ಶಿಫಾರಸುಗಳ ಬಗೆಗೆ ಎರಡೂ ರಾಜ್ಯಗಳ ನಡುವಣ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಪಂತ್ ಹೇಳಿದರು.

• **ಹೊಸ ವರ್ಷದಿಂದ ನಗರದ ಜನರಿಗೆ ಕಾವೇರಿ ಸಿಹಿನೀರು**

ಬೆಂಗಳೂರು, ಆ. 8– ಹೊಸ ವರ್ಷದ ಕೊಡುಗೆಯಾಗಿ ಬೆಂಗಳೂರು ನಗರದ ನಾಗರಿಕರಿಗೆ ಕಾವೇರಿಯ ಸಿಹಿ ನೀರು ದೊರೆಯಲಿದೆ. ಈ ವರ್ಷದ ಅಂತ್ಯದ ವೇಳೆಗೆ ಕಾವೇರಿ ನದಿ ಯೋಜನೆ ಕಾರ್ಯಗಳು ಕಾಲಕ್ಕೆ ಸರಿಯಾಗಿ ಮುಕ್ತಾಯಗೊಳ್ಳಲಿವೆ.

ಈ ಯೋಜನೆಯ ಅಂದಾಜು ವೆಚ್ಚ 36 ಕೋಟಿ ರೂಪಾಯಿ.

ಸೌಜನ್ಯಾಪರ ಹೋರಾಟ: ಕಾನೂನಿನ ಮಿತಿ ಹಾಗೂ ಸಾಂಸ್ಕೃತಿಕ ಸಾಧ್ಯತೆ

ನ್ಯಾಯ, ಅನ್ಯಾಯ ಮತ್ತು ದೈವ

ಅನುರಣನ

ಎ.ನಾರಾಯಣ

ಜಗತ್ಪ್ರಸಿದ್ಧ ರಷ್ಯನ್ ಕಾದಂಬರಿಕಾರ ಲಿಯೊ ಟಾಲ್ ಸ್ಟಾಯ್ ಅವರ ಕತೆಯೊಂದರಲ್ಲಿ, ಓರ್ವ ವ್ಯಕ್ತಿಗೆ ಆತನಿಗೆ ಸಂಬಂಧವೇ ಇಲ್ಲದ ಕೊಲೆ ಪ್ರಕರಣವೊಂದರಲ್ಲಿ ಶಿಕ್ಷೆಯಾಗುತ್ತದೆ. ಇಪ್ಪತ್ತಾರು ವರ್ಷಗಳ ನಂತರ ಆತ ನಿರಪರಾಧಿ ಎಂಬುದು ಸರ್ಕಾರಕ್ಕೆ ತಿಳಿಯುತ್ತದೆ. ಆತನ ಬಿಡುಗಡೆಗೆಂದು ದಿನ ನಿಗದಿಯಾಗುತ್ತದೆ. ಆದರೆ ಆ ದಿನದಂದೇ ಮುಂಜಾನೆ ಆತ ಕುಸಿದು ಸಾಯುತ್ತಾನೆ.

ಈ ಕತೆಗಿಂತಲೂ ಕುತೂಹಲಕಾರಿಯಾಗಿರುವುದು ಅದರ ಶೀರ್ಷಿಕೆ. ಅದು ಹೀಗಿದೆ: ‘ಗಾಡ್ ಸೀಸ್ ದ ಟ್ರೂತ್ ಬಟ್ ವೇಟ್ಸ್’. ಅದರ ಅರ್ಥ ‘ದೈವ ಕಾದೂ ಕಾದೂ ಕೊನೆಗೆ ನ್ಯಾಯ ನೀಡುತ್ತದೆ’ ಅಂತ.

ಟಾಲ್‌ಸ್ಟಾಯ್ ಈ ಶೀರ್ಷಿಕೆಯಲ್ಲಿ ದೈವ ಕಾರುಣ್ಯದ ಬಗ್ಗೆ ಸಮಾಧಾನ ಪಟ್ಟುಕೊಳ್ಳುತ್ತಿರುವುದೋ ಅಥವಾ ದೈವವನ್ನು ಅಣಕಿಸುತ್ತಿರುವುದೋ ತಿಳಿಯುವುದಿಲ್ಲ. ಮನುಷ್ಯನ ಯೋಚನಾ ಲಹರಿಯೇ ವಿಚಿತ್ರವಾಗಿದೆ. ಕೊಲೆಗೀಡಾಗುವವನ ನೆರವಿಗೆ ಬರುವುದಿಲ್ಲ ದೈವ. ನಿರಪರಾಧಿಗೆ ಶಿಕ್ಷೆ ಆಗುವಾಗ ನೆರವಿಗೆ ಬರುವುದಿಲ್ಲ ದೈವ. ಆದರೂ, ಎಂದೋ ಒಂದು ದಿನ ನಿಜವಾದ ಅಪರಾಧಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳುವ ಮೂಲಕ ದೈವ ನ್ಯಾಯ ನೀಡುತ್ತದೆ ಅಂತ ಮನುಷ್ಯರು ಭಾವಿಸುತ್ತಾರೆ. ಇಲ್ಲಿ ಯಾವ ನ್ಯಾಯ ಯಾರಿಗೆ ದೊರೆತದ್ದು ಅಂತ ಅರ್ಥ ಆಗುವುದಿಲ್ಲ. ಮನುಷ್ಯರು ದೈವದ ವಿಚಾರದಲ್ಲಿ ಬಹಳ ಧಾರಾಳಿಗಳು ಅನ್ನಿಸುತ್ತದೆ. ಅಸಹಾಯಕ ಮನುಷ್ಯನ ಮನಸ್ಸೇ ಹಾಗೆ ಅಂತ ಮನಃಶಾಸ್ತ್ರ ಹೇಳಬಹುದು.

ಮೇಲಿನ ಕತೆ ನೆನಪಾಗಲು ಕಾರಣ, ಉಜಿರೆಯ ಸೌಜನ್ಯಾ ಪ್ರಕರಣ. ಹನ್ನೊಂದು ವರ್ಷಗಳ ಹಿಂದೆ ನಡೆದ ಹದಿನೇಳರ ಹರೆಯದ ಕಾಲೇಜು ವಿದ್ಯಾರ್ಥಿನಿ ಸೌಜನ್ಯಾಳ ಅಪಹರಣ, ಅತ್ಯಾಚಾರ ಮತ್ತು ಹತ್ಯೆಗೆ ಸಂಬಂಧಿಸಿದಂತೆ ನ್ಯಾಯ ಸಿಗಬೇಕು ಎಂದು ಕರ್ನಾಟಕದಾದ್ಯಂತ ಹೋರಾಟ ನಡೆಯುತ್ತಿದೆ. ಸೌಜನ್ಯಾ ಪ್ರಕರಣದಲ್ಲಿ ಎರಡು ಕುಟುಂಬಗಳ ಕಣ್ಣೀರ ಕತೆ ಇದೆ. ಒಂದೆಡೆ, ಮನೆಮಗಳ ಭೀಕರ ಹತ್ಯೆಯನ್ನು ನೆನೆನೆನೆದು ಮರುಗುವ ಸೌಜನ್ಯಾ ಕುಟುಂಬದ ದುರಂತ ಕತೆ. ಅಪರಾಧಿಗಳು ಕಾನೂನಿನ ಕಣ್ಣಿಂದ ಯಶಸ್ವಿಯಾಗಿ ತಪ್ಪಿಸಿಕೊಂಡಿರುವುದು ಈ ಕತೆಯ ದುರಂತವನ್ನು ಇಮ್ಮಡಿಗೊಳಿಸಿದೆ. ಇನ್ನೊಂದೆಡೆ, ಪ್ರಕರಣದಲ್ಲಿ ಅಪರಾಧಿ ಎಂದು ಸುಳ್ಳು ಆರೋಪ ಹೊತ್ತು ಪೊಲೀಸರ ಹಿಂಸೆಯಿಂದ ಅಕ್ಷರಶಃ ಅರೆಜೀವವಾಗಿ ಹೋಗಿರುವ ಸಂತೋಷ್ ರಾವ್ ಎಂಬ ಅಮಾಯಕ ಮತ್ತು ಅವರ ಕುಟುಂಬದ ದಾರುಣ ಕತೆ.

ಸೌಜನ್ಯಾಳನ್ನು ಹೊಸಕಿಹಾಕಿದ್ದು ಯಾರು ಎನ್ನುವುದು ನಿಗೂಢವಾಗಿಯೇ ಉಳಿದಿದೆ. ಒಪ್ಪಿಕೊಳ್ಳೋಣ. ಆದರೆ ಸಂತೋಷ್ ಅವರಿಗಾದ ನರಕಯಾತನೆಗೆ ಸಿಬಿಐ ಸೇರಿದಂತೆ ಪೊಲೀಸ್ ವ್ಯವಸ್ಥೆಯೇ ನೇರವಾಗಿ ಹೊಣೆಯಾಗುತ್ತದೆ. ಕೋರ್ಟ್ ತೀರ್ಪು ಓದಿದರೆ, ಸಂತೋಷ್ ಅವರು ಸಾಕ್ಷ್ಯ ಇಲ್ಲದೆ ತಪ್ಪಿಸಿಕೊಂಡದ್ದಲ್ಲ, ಸಂಪೂರ್ಣ ನಿರಪರಾಧಿಯಾಗಿದ್ದಾರೆ ಅಂತಲೇ ಭಾವಿಸಬೇಕಾಗುತ್ತದೆ. ತನಿಖೆ ನಡೆಸಿದ ಅಧಿಕಾರಿಗಳನ್ನೇ ವಿಚಾರಣೆಗೆ ಗುರಿಪಡಿಸಬೇಕು ಎನ್ನುವ ಅರ್ಥದ ವಾಕ್ಯವನ್ನು ನ್ಯಾಯಾಲಯವೇ ತೀರ್ಪಿನಲ್ಲಿ ಹೇಳಿದೆ ಎಂದರೆ ಊಹಿಸಿಕೊಳ್ಳಿ. ಪೊಲೀಸರು ಹೀಗೇಕೆ ನಡೆದುಕೊಂಡದ್ದು?

ಭಾರತದ ಪೊಲೀಸ್ ವ್ಯವಸ್ಥೆಯಲ್ಲಿ ಹೈ ಪ್ರೊಫೈಲ್ ಪ್ರಕರಣಗಳು ಬಂದಾಗ, ಯಾವುದೋ ಬಡ ತಾಯಿ ಮಕ್ಕಳನ್ನು ಹಿಡಿದು ಅಪರಾಧಿಗಳೆಂದು ಕತೆ ಕಟ್ಟುವ ವರದಿಗಳು ಆಗಾಗ ಬರುತ್ತಲೇ ಇರುತ್ತವೆ. ಅದುವೇ ಈ ಪ್ರಕರಣದಲ್ಲೂ ನಡೆಯಿತೇ? ಅಥವಾ ಯಾರನ್ನಾದರೂ ರಕ್ಷಿಸಲೆಂದೇ ಯಾವುದೋ ಒತ್ತಡಕ್ಕೆ ಮಣಿದು ಸಂತೋಷ್ ಅವರನ್ನು ಬಲಿಪಶು ಮಾಡಿದ್ದೇ? ಕೃತ್ಯ ನಡೆದು, ತನಿಖೆ ಮುಗಿದು ಬಹುಕಾಲ ಕಳೆದಿದೆ. ಸಾಕ್ಷ್ಯಗಳು ನಾಶವಾಗಿವೆ ಅಥವಾ ಸಾಕ್ಷ್ಯಗಳನ್ನು ನಾಶಗೊಳಿಸಲಾಗಿದೆ. ಕಾನೂನು ಪರಿಣತರೇ ಹೇಳುವಂತೆ, ಮರುತನಿಖೆಗೆ ಆದೇಶಿಸುವುದು ಸರ್ಕಾರಕ್ಕೆ ಸುಲಭಸಾಧ್ಯವಲ್ಲ. ಸಾಧ್ಯವಾದರೂ ತನಿಖೆ ಗುರಿ ಮುಟ್ಟುವ ಖಾತರಿಯಿಲ್ಲ.

ಕಾನೂನು ಪ್ರಕಾರ ಏನೆಲ್ಲಾ ಸಾಧ್ಯವೋ ಅದೆಲ್ಲಾ ಹೋರಾಟದ ಮೂಲಕವಾದರೂ ಆಗಲಿ. ಅದರ ಜತೆಗೆ ಸೌಜನ್ಯಾಪರ ಹೋರಾಟ ಇನ್ನೊಂದು ರೀತಿಯಲ್ಲಿ ನ್ಯಾಯ ಪಡೆಯುವ ಹೊಸ ಮಾರ್ಗವೊಂದರ ಸೂಚನೆ ನೀಡಿದೆ. ನ್ಯಾಯಕ್ಕಾಗಿ ಹೋರಾಡುತ್ತಿರುವವರು ಹೇಳುತ್ತಿರುವ ಪ್ರಕಾರ, ಸೌಜನ್ಯಾ ಎನ್ನುವುದು ಈಗ ಸಂತ್ರಸ್ತೆಯ ಹೆಸರಾಗಿ ಮಾತ್ರ ಉಳಿದಿಲ್ಲ, ಅದೊಂದು ಶಕ್ತಿಯಾಗಿದೆ. ಸಾಂಸ್ಥಿಕ ನ್ಯಾಯದ ಬಾಗಿಲು ಮುಚ್ಚಿಹೋದ ಕಾಲಕ್ಕೆ ಈ ಶಕ್ತಿಯೇ ವಿಜೃಂಭಿಸುತ್ತದೆ. ಅದು ಕೊಲೆಗಾರರನ್ನು ಜನತಾ ನ್ಯಾಯಾಲಯದ ಎದುರು ತಂದು ನಿಲ್ಲಿಸುತ್ತದೆ ಎಂದು ಹೋರಾಟಗಾರರು ಹೇಳುತ್ತಿದ್ದಾರೆ.

ಈ ಮಾತನ್ನು ಬರೀ ಭಾವಾವೇಶದ ಅಭಿವ್ಯಕ್ತಿ ಅಂತ ಕಡೆಗಣಿಸಬಾರದು. ಬದಲಿಗೆ ತುಳುನಾಡಿನ ಸಾಂಸ್ಕೃತಿಕ ಆವರಣದಲ್ಲಿ ಅದನ್ನು ಪರಿಶೀಲಿಸಬೇಕು. ತುಳುನಾಡಿನಲ್ಲಿ ಭೂತಗಳೆಂಬ ಅಲೌಕಿಕ ಶಕ್ತಿಗಳನ್ನು ಜನ ಆರಾಧಿಸುತ್ತಾರೆ. ಅಲ್ಲಿ ಭೂತಗಳಿಗಿಂತ ಮಿಗಿಲಾದ ಶಕ್ತಿಯಿಲ್ಲ. ಅಂತಹ ‘ಭೂತಶಕ್ತಿ’ಗಳು ಹುಟ್ಟಿಕೊಂಡ ಹಿನ್ನೆಲೆಯನ್ನು ಹುಡುಕಿದರೆ ಸಿಗುವುದು ಸೌಜನ್ಯಾ ಪ್ರಕರಣದಲ್ಲಿ ಕಾಣುವಂತಹದ್ದೇ ರೀತಿಯ ಅನ್ಯಾಯದ ಕತೆಗಳು. ಅಮಾಯಕರನ್ನು ಅಮಾನುಷವಾಗಿ ಹಿಂಸಿಸಿದ ಕತೆಗಳು. ಸಮಾಜದ ಕ್ರೌರ್ಯಗಳಿಗೆ ಬಲಿಯಾದ ಮುಗ್ಧ ಜೀವಿಗಳು ‘ಕಾಯ ಬಿಟ್ಟು ಮಾಯಕ’ದ ರೂಪ ತಳೆದು ತಮಗಾದ ಅನ್ಯಾಯದ ವಿರುದ್ಧ ಹೋರಾಡುವ ಕತೆಗಳು. ಈ ಕತೆಗಳೇ ತುಳುನಾಡಿನ ಪುರಾಣಗಳು.



ಹೋರಾಡುವುದು ಎಂದರೆ ಕೊಲೆಗೆ ಕೊಲೆ, ಕಣ್ಣಿಗೆ ಕಣ್ಣು ಅಲ್ಲ. ‘ಕಾಂತಾರ’ ಸಿನಿಮಾ ಕತೆಯಂತೆ ರಕ್ತ ಕಾರಿಸಿ ಸಾಯಿಸುವುದಲ್ಲ. ಭೂತಗಳ ಕತೆಯಲ್ಲಿ, ಅನ್ಯಾಯಕ್ಕೆ ಒಳಗಾದವರು ‘ಮಾಯಕದ ರೂಪ’ ಪಡೆಯುತ್ತಾರೆ. ಅನ್ಯಾಯ ಎಸಗಿದವರಲ್ಲಿ ಭಯ ಮತ್ತು ಪಾಪಪ್ರಜ್ಞೆ ಹುಟ್ಟಿಸಿ ಅವರೇ ತಮ್ಮನ್ನು ಆರಾಧಿಸುವಂತೆ ಮಾಡುತ್ತಾರೆ. ಹೀಗೆ, ಟಾಲ್‌ಸ್ಟಾಯ್ ಹೇಳುವ ರೀತಿಯ ‘ಕೋಟೆ ಸೂರೆ ಹೋದ ಮೇಲೆ ಊರಿಗೆ ಬೇಲಿ ಹಾಕುವ’ ದೈವೀ ನ್ಯಾಯಕ್ಕೆ ಕಾಯದೆ, ಅನ್ಯಾಯಕ್ಕೆ ಒಳಗಾದವರೇ ಅತಿಮಾನುಷ ಶಕ್ತಿಗಳಾಗಿ ಉದಯಿಸಿ ನ್ಯಾಯ ಪಡೆಯುವ ಪರ್ಯಾಯ ಮಾರ್ಗದ ಪರಂಪರೆಯೊಂದು ತುಳುನಾಡಿನಲ್ಲಿದೆ.

ಅಂತಹ ಒಂದು ಕತೆ ಬಹುಪ್ರಸಿದ್ಧ ಕಲ್ಕುಡ-ಕಲ್ಲುರ್ಟಿ ಭೂತಗಳದ್ದು. ಅದರಲ್ಲಿ ಕಾರ್ಕಳದ ಭೈರವಸೂಡ ಅರಸ, ಬೀರ ಕಲ್ಕುಡ ಎಂಬ ಶಿಲ್ಪಿಯನ್ನು ಕರೆಸಿಕೊಂಡು ಭಾರಿ ಗಾತ್ರದ ಸುಂದರ ಶಿಲ್ಪವೊಂದನ್ನು ಕೆತ್ತಿಸುತ್ತಾನೆ. ಮುಂದೆ ಕಲ್ಕುಡ ಇನ್ನೊಂದು ರಾಜ್ಯಕ್ಕೆ ಹೋಗಿ ಇಂತಹದ್ದೇ ಶಿಲ್ಪ ಕೆತ್ತಿದರೆ ತನ್ನ ಕೀರ್ತಿ ಮಂಕಾದೀತು ಎಂದು ತರ್ಕಿಸಿ, ಕಲ್ಕುಡನ ಎಡಗೈ ಮತ್ತು ಬಲ ಕಾಲು ಕತ್ತರಿಸುತ್ತಾನೆ. ಅಣ್ಣನನ್ನು ಕಾಣಲು ಬಂದ ತಂಗಿ ಕಾಳಮ್ಮಳಿಗೆ ಕಲ್ಕುಡ ತನ್ನ ದಾರುಣಾವಸ್ಥೆಯನ್ನು ವಿವರಿಸುವ ಹಾಡು ಯಕ್ಷಗಾನ ಕವಿ ಅಮೃತ ಸೋಮೇಶ್ವರರ ‘ಅಮರಶಿಲ್ಪಿ ವೀರ ಕಲ್ಕುಡ’ ಪ್ರಸಂಗ ಪದ್ಯದಲ್ಲಿ ಈ ರೀತಿ ಇದೆ:

‘ಪೇಳಲೇನಿದ ತಂಗೀ,
ಕಳವು ಹಾದರ ಕೊಲೇ
ಖೂಳಕೃತ್ಯವ ಗೈದುದಿಲ್ಲಾ
ಮೇಲಾದ ಶಿಲ್ಪವ ಮೆರೆಸಿದೇನದಕಾಗಿ
ನೋವು ಉಣ್ಣುವ ಕಾಲ ಬಂತೂ

(ಮೂಲ ಪದ್ಯ: ತುಳು ಪಾಡ್ದನ ಸಂಪುಟ, ಮಂಗಳೂರು ವಿ.ವಿ., ಪುಟ 143)

ಅನ್ಯಾಯ ಕಂಡ ಕಾಳಮ್ಮ ವ್ಯಗ್ರಳಾಗುತ್ತಾಳೆ. ಅಣ್ಣ-ತಂಗಿ ‘ಮಾದೇವರ ಅಂಗಳದಲ್ಲಿ ಮಾಯಕ’ವಾಗಿ ಕಲ್ಲುರ್ಟಿ- ಕಲ್ಕುಡ ಎಂಬ ಹೆಸರಿನ ಭೂತಗಳಾಗಿ ಉದಯಿಸುತ್ತಾರೆ. ಭೈರವರಸನನ್ನು ಭಯಾನಕವಾಗಿ ಕಾಡುತ್ತಾರೆ, ಆದರೆ ಕೊಲ್ಲುವುದಿಲ್ಲ. ಅರಸ ಭೀತಿಯಿಂದಲೂ ಪಾಪಪ್ರಜ್ಞೆಯಿಂದಲೂ ತೊಳಲಾಡುವಂತೆ ಮಾಡುತ್ತಾರೆ.

ಸೌಜನ್ಯಾ ಪ್ರಕರಣದಲ್ಲಿ ನ್ಯಾಯಕ್ಕಾಗಿ ಹೋರಾಡುವವರು ಆಕೆಯ ದೇಹ ಸಿಕ್ಕ ಜಾಗದಲ್ಲಿ ಆಕೆಯದ್ದೊಂದು ಪ್ರತಿಮೆ ಸ್ಥಾಪಿಸುತ್ತೇವೆ ಎನ್ನುತ್ತಿದ್ದಾರೆ. ಅದು ಅದ್ಭುತ ಯೋಚನೆ. ಕಾನೂನು ಹೋರಾಟ ಏನಾದರೂ ಆಗಲಿ, ಸೌಜನ್ಯಾಳ ಪ್ರತಿಮೆಯೊಂದು ಬಾನೆತ್ತರಕ್ಕೆ ನಿಂತು ಆ ದಾರಿಯಲ್ಲಿ ಬರುವವರಿಗೆಲ್ಲಾ ಘೋರ ಮರಣಕ್ಕೀಡಾದ ಮುಗ್ಧ ಸೌಜನ್ಯಾಳ ಮತ್ತು ಅಮಾನುಷ ಹಿಂಸೆ ಅನುಭವಿಸಿದ ಅಮಾಯಕ ಸಂತೋಷ್ ಅವರ ಕತೆಯನ್ನು ನೆನಪಿಸಿದರೆ, ಅದು ನ್ಯಾಯ ಪಡೆದುಕೊಳ್ಳುವ ಇನ್ನೊಂದು ಮಾರ್ಗವಾಗುತ್ತದೆ.

ಪ್ರತಿಮೆ ಮಾತ್ರವಲ್ಲ, ತುಳುನಾಡ ಭೂತಗಳ ಪರಂಪರೆಯಲ್ಲಿ ಸೌಜನ್ಯಾ ಕೂಡ ನ್ಯಾಯ, ನೀತಿ ಮೂರ್ತಿವೆತ್ತ ಹೊಸದೊಂದು ಕಾರಣೀಕ ಶಕ್ತಿಯಾಗಿ ಜನಮನದಲ್ಲಿ ಸ್ಥಾಪನೆಗೊಂಡು, ಆ ಶಕ್ತಿಯೇ ಮುಂದೆ ಅತ್ಯಾಚಾರ-ಕೊಲೆಗೈಯ್ಯುವವರ ಎದೆಯಲ್ಲೊಂದು ಭಯ, ಹಿಂದೆ ಅಂತಹ ಕೃತ್ಯದಲ್ಲಿ ಭಾಗಿಯಾದವರ ಮನಸ್ಸಲ್ಲೊಂದು ಪಾಪಪ್ರಜ್ಞೆ ಹುಟ್ಟುವಂತೆ ಮಾಡಿದರೂ ಸಾಕು. ಇನ್ನೇನು ಮಾಡುವುದು ಬೇಲಿಗಳೆಲ್ಲಾ ಎದ್ದು ಹೊಲ ಮೇಯುವ ಕಾಲದಲ್ಲಿ.

ಚುರುಮುರಿ

ಟೊಮೆಟೊ ಮಹಿಮೆ

• ಮಣ್ಣೆರಾಜು

‘ಊರಿನ ಉತ್ಸವದಲ್ಲಿ ಟೊಮೆಟೊವನ್ನೂ ಮೆರವಣಿಗೆ ಮಾಡೋಣ ಕಣ್ರಲಾ...’ ನಂಜಮ್ಮನ ಹೋಟೆಲ್‌ಗೆ ಬಂದ ತಿಮ್ಮಜ್ಜ ಹೇಳಿದ.

‘ಹೌದಜ್ಜಾ, ನಮ್ಮ ಬಾಳು ಬಂಗಾರ ಮಾಡಿದ ಟೊಮೆಟೊಗೆ ದೇವಸ್ಥಾನ ಕಟ್ಟಿಸಿ ಪೂಜೆನೂ ಮಾಡಬೇಕು’ ಎಂದ ಶಿವಲಿಂಗ.

‘ಬಂಗಾರದ ಬೆಲೆಗೆ ಟೊಮೆಟೊ ಮಾರಿ ಲಾಭ ಮಾಡಿಕೊಂಡ ಪುಟ್ಟಾಮಿ, ಪಟ್ಟಣದಲ್ಲಿ ಬಂಗಾರದ ಅಂಗಡಿ ತೆರೆದಿದ್ದಾನೆ. ಮುಂದಿನ ತಿಂಗಳು ಅವನ ಮದುವೆ...’ ಅಂದ ಸೂರಿ.

‘ಟೊಮೆಟೊ ಕೃಪೆಯಿಂದ ರೈತರ ಮಕ್ಕಳಿಗೆ ಕಂಕಣಭಾಗ್ಯ ಕೂಡಿಬರುತ್ತಿದೆ...’ ಎನ್ನುತ್ತಾ ನಂಜಮ್ಮ ಟೀ ತಂದಿಟ್ಟಳು.

‘ರೈತರ ಮಕ್ಕಳು ಮದ್ವೆಯಾಗಲು ಹೆಣ್ಣು ಸಿಗ್ತಿಲ್ಲ, ಹೆಣ್ಣು ಕೊಡಿಸಿ, ಮದ್ವೆ ಮಾಡಿಸಿ ಅಂತ ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ವಿ, ಸರ್ಕಾರ ಮಾಡಲಾಗದ ಪವಾಡವನ್ನು ಟೊಮೆಟೊ ಮಾಡಿಬಿಟ್ಟದೆ!’ ಟೊಮೆಟೊ ಮಹಿಮೆ ಹೇಳಿದ ತಿಮ್ಮಜ್ಜ.

‘ನೀನು ಮದ್ವೆಯಾಗೋ ಹುಡುಗಿಗೆ ಏನು ಒಡವೆ ಮಾಡುಸ್ತೀಯೋ ಗಿರಿ?’ ನಂಜಮ್ಮ ಕೇಳಿದಳು.

‘ಟೊಮೆಟೊ ಡಿಸೈನಿನ ಸರ. ಟೊಮೆಟೊ ಗಾತ್ರದ ವಾಲೆ, ಜುಮುಕಿ ಮಾಡುಸ್ತೀನಿ’ ಅಂದ ಗಿರಿ.

‘ಟೊಮೆಟೊ ಡಿಸೈನ್ ರೇಷ್ಮೆ ಸೀರೆ ಮಾರುಕಟ್ಟೆಗೆ ಬಂದಿದೆಯಂತೆ, ಅಂಥಾ ಸೀರೇನೂ ಕೊಡಿಸು’ ಅಂದಳು ನಂಜಮ್ಮ.

‘ಮನಮೆಚ್ಚಿರುವ ಸಿಟಿ ಹುಡುಗಿಯನ್ನು ಮದ್ವೆ ಆಗ್ತಿದ್ದೀನಿ. ಅವಳಿಗೋಸ್ಕರ ಹಳೆ ಮನೆ ರಿಪೇರಿ ಮಾಡ್ಸಿದ್ದೀನಿ, ಹೊಸ ಕಾರು ತಂದಿದ್ದೀನಿ...’ ಸೀನ ಸಡಗರಪಟ್ಟ.

‘ಟೊಮೆಟೊ ನಮ್ಮ ಭಾಗ್ಯದ ಬಾಗಿಲು ತೆರೆದಿದೆ. ಟೊಮೆಟೊ ಬೆಳೆಗಾರ ಅಂತ ವಿಸಿಟಿಂಗ್ ಕಾರ್ಡ್ ಮಾಡಿಸಿಕೊಂಡಿದ್ದೀನಿ. ಎಲ್ಲಾ ಕಡೆಗೆ ನನಗೆ ಬೆಲೆ, ಗೌರವ ಜಾಸ್ತಿಯಾಗಿದೆ’ ಅಂದ ಶಿವಲಿಂಗ.

‘ಪರಿಸ್ಥಿತಿ ಹಿಂಗೇ ಇರೊಲ್ಲಾ ಕಣ್ರೋ... ಟೊಮೆಟೊ ಬೆಲೆ ಕುಸಿಯದಂತೆ ಬೆಂಬಲ ಬೆಲೆ ನಿಗದಿ ಮಾಡಲು ಸರ್ಕಾರಕ್ಕೆ ಒತ್ತಾಯ ಮಾಡೋಣ...’ ಎಂದು ಹೇಳಿ ತಿಮ್ಮಜ್ಜ ಹೊರಟ.

ಸಂಗತ

ಉತ್ತಮ ಶಿಕ್ಷಕ: ಮಾನದಂಡವೇನು?

ಪ್ರಶಸ್ತಿಗಾಗಿ ಶಿಕ್ಷಕರನ್ನು ಆಯ್ಕೆ ಮಾಡುವ ವಿಧಾನ ಬದಲಾಗಬೇಕಿದೆ

• ಸದಾಶಿವ್ ಸೊರಟೂರು

ಮೊನ್ನೆ ಹೀಗೊಂದು ಸಂದೇಶ ಬಂತು. ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ನಿರೀಕ್ಷಿತ ಮಟ್ಟದಲ್ಲಿ ಅರ್ಜಿಗಳು ಬಂದಿಲ್ಲ ಮತ್ತು ಅರ್ಹ ಶಿಕ್ಷಕರಿಗೆ ಅರ್ಜಿ ಸಲ್ಲಿಸಲು ಪ್ರೋತ್ಸಾಹಿಸಿ ಎಂದು ಕೋರಲಾಗಿತ್ತು. ಅಲ್ಲದೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಮತ್ತೆ ಮತ್ತೆ ಮುಂದೂಡಲಾಯಿತು. ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಮನವಿ ಕೋರಿ ಬರುವ ಅರ್ಜಿಗಳ ಸಂಖ್ಯೆಯೂ ಹೆಚ್ಚೇನೂ ಸಮಾಧಾನಕರವಾಗಿಲ್ಲ ಎಂದು ಆತ್ಮೀಯರೊಬ್ಬರು ಹೇಳಿದರು.

ಒಂದು ಜಿಲ್ಲೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಶಿಕ್ಷಕರಿರುತ್ತಾರೆ. ಆದರೆ ಬರುವ ಅರ್ಜಿಗಳು ಮಾತ್ರ ಹತ್ತೊ, ಹದಿನೈದೊ. ಇಡೀ ರಾಜ್ಯದಲ್ಲಿ ಲಕ್ಷಗಟ್ಟಲೆ ಶಿಕ್ಷಕರಿದ್ದಾರೆ. ಆದರೆ ಪ್ರಶಸ್ತಿ ಕೋರಿ ಬರುವ ಅರ್ಜಿಗಳ ಸಂಖ್ಯೆ ತೀರಾ ಸಮಾಧಾನಕರವಾಗಿಲ್ಲ ಅಂದರೆ ಏನರ್ಥ?

ಅರ್ಹರಾದ ಉತ್ತಮ ಶಿಕ್ಷಕರು ಇಲ್ಲ ಅಂತಲೊ? ಉತ್ತಮ ಶಿಕ್ಷಕರು ಅರ್ಜಿ ಸಲ್ಲಿಸಿ ಪ್ರಶಸ್ತಿ ಪಡೆಯಲು ಮನಸ್ಸು ಮಾಡುತ್ತಿಲ್ಲ ಅಂತಲೊ? ಈ ವಿಚಾರ ಹೆಚ್ಚಿನ ಸಂಖ್ಯೆಯ ಶಿಕ್ಷಕರಿಗೆ ತಲುಪುತ್ತಿಲ್ಲ ಎಂತಲೊ? ಶಿಕ್ಷಕರಿಗೆ ಪ್ರಶಸ್ತಿ ಪಡೆಯಲು ಇಷ್ಟವಿಲ್ಲವೊ? ಇದರಲ್ಲಿ ಯಾವುದು ಸತ್ಯ, ಯಾವುದು ಸುಳ್ಳು? ತುಂಬಾ ಗಂಭೀರವಾಗಿ ನಾವು ಯೋಚಿಸಬೇಕಿದೆ. ಇದು ಬರೀ ಈ ವರ್ಷದ ಕತೆಯಲ್ಲ, ಪ್ರತಿವರ್ಷವೂ ಬಹುತೇಕ ಇದೇ ವ್ಯಥೆ.

ನನ್ನ ಮಿತ್ರರೊಬ್ಬರಿಗೆ ಅವರ ಗೆಳೆಯರೊಬ್ಬರು ‘ನೀವು ಉತ್ತಮ ಶಿಕ್ಷಕ ಪ್ರಶಸ್ತಿ’ಗೆ ಅರ್ಜಿ ಸಲ್ಲಿಸಿ ಎಂದು ಹೇಳಿದ್ದಕ್ಕೆ ಆ ಮಿತ್ರ ಮೈಮೇಲೆ ಹಲ್ಲಿ ಬಿದ್ದವರಂತೆ ಬೆಚ್ಚಿದರು. ‘ಪ್ರಶಸ್ತಿ ಪಡೆದ ಶಿಕ್ಷಕರನ್ನು ಒಂಥರಾ ಅನುಮಾನದ ದೃಷ್ಟಿಯಿಂದ ನೋಡ್ತಾರೆ ಸರ್. ಲಾಬಿ ಮಾಡಿ ಪ್ರಶಸ್ತಿ ಪಡೆದಿರಬೇಕು ಅಂದುಕೊಳ್ತಾರೆ. ನಾನೊಬ್ಬ ಒಳ್ಳೆ ಮೇಷ್ಟ್ರು ಅನ್ನೋದು ಮಕ್ಕಳ ಮನಸ್ಸಿಗೆ ತಿಳಿದರೆ ಸಾಕು, ಅದೇ ಸಾರ್ಥಕತೆ. ಬಹುಶಃ ಪ್ರಶಸ್ತಿ ಹುಚ್ಚು ನನ್ನ ತಲೆಗೆ ಏರಿದರೆ, ನಾನು ಮಕ್ಕಳ ಮುಖದ ಮೇಲಿನ ನಿಷ್ಕಲ್ಮಷ ಸಂತೋಷ ನೋಡುವುದನ್ನು ಕಳೆದುಕೊಳ್ತೀನಿ. ದಾಖಲೆ ನಿರ್ವಹಣೆ ಕಡೆ ಗಮನ ಹೋಗುತ್ತೆ. ಪ್ರಶಸ್ತಿಗೆ ಸಿದ್ಧವಾಗುವುದೇ ಬೋಧನೆಯಂತಾಗಿಬಿಡುತ್ತದೆ’ ಎಂದರು.

ಇಲ್ಲಿ ನಾವು ಪ್ರಶಸ್ತಿಯನ್ನು ಅನುಮಾನದಿಂದ ನೋಡಬೇಕೊ, ಅದಕ್ಕೆ ಅರ್ಜಿ ಸಲ್ಲಿಸದ ಶಿಕ್ಷಕರನ್ನು ಅನುಮಾನದಿಂದ ನೋಡಬೇಕೊ ಅಥವಾ ಈ ಇಬ್ಬರನ್ನೂ ಬಿಟ್ಟು, ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿದವರನ್ನು ಗುಮಾನಿಯಿಂದ ನೋಡಬೇಕೊ ಗೊತ್ತಾಗುವುದಿಲ್ಲ.

ಕಾದಂಬರಿಕಾರ ಅರ್ನೆಸ್ಟ್ ಹೆಮಿಂಗ್ವೆ ಅವರಿಗೆ ನೊಬೆಲ್ ಪ್ರಶಸ್ತಿ ಬಂದಾಗ ಅವರು ಅದನ್ನು ಸ್ವೀಕರಿಸಲು ಹೋಗಲಿಲ್ಲ. ಆಫ್ರಿಕಾದ ದಟ್ಟ ಅರಣ್ಯವನ್ನು, ಅಲ್ಲಿ ಸಿಗುವ ಏಕಾಂತವನ್ನು ತೊರೆದು ಹೋಗುವುದು ತಮಗೆ ಇಷ್ಟವಿಲ್ಲ ಎಂದು ಉಳಿದರು. ನೊಬೆಲ್ ಸಮಿತಿಯವರೇ ಹುಡುಕಿಕೊಂಡು ಹೋಗಿ ಪ್ರಶಸ್ತಿ ನೀಡಿ ಹೋದರು. ಚಿಲಿ ಕವಿ ಪಾಬ್ಲೊ ನೆರೂಡ ಅವರು ನೊಬೆಲ್ ಪ್ರಶಸ್ತಿ ಸ್ವೀಕಾರ ಮಾಡುವಾಗ ಹೇಳಿದ ಮಾತು ಎಷ್ಟೊಂದು ಅರ್ಥಪೂರ್ಣವಾಗಿದೆ. ‘ನಮ್ಮ ಮನೆಯಲ್ಲಿ ದಿನನಿತ್ಯದ ಬ್ರೆಡ್ ಸಿದ್ಧಗೊಳಿಸುವವ ತುಂಬಾ ಒಳ್ಳೆಯ ಕವಿಯಾಗಿದ್ದಾನೆ. ನೆರೆಮನೆಯಲ್ಲಿ ಹಿಟ್ಟು ಕಲಸುವವ ಕೂಡ ಉತ್ತಮ ಕವಿ. ಆದರೆ ನೊಬೆಲ್ ನನಗೆ ಬಂದುಬಿಟ್ಟಿದೆ’ ಎಂದಿದ್ದರು. ಪ್ರಶಸ್ತಿಯ ಹುಚ್ಚು ತಲೆಗೇರಬಾರದು ಎಂಬುದನ್ನು ಈ ಉದಾಹರಣೆಗಳು ನಿರೂಪಿಸುತ್ತವೆ.

ಒಂದು ಪ್ರಶಸ್ತಿಗೆ ನಿಜಕ್ಕೂ ಗೌರವ ಬರುವುದು ಅದನ್ನು ಯಾರಿಗೆ ಕೊಟ್ಟಿದ್ದೇವೆ ಅನ್ನುವುದರ ಮೇಲೆ. ವ್ಯಕ್ತಿಗಳಿಂದಲೇ ಪ್ರಶಸ್ತಿಯ ಗೌರವ ಹಾಳಾದರೆ ಅದಕ್ಕಿಂತ ದುರ್ದೈವ ಯಾವುದಿದೆ? ಪೂರ್ಣಚಂದ್ರ ತೇಜಸ್ವಿಯವರಿಗೆ ‘ಪಂಪ’ ಪ್ರಶಸ್ತಿ ಬಂದಾಗ ಅವರು ಹೇಳಿದ ಮಾತುಗಳನ್ನು ನೋಡಿ ಎಷ್ಟು ಮಾರ್ಮಿಕವಾಗಿವೆ. ‘ನಮ್ಮ ತಂದೆಯವರಿಗಾಗ್ಲಿ, ಶಿವರಾಮ ಕಾರಂತರಿಗಾಗ್ಲಿ ಪ್ರಶಸ್ತಿ ಬಂದಾಗ ಅದರಿಂದ ಪ್ರಶಸ್ತಿಗೇ ಮರ್ಯಾದೆ. ಯಾಕಂದ್ರೆ ಅಷ್ಟು ದೊಡ್ಡ ವ್ಯಕ್ತಿಗಳಿಗೆ ಮರ್ಯಾದೆ ಕೊಟ್ಟಾಗ ಮರ್ಯಾದೆ ಕೊಟ್ಟವರಿಗೇ ಮರ್ಯಾದೆ ಬರುತ್ತೆ’. ನಿಜಕ್ಕೂ ಶಿಕ್ಷಕರ ಪ್ರಶಸ್ತಿಗೊಂದು ಗೌರವ ದಕ್ಕಬೇಕು. ಪ್ರಶಸ್ತಿಗೆ ನಿಗದಿ ಮಾಡಿದ ಮಾನದಂಡಗಳನ್ನೂ ಮೀರಿದ ಶಿಕ್ಷಕರಿದ್ದಾರೆ. ಅಂಥವರಿಗೆ ದಕ್ಕಬೇಕು. ಅದಕ್ಕಾಗಿಯಾದರೂ ಆಯ್ಕೆ ಕ್ರಮ ಬದಲಾಗಬೇಕು.

‘ನಾನೊಬ್ಬ ಒಳ್ಳೆಯ ಮೇಷ್ಟ್ರು, ನನಗೊಂದು ಪ್ರಶಸ್ತಿ ಕೊಡಿ’ ಎಂದು ಅರ್ಜಿ ಬರೆದುಕೊಡುವುದು ಹೇಗೆ? ಇಂತಹ ಮುಜುಗರದ ಕಾರಣದಿಂದಲೇ ಎಷ್ಟೋ ಅರ್ಹ ಶಿಕ್ಷಕರು ಅರ್ಜಿ ಸಲ್ಲಿಸಲು ಮುಂದಾಗುವುದಿಲ್ಲ. ಆತ ಬೋಧಿಸುವುದಕ್ಕೆ ಸಿದ್ಧವಾಗುವ ಸಮಯದಲ್ಲಿ ದಾಖಲೆಗಳನ್ನು ಸಿದ್ಧ ಮಾಡಿಕೊಳ್ಳುತ್ತಾ ಇರಬೇಕೆ? ದಾಖಲೆ ಇಲ್ಲದ ಒಬ್ಬ ಶಿಕ್ಷಕ ಉತ್ತಮ ಶಿಕ್ಷಕ ಆಗಲಾರನೇ? ಅದ್ಭುತ ತಂತ್ರಜ್ಞಾನದ ಈ ಕಾಲದಲ್ಲಿ ಎಂತಹ ದಾಖಲೆಗಳನ್ನು ಬೇಕಾದರೂ ಒಂದು ದಿನದಲ್ಲಿ ಸಿದ್ಧಗೊಳಿಸಬಹುದು. ಇದರ ಬಗ್ಗೆ ಯೋಚಿಸಬೇಕಿದೆ. ಅರ್ಹರು ಅರ್ಜಿ ಸಲ್ಲಿಸದೇ ಇದ್ದಾಗ ಅದು ಅನರ್ಹರ ಪಾಲಾಗುವುದು ಅನಿವಾರ್ಯ.

ಪ್ರಶಸ್ತಿಗಾಗಿ ಶಿಕ್ಷಕರನ್ನು ಆಯ್ಕೆ ಮಾಡುವ ವಿಧಾನ ಬದಲಾಗಬೇಕಿದೆ. ಬರೀ ದಾಖಲೆ ನೋಡಿ ತೀರ್ಮಾನಿಸುವ ಪರಿ ನಿಲ್ಲಬೇಕು. ಲಾಬಿಗಳು ನಿಲ್ಲಬೇಕು. ಒಬ್ಬ ಶಿಕ್ಷಕ ಉತ್ತಮ ಹೌದೋ ಅಲ್ಲವೋ ಅನ್ನುವುದನ್ನು ಅವನ ದಾಖಲೆಗಳು ಹೇಳಬಾರದು. ಮಕ್ಕಳು ಹೇಳಬೇಕು. ಅವರೇ ನಿಜವಾದ ತೀರ್ಪುಗಾರರು. ಪೋಷಕರು ಹೇಳಬೇಕು. ಸಮುದಾಯ ನಿರ್ಧರಿಸಬೇಕು. ಇಲಾಖೆಯ ಅಧಿಕಾರಿಗಳು ಅವಲೋಕಿಸಬೇಕು ಮತ್ತು ಅವನ ಸಹಪಾಠಿ ಶಿಕ್ಷಕರು ಅದನ್ನು ಮೆಚ್ಚಬೇಕು. ಅರ್ಹ ಸೇವೆ ಯಾವತ್ತೂ ಗೌರವಿಸಲ್ಪಡುತ್ತದೆ.

ಹಾಗೆಂದು ಪ್ರಶಸ್ತಿಗಳೆಲ್ಲಾ ಅನರ್ಹರ ಪಾಲಾಗುತ್ತವೆ ಎನ್ನಲಾಗದು. ಅವರಲ್ಲಿ ಅರ್ಹರೂ ಇರುತ್ತಾರೆ. ಆದರೆ ಸಮಾಜವು ಅನರ್ಹ ವ್ಯಕ್ತಿ ಪಡೆದ ಪ್ರಶಸ್ತಿಯನ್ನು ನೋಡಿ ಅರ್ಹನನ್ನೂ ಅನುಮಾನದಿಂದಲೇ ನೋಡುತ್ತದೆ ಅಲ್ಲವೇ? ಅದಾಗಬಾರದು ಎಂಬುದಷ್ಟೇ ಇಲ್ಲಿ ಕಾಳಜಿಯ ಸಂಗತಿ.

ವಾಚಕರ ವಾಣಿ

ಸಮ್ಮೇಳನದ ಅಧ್ಯಕ್ಷತೆ: ಮಹಿಳೆಗಿರಲಿ ಆದ್ಯತೆ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಫೆಬ್ರುವರಿಯಲ್ಲಿ ಮಂಡ್ಯದಲ್ಲಿ ನಡೆಯಲಿದ್ದು, ಲೇಖಕಿಯೊಬ್ಬರು ಸಮ್ಮೇಳನದ ಅಧ್ಯಕ್ಷರಾಗಲಿ ಎಂಬ ಆಗ್ರಹ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ವ್ಯಕ್ತವಾಗಿದೆ. ಇದು ಸ್ವಾಗತಾರ್ಹ. ಈ ಆಗ್ರಹ ಕಾರ್ಯರೂಪಕ್ಕೆ ಬರಲಿ.

ಶಿವಕುಮಾರ ಬಂಡೋಲಿ, ಹುಣಸಗಿ

ಸಿಗುವುದೇ ದೆಹಲಿಗೆ ಪರಿಹಾರ?

‘ದೆಹಲಿ ರಾಷ್ಟ್ರ ರಾಜಧಾನಿ ಪ್ರದೇಶ (ತಿದ್ದುಪಡಿ) ಮಸೂದೆ’ಯನ್ನು ರಾಜಸಭೆಯಲ್ಲಿ ಮಂಡಿಸಿದ ಗೃಹ ಸಚಿವ ಅಮಿತ್ ಶಾ, ಭ್ರಷ್ಟಾಚಾರರಹಿತ, ಪರಿಣಾಮಕಾರಿ ಆಡಳಿತ ನೀಡುವುದು ನಮ್ಮ ಉದ್ದೇಶ ಎಂದಿದ್ದಾರೆ. ರಾಜ್ಯಸಭೆಯಲ್ಲೂ ಅದು ಪಾಸ್ ಆಗಿದೆ. ಸುಪ್ರೀಂ ಕೋರ್ಟ್ ವಕೀಲರೊಬ್ಬರು ಅದನ್ನು ವಿರೋಧಿಸಿ ಮೂಲ ಸಾಂವಿಧಾನಿಕ ಆಶಯಗಳನ್ನು ವಿವರಿಸಿದರು, ನಿವೃತ್ತ ನ್ಯಾಯಮೂರ್ತಿಯೊಬ್ಬರು ಸೀಮಿತ ಪರಿಧಿಯಲ್ಲಿ ವಿಶ್ಲೇಷಿಸಿ ಬೆಂಬಲಿಸಿದರು. ದೆಹಲಿಯಲ್ಲಿ ಈಗಿರುವ ಎಎಪಿ ನೇತೃತ್ವದ ಸರ್ಕಾರ ಕೆಲವು ಅಕ್ರಮಗಳನ್ನು ಎಸಗಿದೆ, ಹಿಂದೆ ಇದ್ದ ಬಿಜೆಪಿ, ಕಾಂಗ್ರೆಸ್ ನೇತೃತ್ವದ ಸರ್ಕಾರಗಳೂ ಭ್ರಷ್ಟಾಚಾರರಹಿತ ಆಗಿರಲಿಲ್ಲ. ಲೆಫ್ಟಿನೆಂಟ್ ಗವರ್ನರ್ ಆಡಳಿತಾವಧಿಗಳಲ್ಲೂ ತಪ್ಪುಗಳಾಗಿವೆ. ಬಿಜೆಡಿ ಪಕ್ಷ ಇದನ್ನು ಬೆಂಬಲಿಸಲು ಒಡಿಶಾದಲ್ಲಿ ಕಾಂಗ್ರೆಸ್ ಅದಕ್ಕೆ ಸ್ಪರ್ಧಿಯಾಗಿರುವುದು ಕಾರಣವಿರಬಹುದು. ವೈಎಸ್‌ಆರ್ ಕಾಂಗ್ರೆಸ್‌ಗೆ ಇದರ ಜತೆಗೆ, ಬಿಜೆಪಿಗೆ ಹತ್ತಿರವಾಗಿರುವ ಅನಿವಾರ್ಯವೂ ಇದೆ. ರಾಜ್ಯಸಭೆಯಲ್ಲಿನ ಮತ ವಿಭಜನೆ ‘ಇಂಡಿಯಾ’ಗೆ ತೃಪ್ತಿ ತಂದಿದೆ. ಬಿಆರ್‌ಎಸ್ ತನ್ನ ನಿಲುವನ್ನು ಮುಂದುವರಿಸುತ್ತದೆಯೇ ಕಾದು ನೋಡಬೇಕು.

ಒಟ್ಟಾರೆ ಈ ವಿಷಯದಲ್ಲಿ ಫೆಡರಲಿಸಂ ಪರ- ವಿರುದ್ಧ ಎಂಬುದಕ್ಕಿಂತ ಮುಂದಿನ ರಾಜಕೀಯ ಲೆಕ್ಕಾಚಾರದ ಕೈ ಮೇಲಾಗಿದೆ. ದೆಹಲಿಯಲ್ಲಿ ದೇಶದ ರಾಜಧಾನಿಗೆ ಸಂಬಂಧಿಸಿದ ಪ್ರದೇಶಗಳನ್ನು ಪ್ರತ್ಯೇಕಿಸಿ, ವಿಶೇಷ ಆಡಳಿತ ವ್ಯವಸ್ಥೆ ರೂಪಿಸುವುದು ಅಸಾಧ್ಯಕ್ಕೆ ಹತ್ತಿರ. ಶೀಲಾ ದೀಕ್ಷಿತ್ ಅವರು ಇಂದಿರಾ ಗಾಂಧಿ ಅವರ ಕುಟುಂಬಕ್ಕೆ ನಿಕಟರಾಗಿದ್ದರಿಂದ ಅವರ ಮಾತು ನಡೆಯುತ್ತಿತ್ತು. ಬಿಜೆಪಿಯ ದೆಹಲಿ ಮುಖಂಡರಲ್ಲಿ ಆಜ್ಞಾನುವರ್ತಿಗಳೇ ಹೆಚ್ಚು. ದೆಹಲಿ ಪೂರ್ಣ ದರ್ಜೆ ರಾಜ್ಯ ಆಗುವುದು ಆ ಎರಡೂ ಪಕ್ಷಗಳಿಗೆ ಬೇಕಿಲ್ಲ. ಅರವಿಂದ ಕೇಜ್ರಿವಾಲ್ ಅವರು ಹೆಸರು ಕೆಡಿಸಿಕೊಂಡಿದ್ದಾರೆ. ಸದ್ಯದ ಕಾನೂನು ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಏನು ಮಾಡುತ್ತದೆ ನೋಡಬೇಕಿದೆ. ಕಲುಷಿತ ಗಾಳಿ, ಮಳೆ ಉಪದ್ರವ, ಅಕ್ರಮ ಕಟ್ಟಡಗಳು, ಸಂಚಾರ ದಟ್ಟಣೆ ಹೀಗೆ ಹಲವು ಸಮಸ್ಯೆಗಳಿರುವ ದೆಹಲಿಗೆ ಪರಿಹಾರ ‘ಬಹುತ್ ದೂರ್’.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ದಂಡದ ಹಣ: ಸಾಮಾನ್ಯರಿಗೂ ಸಿಗಲಿ ನ್ಯಾಯ

ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆ ಜಾರಿಗೆ ಆಗ್ರಹಿಸಿ ನಡೆಸಲಾದ ಪಾದಯಾತ್ರೆ ವೇಳೆ ಕೋವಿಡ್ ನಿಯಮವನ್ನು ಉಲ್ಲಂಘಿಸಿದ್ದ ಈಗಿನ ಕೃಷಿ ಸಚಿವ ಚಲುವರಾಯಸ್ವಾಮಿ ಅವರ ವಿರುದ್ಧದ ಆರೋಪ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ. ಇದೇ ರೀತಿಯ ಆರೋಪದಡಿ ಇಂದಿನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಪೊಲೀಸರು ದಾಖಲು ಮಾಡಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ಈ ಹಿಂದೆಯೇ ರದ್ದುಪಡಿಸಿತ್ತು. ಈ ಇಬ್ಬರೂ ಸೇರಿದಂತೆ ಹಲವಾರು ಜನನಾಯಕರು ಸಾವಿರಾರು ಜನರನ್ನು ಸಂಘಟಿಸಿ ಆ ಸಮಯದಲ್ಲಿ ಪ್ರತಿಭಟನೆ ಮತ್ತು ಯಾತ್ರೆ ಹಮ್ಮಿಕೊಂಡಿದ್ದರು. ನಾಯಕರು ಎನಿಸಿಕೊಂಡವರು ಪ್ರಜೆಗಳಿಗೆ ಮಾದರಿಯಾಗಿದ್ದು ಕಾನೂನು ಪಾಲನೆ ಮಾಡಬೇಕಿತ್ತು. ಹೈಕೋರ್ಟ್ ಸದರಿ ಪ್ರಕರಣದ ಎಫ್‌ಐಆರ್ ರದ್ದುಪಡಿಸಿದ್ದು ಅಚ್ಚರಿಗೊಳಿಸಿದೆ.

ಅದೇ ಕೋವಿಡ್ ಸಮಯದಲ್ಲಿ ಮಾಸ್ಕ್ ಹಾಕದ ಸಾರ್ವಜನಿಕರು ಪರಿಪರಿಯಾಗಿ ಬೇಡಿಕೊಂಡರೂ ಔದಾರ್ಯ ತೋರದೆ, ನೂರರಿಂದ ಇನ್ನೂರೈವತ್ತು ರೂಪಾಯಿಯವರೆಗೆ ದಂಡ ವಿಧಿಸಲಾಗಿತ್ತು. ಈ ದಂಡ ವಸೂಲಿಗೆಂದೇ ಕಮಾಂಡೊಗಳನ್ನು ನಿಯೋಜಿಸಲಾಗಿತ್ತು. ಜನನಾಯಕರ ವಿರುದ್ಧದ ಪ್ರಕರಣವನ್ನು ಹೈಕೋರ್ಟ್ ವಜಾ ಮಾಡಿರುವ ಕಾರಣದಿಂದ, ಜನರಿಂದ ವಸೂಲಿ ಮಾಡಿದ ದಂಡದ ಹಣವನ್ನೂ ಸರ್ಕಾರ ಹಿಂದಿರುಗಿಸಲಿ. ಸಾಮಾನ್ಯರಿಗೊಂದು ನ್ಯಾಯ ಜನಪ್ರತಿನಿಧಿಗಳಿಗೆ ಒಂದು ನ್ಯಾಯ ಏಕೆ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಚೆಸ್ ಸ್ಪರ್ಧೆ: ನಿಯಮದ ಅರಿವು ಇರಲಿ

ಶಾಲಾ ಶಿಕ್ಷಣ ಇಲಾಖೆಯ ಅಂತರಶಾಲಾ ಕ್ರೀಡಾಕೂಟಗಳು ಆರಂಭವಾಗಿವೆ. ಆದರೆ ನಿಯಮಗಳ ಬಗ್ಗೆ ಸರಿಯಾದ ತಿಳಿವಳಿಕೆಯಿಲ್ಲದ ಕಾರಣ ಚೆಸ್ ಸ್ಪರ್ಧೆಯನ್ನು ಮನಸ್ಸಿಗೆ ತೋಚಿದಂತೆ ನಡೆಸಲಾಗುತ್ತಿದೆ. ಚೆಸ್ ಪಂದ್ಯಾವಳಿಯನ್ನು ಹೇಗೆ ನಡೆಸಬೇಕು ಎಂಬುದೇ ತಿಳಿದಿಲ್ಲ. ರಾಜ್ಯದ ಬಹುತೇಕ ದೈಹಿಕ ಶಿಕ್ಷಣ ಶಿಕ್ಷಕರಿಗೆ ಈ ಆಟದ ಪರಿಷ್ಕೃತ ನಿಯಮಗಳ ಅರಿವಿಲ್ಲದಿರುವ ಕಾರಣ ಈ ರೀತಿ ಆಗುತ್ತಿದೆ. ಅವರಿಗೆ ಮಾರ್ಗದರ್ಶನ ಮತ್ತು ತರಬೇತಿಯ ಅಗತ್ಯವಿದೆ. ಈ ವಿಷಯವನ್ನು ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಮತ್ತು ಶಿಕ್ಷಣ ಇಲಾಖೆ ಆಯುಕ್ತರಿಗೆ ಇ-ಮೇಲ್ ಮತ್ತು ಪತ್ರದ ಮೂಲಕ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಇಲಾಖೆ ಈ ಬಗ್ಗೆ ಇನ್ನಾದರೂ ಗಮನಹರಿಸಲಿ.

ಪ್ರಾಣೇಶ ಯಾದವ, ಶಿವಮೊಗ್ಗ

ಮಾಂಸಾಹಾರಕ್ಕೆ ನಿರ್ಬಂಧ ಸಲ್ಲ

ಸಾಗರದ ಕಾಲೇಜೊಂದರಲ್ಲಿ ಏರ್ಪಡಿಸಲಾಗಿದ್ದ ‘ಆಹಾರ ಮೇಳ’ದಲ್ಲಿ ಮಾಂಸಾಹಾರ ಸಿದ್ಧಪಡಿಸಿಕೊಂಡು ಬಂದಿದ್ದ ವಿದ್ಯಾರ್ಥಿನಿಯರಿಗೆ, ಮೇಳದಲ್ಲಿ ಭಾಗವಹಿಸಲು ಅವಕಾಶ ನೀಡದಿರುವುದು ವರದಿಯಾಗಿದೆ (ಪ್ರ.ವಾ., ಆ. 8). ಮಾಂಸಾಹಾರ ಕನಿಷ್ಠ, ಸಸ್ಯಾಹಾರ ಶ್ರೇಷ್ಠ ಎಂಬ ಭಾವನೆ ಶಿಕ್ಷಿತರಲ್ಲೂ ಇರುವುದು ವಿಷಾದನೀಯ. ಮಾಂಸಾಹಾರ ಮತ್ತು ಸಸ್ಯಾಹಾರಗಳಲ್ಲಿ ಯಾವುದೂ ಶ್ರೇಷ್ಠ ಅಲ್ಲ, ಯಾವುದೂ ಕನಿಷ್ಠ ಅಲ್ಲ ಎಂಬ ಪ್ರಜ್ಞೆ ನಮ್ಮೆಲ್ಲರೊಳಗೂ ಜಾಗೃತಗೊಳ್ಳಲು ಇನ್ನೂ ಅದೆಷ್ಟು ಕಾಲ ಬೇಕೋ ತಿಳಿಯದು. ಮಾಂಸಾಹಾರ ಸೇವಿಸದೇ ಇರುವ ಕಾರಣಕ್ಕೆ ಶ್ರೇಷ್ಠ ಭಾವನೆ ಹಲವರಲ್ಲಿ ಇದ್ದರೆ, ಅದು ಅವರ ಅವೈಚಾರಿಕತೆಯ, ಮೌಢ್ಯದ ದ್ಯೋತಕ.

ಆಹಾರ ಅವರವರ ಇಚ್ಛೆ, ಅಭಿರುಚಿ ಮತ್ತು ಅಭ್ಯಾಸಕ್ಕೆ ಬಿಟ್ಟದ್ದು. ಮಾಂಸಾಹಾರ ‘ಹೊಲಸು’ ಎಂಬ ವಿಚಾರ ಕೆಲವರ ಮನಸ್ಸನ್ನು ಹೊಕ್ಕಿದೆ. ಪ್ರಪಂಚದ ಪ್ರತಿಶತ 95ರಷ್ಟು ಜನರ ಪ್ರೀತಿಯ ಆಹಾರ ಮಾಂಸಾಹಾರವಾಗಿದ್ದು ಅದು ‘ಹೊಲಸು’ ಏಕಾದೀತು? ಮಾಂಸಾಹಾರ ‘ಹೊಲಸು’ ಅಲ್ಲ, ‘ಹೊಲಸು’ ಯಾವುದೆಂದರೆ ಬೇರೆಯವರಿಂದ ಲಪಟಾಯಿಸಿದ್ದು, ಮೋಸದಿಂದ ಸಂಪಾದಿಸಿದ್ದು, ಲಂಚ ಹೊಡೆದಿದ್ದು ಎಂದು ವಚನಕಾರರು ಅಭಿಪ್ರಾಯಪಟ್ಟಿರುವುದು ಸರಿಯಾಗಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿನಿಮಾರಂಗಕ್ಕೂ ಕೃತಕ ಬುದ್ಧಿಮತ್ತೆ ಕಂಟಕ

ಪ್ರಜಾವಾಣಿ ವಾರ್ತೆ

ಸಿನಿಮಾ, ವೆಬ್ ಸರಣಿ, ಟಿ.ವಿ.ಷೋ ನಿರ್ಮಾಣದ ವಿವಿಧ ಹಂತಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ಅನ್ನು ಬಳಸಲಾಗುತ್ತಿದೆ. ಈ ಮೂಲಕ ಕಲಾವಿದರು, ತಂತ್ರಜ್ಞರು, ಚಿತ್ರಸಾಹಿತಿಗಳ ಉದ್ಯೋಗಕ್ಕೆ ಧಕ್ಕೆಯಾಗುತ್ತಿದೆ ಎಂದು ಆರೋಪಿಸಿ ಹಾಲಿವುಡ್ ಕಲಾವಿದರು ಇದೇ ಮೇನಲ್ಲಿ ಮುಷ್ಕರ ಆರಂಭಿಸಿದ್ದರು. ಆ ಮುಷ್ಕರ ಈಗ ನಾಲ್ಕನೇ ತಿಂಗಳಿಗೆ ಕಾಲಿಟ್ಟಿದೆ. ಕೃತಕ ಬುದ್ಧಿಮತ್ತೆಯನ್ನು ಎಲ್ಲದರಲ್ಲೂ ಹೀಗೆ ಬಳಸುತ್ತಾ ಹೋದರೆ, ಮುಂದೊಂದು ದಿನ ನಮಗೆ ಉದ್ಯೋಗವೇ ಇಲ್ಲದಂತಾಗುತ್ತದೆ ಎಂಬುದು ಮುಷ್ಕರನಿರತ ಕಲಾವಿದರು, ತಂತ್ರಜ್ಞರು ಮತ್ತು ಚಿತ್ರ ಸಾಹಿತಿಗಳ ಕಳವಳ.

ಹಾಲಿವುಡ್ ಸಿನಿಮಾಗಳಲ್ಲಿ ಅನಿವಾರ್ಯ ಸಂದರ್ಭಗಳಲ್ಲಷ್ಟೇ ಬಳಕೆಯಾಗುತ್ತಿದ್ದ ಸಿಜಿಐನಂತಹ ಅರೆಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ಈಗ ಇಡೀ ಚಿತ್ರನಿರ್ಮಾಣಕ್ಕೆ ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಲಾಗುತ್ತಿದೆ. ಬೇರೆ ಬೇರೆ ಎಐ ತಂತ್ರಜ್ಞಾನಗಳನ್ನು ಬಳಸಿಕೊಂಡು ಚಿತ್ರನಿರ್ಮಾಣದ ಎಲ್ಲಾ ಹಂತಗಳಲ್ಲೂ ತಂತ್ರಜ್ಞರು ಮತ್ತು ಕಲಾವಿದರನ್ನು ಚಿತ್ರನಿರ್ಮಾಣ ಕಂಪನಿಗಳು ಹೊರದೂಡುತ್ತಿವೆ. ಈ ಬೆಳವಣಿಗೆಯಿಂದ ನಮ್ಮನ್ನು ರಕ್ಷಿಸಬೇಕು ಎಂಬುದು ಮುಷ್ಕರನಿರತರ ಆಗ್ರಹ.

ಮುಷ್ಕರನಿರತರ ಕಳವಳಕ್ಕೆ ಇಂಬು ನೀಡುವಂತಹ ಹಲವು ಬೆಳವಣಿಗೆಗಳೂ ಹಾಲಿವುಡ್ ಅಂಗಳದಲ್ಲಿ ನಡೆದಿವೆ. ಹಾಲಿವುಡ್‌ನ ಅತ್ಯಂತ ದೊಡ್ಡ ನಿರ್ಮಾಣ ಕಂಪನಿಗಳಲ್ಲಿ ಒಂದಾದ ಡಿಸ್ನಿಯು ಚಿತ್ರಕತೆ, ಸ್ಟುಡಿಯೊ ನಿರ್ವಹಣೆ, ಚಿತ್ರನಿರ್ಮಾಣ, ಪ್ರಚಾರ ಮತ್ತು ಮಾರುಕಟ್ಟೆ ಎಲ್ಲಾ ಹಂತಗಳಲ್ಲೂ ಎಐ ಅನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದರ ಕಾರ್ಯಸಾಧ್ಯತೆಯನ್ನು ಪರಿಶೀಲಿಸಲು ಹೊಸ ತಂಡವೊಂದನ್ನು ನೇಮಕ ಮಾಡಿಕೊಂಡಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ. ಎಐ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ನವೋದ್ಯಮಗಳೊಂದಿಗೆ ಈ ತಂಡ ಸಮಾಲೋಚನೆ ನಡೆಸುತ್ತಿದೆ ಎಂದೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದರ ಜತೆಯಲ್ಲೇ, ನೆಟ್‌ಫ್ಲಿಕ್ಸ್ ಎಐ ನಿರ್ವಹಣೆಗೆ ಎಂದು ಒಂದು ಹುದ್ದೆಯನ್ನು ಸೃಷ್ಟಿಸಿದೆ. ಆ ಹುದ್ದೆಗೆ ಅರ್ಜಿಗಳನ್ನೂ ಆಹ್ವಾನಿಸಿದೆ.

ಇದು ಕಲಾವಿದರು, ತಂತ್ರಜ್ಞರು ಮತ್ತು ಚಿತ್ರ ಸಾಹಿತಿಗಳ ಕಳವಳವನ್ನು ತೀವ್ರಗೊಳಿಸಿದೆ. ಅವರ ಮುಷ್ಕರ ಮತ್ತು ಪ್ರತಿಭಟನೆಯೂ ತೀವ್ರಗೊಂಡಿದೆ. ಹಾಲಿವುಡ್ ಅಂಗಳಕ್ಕೆ ಎದುರಾದ ಈ ಆತಂಕ, ಭಾರತೀಯ ಚಿತ್ರರಂಗಕ್ಕೂ ಬರುವ ದಿನ ದೂರವಿಲ್ಲ ಎಂದು ಅಂದಾಜಿಸಲಾಗುತ್ತಿದೆ. ಹಾಗೆಯೇ ಆದರೆ, ಭಾರತದ ಕಲಾವಿದರೂ ಒಂದು ದಿನ ಕೃತಕಬುದ್ಧಿಮತ್ತೆ ವಿರುದ್ಧ ಮುಷ್ಕರಕ್ಕೆ ಇಳಿಯಬೇಕಾಗಬಹುದು.

ಕಲಾವಿದರ ಕ್ಲೋನ್

ಹಾಲಿವುಡ್‌ನ ಕೆಲವು ಚಿತ್ರನಿರ್ಮಾಣ ಕಂಪನಿಗಳು ಈಗ ಕಲಾವಿದರ ಕ್ಲೋನ್‌ಗಳನ್ನು ಬಳಸಿಕೊಳ್ಳುತ್ತಿವೆ ಎಂಬ ಆರೋಪವಿದೆ.

ಚಿತ್ರೀಕರಣಕ್ಕೆಂದು ಕಲಾವಿದರನ್ನು ದಿನದಮಟ್ಟಿಗೆ ಕರೆಸಿಕೊಳ್ಳುವ ಕಂಪನಿಗಳು, ಆ ಕಲಾವಿದರ ಇಡೀ ಹಾವಭಾವ, ದೇಹರಚನೆ, ಚಲನೆ, ಮಾತುಗಾರಿಕೆ ಎಲ್ಲವನ್ನೂ ಸಂಗ್ರಹಿಸಿಕೊಳ್ಳುತ್ತವೆ. ಆ ವಿವರಗಳನ್ನು ಬಳಸಿಕೊಂಡು ಆ ಕಲಾವಿದರ ಕ್ಲೋನ್ ಅನ್ನು ತಯಾರಿಸಲಾಗುತ್ತದೆ. ಕ್ಲೋನ್ ಬಳಸಿಕೊಂಡೇ ಇಡೀ ಚಿತ್ರವನ್ನು ನಿರ್ಮಾಣ ಮಾಡುವ ಪ್ರಯೋಗಗಳು ನಡೆಯುತ್ತಿವೆ. ಆದರೆ, ಕಲಾವಿದರಿಗೆ ಒಂದು ದಿನದ ವೇತನವನ್ನಷ್ಟೇ ನೀಡಲಾಗುತ್ತಿದೆ ಎಂದು ಹಾಲಿವುಡ್‌ನ ಮುಷ್ಕರನಿರತ ಕಲಾವಿದರು ಆರೋಪಿಸಿದ್ದಾರೆ.

ಕತೆಯಿಂದ ನಿರ್ದೇಶನದವರೆಗೆ

ಕತೆ ಕಟ್ಟುವುದು, ಕತೆಯನ್ನು ದೃಶ್ಯಕಾವ್ಯವಾಗಿಸುವುದು ಕಲಾತ್ಮಕ ಕುಸುರಿ ಕೆಲಸವಾಗಿತ್ತು. ಸ್ಪಷ್ಟವಾಗಿ ಹೇಳುವುದಾದರೆ, ಅದು ಮನುಷ್ಯನ ಕಲಾತ್ಮಕ ಕುಸುರಿ ಕೆಲಸವಾಗಿತ್ತು. ಆದರೆ, ಈಗ ಸಿನಿಮಾ ಮಾಡುವುದು ಬಹಳ ಸುಲಭದ, ಯಾಂತ್ರಿಕವಾದ ಕೆಲಸ ಎಂಬಂತಾಗಿದೆ. ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಈಗ ಸಿನಿಮಾವನ್ನು ಸಿದ್ಧಪಡಿಸಬಹುದಿದೆ.

ಬೇರೆ ಬೇರೆ ದೇಶಗಳಲ್ಲಿ ಇಂಥ ಪ್ರಯೋಗಗಳು ದೊಡ್ಡ ಸಂಖ್ಯೆಯಲ್ಲಿ ನಡೆಯುತ್ತಿದೆ. ಇದೇ ವರ್ಷದ ಮೇನಲ್ಲಿ 12 ನಿಮಿಷದ ಸಿನಿಮಾ 'ಫ್ರಾಸ್ಟ್' ಬಿಡುಗಡೆಗೊಂಡಿದೆ. ಇದು ಸಂಪೂರ್ಣವಾಗಿ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ನಿರ್ಮಿಸಿದಂಥ ಸಿನಿಮಾವಾಗಿದೆ. ಆದರೆ, ಭಾರತವನ್ನು ಇಂಥ ತಂತ್ರಜ್ಞಾನವು ನಿಧಾನವಾಗಿ ಆವರಿಸಿಕೊಳ್ಳತೊಡಗಿದೆ.

ಕ್ಷಣಾರ್ಧದಲ್ಲಿ ಕತೆ ಸಿದ್ಧ: ಕಥೆ ಬರೆಯುವವರು, ನಿರ್ದೇಶಕರು, ನಿರ್ಮಾಪಕರು ಎಲ್ಲರೂ ಸೇರಿ ಒಂದೆಡೆ ಕೂತು ಸಿನಿಮಾದ ಕತೆಯ ಎಳೆಯನ್ನು ನಿರ್ಧರಿಸಬೇಕಿತ್ತು. ಇದಕ್ಕಾಗಿ ಹಲವು ತಿಂಗಳು, ಕೆಲವೊಮ್ಮೆ ವರ್ಷಗಳೇ ಆಗುತ್ತಿದ್ದವು. ಒಂದೊಮ್ಮೆ ಅದು ಸರಿ ಬರಲಿಲ್ಲ ಎಂದಾದರೆ, ಮತ್ತೊಮ್ಮೆ ತಿದ್ದುಪಡಿ, ಮಗದೊಮ್ಮೆ ತಿದ್ದುಪಡಿ... ಹೀಗೆ ಸಮಯ ಹಿಡಿಯುತ್ತಿತ್ತು. ಆದರೆ, ಈಗ ಕತೆ ಸಿದ್ಧಪಡಿಸುವುದು ಸುಲಭವಾಗಿದೆ. ಯಾವ ರೀತಿಯ ಕತೆ ಬೇಕು, ಎಷ್ಟು ಪಾತ್ರಗಳಿರಬೇಕು, ಕತೆಯ ಕಾಲ, ಸ್ಥಳ ಹೀಗೆ ಕೆಲವು ಮಾಹಿತಿಗಳನ್ನು ಚಾಟ್‌ಜಿಪಿಟಿಯಲ್ಲಿ ಟೈಪಿಸಿದರೆ ಸಾಕು, ಕ್ಷಣಾರ್ಧದಲ್ಲಿ ನಿಮಗೆ ನಿಮ್ಮ ಸಿನಿಮಾದ ಕತೆ ಸಿದ್ಧವಾಗುತ್ತದೆ! ಇದಕ್ಕಾಗಿ ಹಲವು ಆ್ಯಪ್‌ಗಳೂ ಇವೆ.

ಲಕ್ಷಾಂತರ ಸಿನಿಮಾ ಕತೆಗಳ, ಸ್ಕ್ರಿಪ್ಟ್‌ಗಳ ದೊಡ್ಡ ಸಾಗರದಿಂದ ಮಾಹಿತಿಗಳನ್ನು ಹೆಕ್ಕಿ, ನಿಮಗೆ ಬೇಕಾದಂತೆಯೇ ಕತೆಯನ್ನು ಚಾಟ್‌ಜಿಪಿಟಿ ನೀಡುತ್ತದೆ. ಅಲ್ಲಿಗೆ ಕಥೆ ಸಿದ್ಧವಾಯಿತು. ನಂತರ ಈ ಕತೆಗೆ ಚಿತ್ರಕತೆಯನ್ನೂ ಇದೇ ಚಾಟ್‌ಜಿಪಿಟಿ ನೀಡುತ್ತದೆ. ಇದಾದಬಳಿಕ, ದೃಶ್ಯವೊಂದರಲ್ಲಿ ವಸ್ತುಗಳು ಹೇಗಿರಬೇಕು, ಎಲ್ಲಿರಬೇಕು, ಪಾತ್ರಗಳು ಎಲ್ಲಿರಬೇಕು, ಹೇಗಿರಬೇಕು ಹೀಗೆ ಒಂದೊಂದೂ ಸೂಕ್ಷ್ಮವನ್ನು ಚಾಟ್‌ಜಿಪಿಟಿಯೇ ಬರೆದುಕೊಡುತ್ತದೆ.

ಸಿನಿಮಾದ ಚಿತ್ರೀಕರಣಕ್ಕೆ ಸೂಕ್ತವಾದ ಜಾಗವನ್ನೂ ಇದೇ ಸೂಚಿಸುತ್ತದೆ. ಜೊತೆಗೆ, ಸಿನಿಮಾವೊಂದು ಚಿತ್ರೀಕರಣವನ್ನು ಆರಂಭಿಸಿ ಮುಗಿಸುವವರೆಗೂ ಯಾರು ಏನು ಮಾಡಬೇಕು, ನಟರ ದಿನಾಂಕಗಳನ್ನು ಹೊಂದಿಸಿ ಕೊಡುವುದು ಸೇರಿದಂತೆ ಸಿನಿಮಾದ ಸಂಪೂರ್ಣ ಶೆಡ್ಯೂಲ್ ಅನ್ನು ಚಾಟ್‌ಜಿಪಿಟಿಯೇ ಮಾಡಿಕೊಡುತ್ತದೆ.

ನಿರ್ದೇಶನಕ್ಕೂ ಸೈ: ಕೃತಕ ಬುದ್ಧಿಮತ್ತೆಯು ಸಿನಿಮಾದ ನಿರ್ದೇಶನವನ್ನೂ ಮಾಡಬಲ್ಲದು. ಛಾಯಾಚಿತ್ರಗ್ರಾಹಕರಿಗೆ ಕ್ಯಾಮೆರಾ ಆ್ಯಂಗಲ್‌ಗಳನ್ನೂ ಸೂಚಿಸಬಲ್ಲದು. ಬೆಳಕಿನ ವ್ಯವಸ್ಥೆ, ಒಂದು ದೃಶ್ಯದ ಕಲರ್ ಕೋಡಿಂಗ್‌ನಂಥ ಸೂಕ್ಷ್ಮ ವಿಷಯಗಳ ಕುರಿತೂ ಕೃತಕ ಬುದ್ಧಿಮತ್ತೆ ನಿಖರವಾಗಿ ಕೆಲಸ ಮಾಡಬಲ್ಲದು. ಕೃತಕ ಬುದ್ಧಿಮತ್ತೆಯ ನಿರ್ದೇಶನದಲ್ಲಿ ಕೆಲವು ಕಿರುಚಿತ್ರಗಳನ್ನು ನಿರ್ಮಿಸುವ ಪ್ರಯೋಗಗಳೂ ನಡೆದಿವೆ.

write a scene from a play starring a indian journalist and a tech enterpreneur. they are arguing about free speech, and each passionately asserts the view associated with his profession and social circle

Title: "Echoes of Expression"

Characters:

- Ravi (Indian Journalist)
- Arjun (Tech Entrepreneur)

Scene: A Coffee Shop in a Bustling City

(Ravi and Arjun sit across from each other at a corner table in a busy coffee shop. The ambiance is casual, yet the tension in the air is palpable.)

Ravi: (leaning forward) Arjun, you're underestimating the power of free speech. Journalism is the fourth pillar of democracy. We have a responsibility to hold those in power accountable, to unearth the truth, and to give a voice to the voiceless.

Arjun: (firmly) Ravi, I respect journalism, but the tech world is changing everything. We're at the forefront of a digital revolution, shaping a new world. We believe in platforms that connect people and ideas, creating opportunities and progress.

ಚಾಟ್‌ಜಿಪಿಟಿ ಬರೆದ ಸ್ಕ್ರಿಪ್ಟ್ ಒಂದರ ಸ್ಕ್ರೀನ್‌ಶಾಟ್

ಪೋಸ್ಟ್ ಪ್ರೊಡಕ್ಷನ್‌ನಲ್ಲೂ ಕೆಲಸಕ್ಕೆ ಕುತ್ತು

ಸಿನಿಮಾ ಇರಲೀ, ವೆಬ್ ಸರಣಿ ಇರಲೀ ಅಥವಾ ಟಿ.ವಿ ಷೋ ಇರಲಿ, ಪೋಸ್ಟ್ ಪ್ರೊಡಕ್ಷನ್ ಎಂಬುದು ಅತ್ಯಂತ ಮಹತ್ವದ ಘಟ್ಟ. ಡಬ್ಬಿಂಗ್, ಮಿಕ್ಸಿಂಗ್, ಸಂಗೀತ ಸಂಯೋಜನೆ, ಸಬ್‌ಟೈಟಲ್ ಎಲ್ಲಾ ಹಂತಗಳೂ ಒಂದು ಕಲಾಕೃತಿಯ ಅಂದ ಮತ್ತು ಸಾಧ್ಯತೆಗಳನ್ನು ಹೆಚ್ಚಿಸುವ ಅತ್ಯಂತ ಮಹತ್ವದ ಹಂತಗಳಾಗಿವೆ.

ಡಬ್ಬಿಂಗ್ ಮತ್ತು ಮಿಕ್ಸಿಂಗ್ ಒಂದು ಸಿನಿಮಾದ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಅತ್ಯಂತ ಮುಖ್ಯವಾದ ಘಟ್ಟ. ಕಲಾವಿದರ ತುಟಿಚಲನೆಗೆ ಹೊಂದಿಕೆಯಾಗುವಂತೆ ಡಬ್ಬಿಂಗ್ ಅನ್ನು ಹೊಂದಿಸುವುದು ಮತ್ತು ಸಂಗೀತವನ್ನು ಜೋಡಿಸುವುದು ಒಂದು ಕಲೆಯೂ ಹೌದು, ವಿಜ್ಞಾನವೂ ಹೌದು. ಈ ಕಾರ್ಯ ಮಾಡುವ ತಂತ್ರಜ್ಞನಿಗೆ ಏಕಕಾಲದಲ್ಲಿ ತಂತ್ರಜ್ಞಾನದ ಕೌಶಲವೂ ಇರಬೇಕು ಮತ್ತು ಅದನ್ನು ಅಂದಗಾಣಿಸುವ ಸೃಜನಶೀಲತೆಯೂ ಇರಬೇಕು.

ಹೀಗೆ ಕೌಶಲ, ಶ್ರಮ ಮತ್ತು ಸೃಜನಶೀಲತೆ ಎಲ್ಲವನ್ನೂ ಬೇಡುವ ಮಿಕ್ಸಿಂಗ್ ಕಾರ್ಯಕ್ಕೆ ಕೃತಕ ಬುದ್ಧಿಮತ್ತೆ ಈಗಾಗಲೇ ಕಾಲಿಟ್ಟಿದೆ. ಎಐ ಅನ್ನು ಬಳಸಿಕೊಂಡು ಈಗಾಗಲೇ ಹಲವು ಕಿರುಚಿತ್ರಗಳನ್ನು ನಿರ್ಮಾಣ ಮಾಡಲಾಗಿದೆ. ಅವುಗಳಲ್ಲಿ ಸುಧಾರಣೆಗೆ ಅವಕಾಶವಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡರೂ, ಅವು ಮಾನವನ ಶ್ರಮ, ಕೌಶಲ ಮತ್ತು ಸೃಜನಶೀಲತೆಯನ್ನು 'ರಿಪ್ಲೇಸ್' ಮಾಡಿದ್ದು ಸುಳ್ಳಲ್ಲ ಎಂಬುದನ್ನು ಆ ಕಿರುಚಿತ್ರ ನಿರ್ಮಾಣಗಳು ಸಾಬೀತುಮಾಡಿವೆ. ಹಾಲಿವುಡ್‌ನ ಕೆಲವು ದೊಡ್ಡ ಚಿತ್ರಗಳಿಗೂ ಈ ಹಂತದಲ್ಲಿ ಎಐ ಅನ್ನು ಬಳಸಿಕೊಳ್ಳಲಾಗುತ್ತಿದೆ.

ಜಗತ್ತಿನಾದ್ಯಂತ, ದೇಶದಾದ್ಯಂತ ಬಿಡುಗಡೆಯಾಗುವ ಚಿತ್ರಗಳಿಗೆ ಸಬ್‌ಟೈಟಲ್ ಬರೆಯುವುದು ಲಕ್ಷಾಂತರ ಜನರಿಗೆ ಉದ್ಯೋಗ ಮತ್ತು ಅತ್ಯುತ್ತಮ ಆದಾಯ ನೀಡುವ ಕ್ಷೇತ್ರ. ಒಂದಿಡೀ ಚಿತ್ರವನ್ನು ನೋಡುತ್ತಾ, ಅದಕ್ಕೆ ಸಬ್‌ಟೈಟಲ್ ಬರೆಯುವುದು ಮತ್ತು ಅದರಲ್ಲಿರುವ ತಪ್ಪುಗಳನ್ನು ಸರಿಪಡಿಸುವುದು ಅತ್ಯಂತ ಬೇಡಿಕೆ ಇರುವ ಉದ್ಯೋಗಗಳಲ್ಲಿ ಒಂದು. ಇದು ಏಕಕಾಲಕ್ಕೆ ಭಾಷಾಜ್ಞಾನ, ಸಾಹಿತ್ಯ, ಬರವಣಿಗೆ, ಭಾಷಾಂತರ ಎಲ್ಲವನ್ನೂ ಬೇಡುವ ಕೆಲಸ. ದೊಡ್ಡ-ದೊಡ್ಡ ಚಿತ್ರನಿರ್ಮಾಣ ಕಂಪನಿಗಳೆಲ್ಲವೂ ಒಂದು ಚಿತ್ರಕ್ಕೆ ಸಬ್‌ಟೈಟಲ್ ಬರೆಯಲು ವಾರಗಟ್ಟಲೆ ಕಾಲಾವಕಾಶ ಕೊಡುತ್ತವೆ ಮತ್ತು ಲಕ್ಷಾಂತರ ಸಂಭಾವನೆಯನ್ನೂ ನೀಡುತ್ತವೆ. ಆದರೆ ಕೃತಕ ಬುದ್ಧಿಮತ್ತೆಯೇ ಈಗ ಈ ಕೆಲಸವನ್ನು ಕೆಲವೇ ನಿಮಿಷಗಳಲ್ಲಿ ಮಾಡುತ್ತದೆ. ಸಬ್‌ಟೈಟಲ್ ಬರೆಯುವುದಲ್ಲದೆ, ಅದನ್ನು ಹಲವು ಭಾಷೆಗಳಿಗೆ ಭಾಷಾಂತರಿಸುವ ಕೆಲಸವನ್ನೂ ಕ್ಷಣಾರ್ಧದಲ್ಲಿ ಮಾಡುತ್ತಿದೆ. ಈ ಬೆಳವಣಿಗೆಯು ಈ ಕ್ಷೇತ್ರದಲ್ಲಿನ ಪರಿಣತ-ಉದ್ಯೋಗಿಗಳ ಕೆಲಸಕ್ಕೆ ಕುತ್ತು ತಂದಿದೆ.

ಸಿನಿಮಾದ ಪೋಸ್ಟರ್ ಸಿದ್ಧಪಡಿಸುವುದು ಅತ್ಯಂತ ಮುಖ್ಯವಾದ ಕೆಲಸಗಳಲ್ಲಿ ಒಂದು. ಸಿನಿಮಾ ಬಿಡುಗಡೆಗೂ ಮುನ್ನ, ಪ್ರೇಕ್ಷಕರನ್ನು ಆ ಸಿನಿಮಾದತ್ತ ಸೆಳೆಯುವ ಮುಖ್ಯ ಪರಿಕರಗಳಲ್ಲಿ ಪೋಸ್ಟರ್ ಬಹಳ ಪ್ರಮುಖವಾದುದು. ಟೀಸರ್ ಮತ್ತು ಟ್ರೇಲರ್‌ಗಳ ಈ ಯುಗದಲ್ಲಿಯೂ ಪೋಸ್ಟರ್‌ಗಳು ತಮ್ಮ ಪ್ರಾಮುಖ್ಯವನ್ನು ಉಳಿಸಿಕೊಂಡಿವೆ. ಸೃಜನಶೀಲತೆಯನ್ನು ಬೇಡುವ ಈ ಕೆಲಸಕ್ಕೆ ಪರಿಣತರೇ ಬೇಕು ಮತ್ತು ನಿರ್ಮಾಪಕರು ಅದಕ್ಕಾಗಿ ಲಕ್ಷಾಂತರ ರೂಪಾಯಿ ವ್ಯಯಿಸುತ್ತಾರೆ. ಹೀಗೆ ಸೃಜನಶೀಲತೆ ಬೇಡುವ ಪೋಸ್ಟರ್ ಕೆಲಸವನ್ನೂ ಈಗ ಕೃತಕ ಬುದ್ಧಿಮತ್ತೆಯು ಕ್ಷಣಾರ್ಧದಲ್ಲಿ ಮಾಡುತ್ತದೆ. ಕಲಾವಿದರ ಫೋಟೊಶೂಟ್ ನಡೆಸದೇ, ವಸ್ತ್ರವಿನ್ಯಾಸವಿಲ್ಲದೇ, ಸೆಟ್ಟಿಂಗ್ ಇಲ್ಲದೇ ಕೆಲವೇ ಕ್ಷಣಗಳಲ್ಲಿ ಮತ್ತು ಅತ್ಯಂತ ಕಡಿಮೆ ವೆಚ್ಚದಲ್ಲಿ ಪೋಸ್ಟರ್ ಸಿದ್ಧವಾಗುತ್ತದೆ. ಇದು ಸಹ ಹಲವರ ಉದ್ಯೋಗಕ್ಕೆ ಕುತ್ತು ತರುತ್ತದೆ ಎಂದು ಎಣಿಸಲಾಗಿದೆ.

ಆಧಾರ: ರಾಯಿಟರ್ಸ್, ನ್ಯೂಯಾರ್ಕ್ ಟೈಮ್ಸ್, ವಿಪ್ರೊ, ಓಪನ್‌ಎಐ

ಕನ್ನಡ ಚಿತ್ರಗಳ ಕಡೆಗಣನೆ ನಿರ್ದೇಶಕ ಶಶಾಂಕ್ ದೂರು

ತಮಿಳಿನ 'ಜೈಲರ್' ಚಿತ್ರ ಸೇರಿದಂತೆ ಪರಭಾಷಾ ಸಿನಿಮಾಗಳ ಬಿಡುಗಡೆಗೆ ಅತ್ಯುತ್ಸಾಹ ತೋರುತ್ತಿರುವ ಮಲ್ಟಿಪ್ಲೆಕ್ಸ್‌ಗಳು ಹಾಗೂ ಚಿತ್ರಮಂದಿರಗಳು, ಚೆನ್ನಾಗಿ ಗಳಿಕೆ ಕಾಣುತ್ತಿರುವ ಕನ್ನಡದ ಚಿತ್ರಗಳನ್ನು ಕಡೆಗಣಿಸುತ್ತಿವೆ. ಬೆಂಗಳೂರಿನಲ್ಲಿ ಕನ್ನಡ ಚಿತ್ರಗಳಿಗೆ ಅನ್ಯಾಯವಾಗುತ್ತಿದೆ ಎಂದು 'ಕೌಸಲ್ಯ ಸುಪ್ರಜಾ ರಾಮ' ಚಿತ್ರದ ನಿರ್ದೇಶಕ ಶಶಾಂಕ್ ಇತ್ತೀಚೆಗೆ ಚಲನಚಿತ್ರ ವಾಣಿಜ್ಯ ಮಂಡಳಿಗೆ ದೂರು ನೀಡಿದ್ದಾರೆ.

'ನಮ್ಮ ಸಿನಿಮಾದ ಗಳಿಕೆ ಉತ್ತಮವಾಗಿದೆ. ಆದರೆ ಮೂರನೇ ವಾರಕ್ಕೆ ಸೂಕ್ತ ಶೋಗಳು ಸಿಗುತ್ತಿಲ್ಲ. ನಮ್ಮ ನಾಡಿನಲ್ಲಿಯೇ ಕನ್ನಡ ಚಿತ್ರಗಳಿಗೆ ಬೆಲೆ ನೀಡದೆ ಪರಭಾಷಾ ಚಿತ್ರಗಳಿಗೆ ಮಣೆ ಹಾಕಲಾಗುತ್ತಿದೆ. ವಿಶೇಷವಾಗಿ ಬೆಂಗಳೂರಿನಲ್ಲಿ ಚಿತ್ರಮಂದಿರ ಸಿಗುತ್ತಿಲ್ಲ. ಸಾಮಾನ್ಯವಾಗಿ ಪ್ರತಿ ಬುಧವಾರ ಚಿತ್ರಮಂದಿಗಳಲ್ಲಿ ಮುಂದಿನ ವಾರದ ಶೋ ಹಂಚಿಕೆಯಾಗುತ್ತದೆ. ಹೀಗಾಗಿ ಅದಕ್ಕೂ ಮೊದಲೇ ಈ ಬಗ್ಗೆ ಚಲನಚಿತ್ರ ವಾಣಿಜ್ಯ ಮಂಡಳಿಗೆ ದೂರು ನೀಡಿರುವೆ. ಸೂಕ್ತ ಪರಿಹಾರ ಸಿಗದಿದ್ದರೆ ಕನ್ನಡ ಪರ ಸಂಘಟನೆಗಳೊಂದಿಗೆ ಬೀದಿಗಿಳಿದು ಹೋರಾಟ ನಡೆಸುವುದು ಅನಿವಾರ್ಯ' ಎಂದು ಶಶಾಂಕ್ 'ಪ್ರಜಾವಾಣಿ'ಗೆ ತಿಳಿಸಿದರು.

ಮಿಲನಾ ಹಾಗೂ ಡಾರ್ಲಿಂಗ್ ಕೃಷ್ಣ

ಜೈಲರ್ ಅಬ್ಬರ: ರಜನಿಕಾಂತ್, ಶಿವರಾಜ್‌ಕುಮಾರ್, ಮೋಹನ್‌ಲಾಲ್ ಮುಖ್ಯಭೂಮಿಕೆಯಲ್ಲಿರುವ 'ಜೈಲರ್' ಚಿತ್ರ ಆಗಸ್ಟ್ 10ರಂದು ತೆರೆ ಕಾಣುತ್ತಿದ್ದು, ದಿನದಿಂದ ದಿನಕ್ಕೆ ಚಿತ್ರದ ಕ್ರೇಜ್ ಹೆಚ್ಚುತ್ತಿದೆ. ರಾಜ್ಯದಲ್ಲಿ ಮೊದಲ ದಿನವೇ ಈ ಸಿನಿಮಾಕ್ಕೆ 2500ಕ್ಕೂ ಹೆಚ್ಚು ಶೋ ಸಿಗುವ ನಿರೀಕ್ಷೆಯಿದೆ.

ನೆಲ್ಸನ್ ದಿಲೀಪ್ ಕುಮಾರ್ ನಿರ್ದೇಶನದ ಈ ಚಿತ್ರ ವೀಕ್ಷಣೆಗಾಗಿ ಕೆಲ ಕಂಪನಿಗಳು ಆ.10ರಂದು ರಜೆ ಘೋಷಿಸಿವೆ ಎಂಬ ಸುದ್ದಿ ಸಾಮಾಜಿಕ ಜಾಲ-ತಾಣಗಳಲ್ಲಿ ಹರಿದಾಡುತ್ತಿದೆ. ತಮಿಳುನಾಡಿನಲ್ಲಿ ಈ ಚಿತ್ರ ಬಿಡುಗಡೆಗೆ ಜಾತ್ರೆಯ ಸಂಭ್ರಮ ಶುರುವಾಗಿದೆ. ಚೆನ್ನೈನ ಬಹುತೇಕ ಚಿತ್ರಮಂದಿರಗಳು ಬೆಳಿಗ್ಗೆ 6 ಗಂಟೆಯಿಂದಲೇ ಈ ಚಿತ್ರಕ್ಕೆ ಶೋ ನೀಡಿದ್ದು, ಕೆಲ ಚಿತ್ರಮಂದಿರಗಳಲ್ಲಿ ಒಂದೇ ದಿನ 75ಕ್ಕೂ ಹೆಚ್ಚು ಶೋಗಳಿವೆ. ಬೆಂಗಳೂರಿನಲ್ಲಿ ಕೂಡ ಚಿತ್ರ ನೋಡುವ ಕುತೂಹಲಿಗಳ ಸಂಖ್ಯೆ ಹೆಚ್ಚಾಗಿದೆ. 1000ಕ್ಕೂ ಅಧಿಕ ಶೋಗಳು ಲಭಿಸಿವೆ. ಜೊತೆಗೆ ಈ ಚಿತ್ರದ ಟಿಕೆಟ್ ದರ ಕೂಡ ಗಗನಕ್ಕೇರಿದ್ದು, ಕೆಲ ಮಲ್ಟಿಪ್ಲೆಕ್ಸ್‌ಗಳಲ್ಲಿ ₹2000 ವರೆಗೂ ತಲುಪಿದೆ.

ಸೆಪ್ಟೆಂಬರ್‌ನಲ್ಲಿ 'ಮ್ಯಾಟ್ನಿ' ತೆರೆಗೆ

'ಏನಮ್ಮಿ ಏನಮ್ಮಿ...' ಎನ್ನುತ್ತಾ 'ಅಯೋಗ್ಯ' ಸಿನಿಮಾ ಮೂಲಕ ಪ್ರೇಕ್ಷಕರನ್ನು ಸೆಳೆದಿದ್ದ ನೀನಾಸಂ ಸತೀಶ್ ಹಾಗೂ ರಚಿತಾ ರಾಮ್ ಜೋಡಿ ಮತ್ತೊಮ್ಮೆ ತೆರೆ ಮೇಲೆ ಮೋಡಿ ಮಾಡಲು ಸಜ್ಜಾಗುತ್ತಿದೆ. ಇವರ ನಟನೆಯ, ಮನೋಹರ್ ಆ್ಯಕ್ಷನ್ ಕಟ್ ಹೇಳಿರುವ 'ಮ್ಯಾಟ್ನಿ' ಸಿನಿಮಾ ಸೆಪ್ಟೆಂಬರ್‌ನಲ್ಲಿ ತೆರೆಗೆ ಬರಲಿದೆ.

ಚಿತ್ರದ 'ಸಂಜೆ ಮೇಲೆ ಸುಮ್ನೆ ಫೋನ್ ಮಾಡ್ಲ ನಿಂಗೆ...' ಎಂಬ ಹಾಡು ಇತ್ತೀಚೆಗೆ ರಿಲೀಸ್ ಆಯಿತು. ಹಾಡನ್ನು ಪೂರ್ಣಚಂದ್ರ ತೇಜಸ್ವಿ ಅವರು ಬರೆದು ಸಂಗೀತ ನೀಡಿದ್ದು, ವಿಜಯ್ ಪ್ರಕಾಶ್ ಧ್ವನಿಯಾಗಿದ್ದಾರೆ.

'ಈ ಹಾಡನ್ನು ಮೊದಲು ಪೂರ್ಣಚಂದ್ರ ಅವರೇ ಹಾಡಿದ್ದರು. ಆದರೆ ಈ ಹಾಡನ್ನು ವಿಜಯ್‌ಪ್ರಕಾಶ್ ಹಾಡಿದರೆ ಚೆನ್ನಾಗಿರುತ್ತದೆ ಎಂದೆನಿಸಿತು. ಅದಕ್ಕೆ ಪೂರ್ಣ ಅವರು ಒಪ್ಪಿಕೊಂಡು ವಿಜಯ್‌ಪ್ರಕಾಶ್ ಅವರಿಂದ ಹಾಡಿಸಿದ್ದಾರೆ. ನಿರ್ದೇಶಕ ಮನೋಹರ್ ಅವರು ಈ ಚಿತ್ರದ ಕಥೆ ಹೇಳಿದಾಗ ತಕ್ಷಣ ಒಪ್ಪಿಕೊಂಡೆ. ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿವೆ. ರಚಿತಾ ರಾಮ್ ಹಾಗೂ ಅದಿತಿ ಇಲ್ಲಿ ನನಗೆ ಜೋಡಿಯಾಗಿದ್ದಾರೆ. ಸೆಪ್ಟೆಂಬರ್‌ನಲ್ಲಿ ಚಿತ್ರ ಬಿಡುಗಡೆಯಾಗಲಿದೆ' ಎಂದರು ನೀನಾಸಂ ಸತೀಶ್.

'ಹಾಡಿನ ಚಿತ್ರೀಕರಣಕ್ಕಾಗಿ ಪ್ರತಾಪ್ ಅವರು ಅದ್ಭುತ ಸೆಟ್‌ಗಳನ್ನು ಹಾಕಿದ್ದರು. ಅಲ್ಲಿ ಶೂಟಿಂಗ್ ಮಾಡಿದ್ದು ಸ್ವಿಟ್ಜರ್‌ಲೆಂಡ್‌ನಲ್ಲಿ ಚಿತ್ರೀಕರಣ ಮಾಡಿದ ಹಾಗಿತ್ತು. ಅದ್ಭುತವಾದ ತಾರಾಗಣ ಈ ಚಿತ್ರದಲ್ಲಿದೆ. ಇದರಲ್ಲಿ ನನ್ನ ಪಾತ್ರಕ್ಕೆ ಹೊಸ ಶೇಡ್ ಇದೆ. ಅದು ಟ್ರೈಲರ್‌ನಲ್ಲಿ ತಿಳಿಯಲಿದೆ' ಎನ್ನುತ್ತಾರೆ ರಚಿತಾ ರಾಮ್.

ರಚಿತಾ ರಾಮ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವ್ಯಕ್ತಿಯೊಬ್ಬರು ದೇವಾಲಯದ ಆವರಣದಲ್ಲಿ ನಿಂತು ಅತ್ಯಾಧುನಿಕ ರೈಫಲ್‌ನಿಂದ ಗುಂಡು ಹಾರಿಸುವ ಮತ್ತು ಆ ದೇವಾಲಯದ ಆವರಣದಲ್ಲಿ ಪೊಲೀಸರು ಇರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಗುಂಡು ಹಾರಿಸಿದ ವ್ಯಕ್ತಿ ಮಫ್ತಿಯಲ್ಲಿರುವ ಪೊಲೀಸ್ ಅಧಿಕಾರಿ' ಎಂದು ಝೀನ್ಯೂಸ್ ವರದಿ ಮಾಡಿತ್ತು. ಆ ವರದಿಯ ಸ್ಕ್ರೀನ್‌ಶಾಟ್ ಅನ್ನು ಸಾಮಾಜಿಕ ಜಾಲ-ತಾಣಗಳಲ್ಲಿ ಹಂಚಿಕೆಕೊಳ್ಳಲಾಗುತ್ತಿದೆ. ಗುಂಡು ಹಾರಿಸಿದ್ದು ಬಜರಂಗ ದಳದ ಕಾರ್ಯಕರ್ತನಲ್ಲ, ಬದಲಿಗೆ ಪೊಲೀಸ್ ಅಧಿಕಾರಿ ಎಂದು ಆ ಸ್ಕ್ರೀನ್‌ಶಾಟ್‌ನ ಜತೆಗೆ ಸಂದೇಶ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

'ವಿಡಿಯೊದಲ್ಲಿರುವ ವ್ಯಕ್ತಿ ಪೊಲೀಸ್ ಅಧಿಕಾರಿಯಲ್ಲ. ಬದಲಿಗೆ ಆತ ಬಜರಂಗ ದಳದ ಕಾರ್ಯಕರ್ತ ಅಶೋಕ್ ಬಾಬಾ. 'ಆ ವಿಡಿಯೊದಲ್ಲಿ ಇರುವ ವ್ಯಕ್ತಿ ನಾನೇ. ನಾನೇ ಗುಂಡು ಹಾರಿಸಿದ್ದು, ನಾನು ಬಜರಂಗದ ದಳದ ಕಾರ್ಯಕರ್ತ' ಎಂದು ಸುದ್ದಿವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಆ ವ್ಯಕ್ತಿ ಹೇಳಿಕೊಂಡಿದ್ದಾರೆ. ಅನಂತರ, ಝೀನ್ಯೂಸ್ ಸಹ ತಾನು ಮಾಡಿದ್ದ ವರದಿ ಮತ್ತು ವರದಿಯ ಲಿಂಕ್ ಇದ್ದ ಟ್ವೀಟ್ ಅನ್ನು ಅಳಿಸಿ ಹಾಕಿದೆ. ಆದರೆ, ವರದಿಯ ಸ್ಕ್ರೀನ್‌ಶಾಟ್ ಅನ್ನು ಸುಳ್ಳು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ಈ ಬಗ್ಗೆ ಹರಿಯಾಣ ಪೊಲೀಸ್ ಸಹಾಯಕ ಮಹಾನಿರ್ದೇಶಕಿ ಮಮತಾ ಸಿಂಗ್ ಅವರನ್ನು ಕೇಳಲಾಗಿತ್ತು. ವಿಡಿಯೊವನ್ನು ತಾವೂ ನೋಡಿದ್ದು, ಸ್ಥಳದಲ್ಲಿ ಪೊಲೀಸರು ಮಫ್ತಿಯಲ್ಲಿ ಇದ್ದರು. ಆ ವ್ಯಕ್ತಿಯ ಬಗ್ಗೆ ಮತ್ತು ಆತ ಬಳಸಿದ ರೈಫಲ್ ಬಗ್ಗೆ ಮಾಹಿತಿ ನೀಡುವಂತೆ ಸಂಬಂಧಿತ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚನೆ ನೀಡಿದ್ದೇನೆ ಎಂದು ಮಾಹಿತಿ ನೀಡಿದ್ದಾರೆ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಆಗಸ್ಟ್ 9, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ನವಮಿ ಗಂ. 28-12 ನಕ್ಷತ್ರ: ಕೃತ್ತಿಕಾ ಗಂ. 26-29 ಯೋಗ: ವೃದ್ಧಿ ಗಂ. 15-40 ಕರಣ: ತೈತಿಲ ಗಂ. 15-57, ಕರ್ಕಾಟಕ ಮಾಸದ 23 ನೇ ದಿನ, ಮಳೆನಕ್ಷತ್ರ: ಆಶ್ಲೇಷ 2. ರಾಹುಕಾಲ : ಮಧ್ಯಾಹ್ನ 12-00 - 01-30

ಸೂರ್ಯೋದಯ : 06-21 ಸೂರ್ಯಾಸ್ತ : 06-52

ಮುಸ್ಲಿಂ ದಿನಾಂಕ : 21 ಮೊಹರಮ್

ಅದೃಷ್ಟ ಸಂಖ್ಯೆ : 7, 1

ಮೇಷ: ಕಠಿಣ ಪ್ರಯತ್ನಗಳ ನಂತರವೂ ಸಿಗದ ಕಾಮ್ಯಗಳನ್ನು ಪಡೆದುಕೊಳ್ಳಲು ತುಸು ಹೆಚ್ಚಿನ ಪ್ರಯತ್ನ ಪಡಬೇಕಾಗುವುದು ಅನಿವಾರ್ಯ. ವಿದ್ಯಾಭ್ಯಾಸದಲ್ಲಿ ಉತ್ತಮವಾದ ಪ್ರಗತಿ ಕಾಣುವಿರಿ.

ವೃಷಭ: ಶಾಸ್ತ್ರೀಯ ಸಂಗೀತ ಕಲಾವಿದರಿಗೆ ಉತ್ತಮ ವೇದಿಕೆ ದೊರಕುವ ಮುನ್ಸೂಚನೆ ಸಿಗುತ್ತದೆ. ಗಣ್ಯವ್ಯಕ್ತಿಗಳಿಗೆ ಸಮಾಜದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ಸ್ಥಾನ-ಮಾನ, ಗೌರವಗಳು, ಪುರಸ್ಕಾರಗಳು ಲಭಿಸಲಿದೆ.

ಮಿಥುನ: ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳ ಬೇಕಾಗುವುದು. ಶೈಕ್ಷಣಿಕ ರಂಗದವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗುವುದು. ಚರ್ಮದ ವಸ್ತುಗಳ ತಯಾರಿ ಅಥವಾ ಮಾರಾಟದಿಂದ ಲಾಭ.

ಕರ್ಕಾಟಕ: ದಿನಾಂತ್ಯದಲ್ಲಿ ಆಭರಣ ಅಥವಾ ಕಲಾವಸ್ತುಗಳನ್ನು ಖರೀದಿಸುವ ಮನಸ್ಸು ಬರಲಿದೆ. ಜೀವನದಲ್ಲಿನ ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳು ದೂರಾಗುವುವು. ಈ ದಿನ ಆದಾಯವು ಸಾಕಷ್ಟು ಕೂಡಿ ಬರಲಿದೆ.

ಸಿಂಹ: ಇಂದಿನ ಕಾರ್ಯವೈಖರಿಯನ್ನು ಸ್ವಲ್ಪ ಬದಲಿಸಿ ಹೊಸ ಕೆಲಸವನ್ನು ಮಾಡಿದರೆ ಈ ದಿನ ವಿಶಿಷ್ಟ ಜಯ ಕಾಣುವಿರಿ. ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆರಡೂ ಇರುವಿಕೆಯನ್ನು ತಿಳಿಸಲಿದೆ.

ಕನ್ಯಾ: ಮನೆಯಲ್ಲಿ ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ. ನೆರೆಯ ವರೊಂದಿಗೆ ಸೌಹಾರ್ದಯುತವಾಗಿ ವರ್ತಿಸಿ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆ.

ತುಲಾ: ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಈ ದಿನ ನಿಮಗೆ ಮನವರಿಕೆಯಾಗುವುದು. ನೂತನ ಸಂಸ್ಥೆಯೊಂದರಲ್ಲಿ ಉದ್ಯೋಗ ಪಡೆದು-ಕೊಳ್ಳುವಿರಿ. ಗೃಹ ತಾಪತ್ರಯಗಳಿಂದ ಮುಕ್ತರಾಗಿ ನಿಶ್ಚಿಂತೆಯಾಗುತ್ತದೆ.

ವೃಶ್ಚಿಕ: ಕಠಿಣ ಶ್ರಮದ ಫಲವಾಗಿ ಬಯಸಿದ ಸಂತೋಷದ ಜತೆಗೆ ಹೊಸ ಅನುಭವದ ಲಾಭವು ಈ ದಿನ ನಿಮ್ಮದಾಗಲಿದೆ. ತೆರಿಗೆ ಅಧಿಕಾರಿಗಳಿಗೆ ಪ್ರಶಂಸೆಯ ಮಾತು ಇರುವುದು. ಪಿತೃ ವರ್ಗದವರ ಸಹಾಯ ಹಸ್ತ ಸಿಗುವುದು.

ಧನು: ಸರ್ಕಾರದಿಂದ ನಿವೇಶನ ಮಂಜೂರು ಮಾಡಿಸಿಕೊಳ್ಳಲು ಹಣ ಖರ್ಚು ಮಾಡ್ಡಿದ್ದಲ್ಲಿ ಸಾಧ್ಯವಾಗುತ್ತದೆ. ನಿಜ ಮಾರ್ಗದಿಂದ ಕಾರ್ಯಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರುವುದು.

ಮಕರ: ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಜೊತೆಗೆ ಉನ್ನತ ಜವಾಬ್ದಾರಿ ಸ್ಥಾನಕ್ಕೆ ವರ್ಗವಣೆಯಾಗುವುದು. ಪಿತ್ರಾರ್ಜಿತ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳ ಬೇಕಾಗಬಹುದು.

ಕುಂಭ: ಕೊಟ್ಟ ಹಣ ಹಿಂದುರುಗುವುದು ಕಷ್ಟ. ಆದ್ದರಿಂದ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ಮನೆಯವರ ಅಥವಾ ಹಿರಿಯರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ.

ಮೀನ: ಕುಟುಂಬದಲ್ಲಿ ಸಂತಸ ಹಾಗೂ ಸಮಾಧಾನ ತರಲಿದೆ. ನೂತನ ವಾಹನ ಖರೀದಿ ಯೋಗವಿದೆ. ಹೆಂಡತಿಯ ಆರೋಗ್ಯ ಸುಧಾರಿಸುತ್ತದೆ. ಹಣಕಾಸಿನ ಸಂಸ್ಥೆಗೆ ಪಾಲುದಾರರಾಗುವ ಸಾಧ್ಯತೆ ಇದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಶರಣು

ಶರಣುವೊಗು ಜೀವನರಹಸ್ಯದಲಿ ಸತ್ತ್ವದಲಿ |
ಶರಣು ಜೀವನವ ಸುಮವೆನಿಪ ಯತ್ನದಲಿ ||
ಶರಣಂತರಾತ್ಮಗಂಭೀರಪ್ರಶಾಂತಿಯಲಿ |
ಶರಣು ವಿಶ್ವಾತ್ಮದಲಿ - ಮಂಕುತಿಮ್ಮ || **945** ||

ಪದ-ಅರ್ಥ: ಶರಣವೊಗು = ಶರಣಾಗು, ಸುಮವೆನಿಪ = ಮಧುರವಾಗಿಸುವ ಹಗುರೆನಿಸುವ, ಶರಣಂತರಾತ್ಮಗಂಭೀರಪ್ರಶಾಂತಿಯಲಿ = ಶರಣು- + ಅಂತರಾತ್ಮ + ಗಂಭೀರ + ಪ್ರಶಾಂತಿಯಲಿ.

ವಾಚ್ಯಾರ್ಥ: ಜೀವನದ ರಹಸ್ಯಕ್ಕೆ, ಸತ್ವಕ್ಕೆ ಶರಣಾಗು. ಬದುಕನ್ನು ಹೂವಿನಂತೆ ಹಗುರಾಗಿಸುವ ಯತ್ನದಲ್ಲಿ, ಅಂತರಾತ್ಮದ ಗಂಭೀರ ಪ್ರಶಾಂತಿಯಲ್ಲಿ, ವಿಶ್ವಾತ್ಮದಲ್ಲಿ ಶರಣು ಹೋಗು.

ವಿವರಣೆ: ಇದು 'ಮಂಕುತಿಮ್ಮನ ಕಗ್ಗ' ದ ಕೊನೆಯ ಚೌಪದಿ. ಕೊನೆಗೆ ಮಾಡಬೇಕಾದದ್ದು ಸರ್ವಾರ್ಪಣೆ. ಅದೇ ಶರಣಾಗುವಿಕೆ. ಮಹಾಸತ್ವವೊಂದು ಇಡೀ ವಿಶ್ವವನ್ನು ಆವರಿಸಿದೆ. ಅದು ಕಣ್ಣಿಗೆ ಕಾಣದು, ಆದರೆ ಅನುಭವಕ್ಕೆ ನಿಲುಕುವುದು. ಅದೊಂದು ಅನನ್ಯವಾದ ರಹಸ್ಯ. ಅದು ಇದೆಯೋ, ಇಲ್ಲವೊ ಎಂಬುದು ಕಾಣದೆ ಹೋದರೂ, ಜನರ ಬದುಕಿನ ವಿವಿಧ ಹಂತಗಳಲ್ಲಿ ಅವರ ಅನುಭವಕ್ಕೆ ಬಂದು, ಅದೊಂದು ಸೃಷ್ಟಿಯನ್ನು ಮಾಡಿದ, ರಕ್ಷಿಸುವ, ನಿಗ್ರಹಿಸುವ ಅಪರಂಪಾರವಾದ ಶಕ್ತಿ ಇದೆ ಎಂಬುದನ್ನು ಪ್ರಪಂಚದ ಎಲ್ಲ ಧರ್ಮದ, ಚಿಂತನೆಯ ಜನ ಒಪ್ಪಿದ್ದಾರೆ. ಅದನ್ನು ಶಕ್ತಿ ಎನ್ನಿ, ಬ್ರಹ್ಮ ಎನ್ನಿ, ಪರಬ್ರಹ್ಮ, ಭಗವಂತ, ದೇವರು ಎಂದು ಯಾವ ರೀತಿಯಲ್ಲಿ ಭಾವಿಸಿದರೂ ಸರಿಯೆ. ಆ ರಹಸ್ಯವಾದ ಸತ್ವಕ್ಕೆ ನಾವು ಶರಣಾಗಬೇಕು. ಆ ಪರತತ್ವಕ್ಕೆ ಶರಣಾಗಿ ಬಾಳು ಸಾಗಿಸಿದರೆ ಅದು ಹೂವಿನಂತೆ ಹಗುರವಾದೀತು. ಯಾಕೆಂದರೆ, ನಾನು, ನನ್ನದು, ನಾನೇ ಮಾಡಿದ್ದು ಎನ್ನುವ ಅಹಂಕಾರದ ಭಾವನೆ ಬದುಕನ್ನು ಭಾರವಾಗಿಸು-ತ್ತದೆ. ನಾನು, ನನ್ನದು ಎಂದು ಹೆಮ್ಮೆ ಪಡುವುದು, ಅದನ್ನು ಕಳೆದುಕೊಂಡಾಗ ದು:ಖಪಡುವುದು, ಎರಡೂ ಭಾರವೇ. 'ಇದಂ ನ ಮಮ', ಇದಾವುದೂ ನನ್ನದಲ್ಲ. ಇದೆಲ್ಲ ಭಗವಂತನದು, ಅವನ ಕೃಪೆಯಿಂದ ನನಗೆ ಇದುದಕ್ಕಿದೆ ಎಂದುಕೊಂಡರೆ, ಪಡೆದಾಗ ಅತಿಯಾದ ಸಂತೋಷವಿಲ್ಲ, ಕಳೆದುಕೊಂಡಾಗ ಅತಿಯಾದ ದು:ಖವಿಲ್ಲ. ಆಗ ಬಾಳು ಹಗುರಾಗುತ್ತದೆ. ಬದುಕಿನುದ್ದಕ್ಕೂ ಪ್ರಪಂಚದ ಆಗುಹೋಗುಗಳಲ್ಲಿ ಗುದ್ದಾಡಿ, ಹೈರಾಣಾದ ಜೀವಕ್ಕೆ ಶಾಂತಿ ಬೇಕು. ಅದು ದೊರಕುವುದು ಹೊರಗಿನ ಪ್ರಪಂಚದಲ್ಲಲ್ಲ. ಆಗ ನಿರಾಳವಾಗಿ ಕುಳಿತು ಅಂತಃರ್ಮುಖಿಯಾಗಬೇಕು. ಮನಸ್ಸನ್ನು ಒಳಗಡೆ ತಿರುಗಿಸಿಕೊಳ್ಳಬೇಕು. ಅದನ್ನು ವಿಜಯದಾಸರು 'ಅಂತರಂಗದ ಕದವ ತೆರೆಯಿತಿಂದು. ಎಂತು ಪುಣ್ಯದ ಫಲವು ಪ್ರಾಪ್ತಿಯಾಯಿತೊ ಇಂದು" ಎನ್ನುತ್ತಾರೆ. ಹಾಗೆ ಅಂತರಂಗದ ಗಂಭೀರ ಪ್ರಶಾಂತಿಯಲ್ಲಿ ಆತ್ಮದರ್ಶನವಾದೀತು. ಹಾಗೆಯೇ ಮುಂದುವರೆದಾಗ, ನನ್ನ ಆತ್ಮ ವಿಶ್ವಾತ್ಮದ ಒಂದು ಅಂಶ ಎಂದು ಹೊಳೆದಾಗ, ನಾನು ಆ ವಿಶ್ವಾತ್ಮದ ಚೈತನ್ಯವೇ ಹೊರತು ನಿರುಪಯೋಗಿಯಾದ ವಸ್ತುವಲ್ಲ ಎಂಬ ಅರಿವಾಗುತ್ತದೆ. ಇದೇ ಆತ್ಮಸಾಕ್ಷಾತ್ಕಾರ.

ಪದಬಂಧ 5405

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಭಾವ ಕಾಲದಲ್ಲಿ ಬಂದಿರುವ ಅಕ್ಕನ ಗಂಡ (2)
3.ಪ್ರವಾಸದಲ್ಲಿ ಪಟ್ಟಿರುವ ಶ್ರಮ (3)
6.ವಿಷಯಾಸಕ್ತ ಇಲ್ಲಿದ್ದಾನೆ (3)
8.ಈ ಪರಿ, ಕರದಲ್ಲಿ ಹಿಡಿದಿರುವ ಸಾಮಾನು (4)
10.ಅತಿ ತೀಕ್ಷ್ಣವಾದುದು (3)
11.ಕಣದಲ್ಲಿ ಆಗಿರುವ ಮದುವೆ (3)
12.ಕ್ಷುದ್ರಲೋಹವನ್ನು ಚಿನ್ನವನ್ನಾಗಿ ಪರಿವರ್ತಿಸುವುದು (4)
15.ಮರದ ಬಳಿ ಕಾಣಿಸಿರುವ ಮೊಸಳೆ (3)
17.ಈತ ಕಬ್ಬಿಣದ ಕೆಲಸಗಾರ (3)
18.ಜನನಿ ನುಡಿದಿರುವ ಸತ್ಯ (2)

ಮೇಲಿಂದ ಕೆಳಕ್ಕೆ

2.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
3.ಪ್ರತಿಬಿಂಬ ಇಲ್ಲಿ ಕಾಣುತ್ತಿದೆ (3)
4.ಹತ್ತಿರಕ್ಕೊಂದು ಪರ್ಯಾಯ ಪದ (3)
5.ತೆರಿಗೆ ಅಥವಾ ತೆರ (2)
7.ತಾರ ನುಡಿಸಿದ ತಂತಿ ವಾದ್ಯ (3)
9.ಮಣ ಭಾರ ಹೊತ್ತಿರುವ ನಲ್ಲ (3)
10.ಸೇವಕನನ್ನು ಕೊನೆಗೆ ನಿಲ್ಲಿಸಿದಾಗ ಹರಡುವಿಕೆ (3)
11.ಕಲೆಸಿದ ಗೊಧಿ ಹಿಟ್ಟು (3)
13.ಎಳೆಯ ಗಿಡ ಇಲ್ಲಿದೆ (2)
14.ಹತ್ತು ವರ್ಷಗಳ ಕಾಲದ ಅವಧಿ (3)
15.ಮರದೊಳಗೆ ಸವಿಯಾದುದು ಇದೆ (3)
16.ರಜ ಇರುವಾಗಿನ ಇರುಳು (3)



5404ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿರೇಚಕ 3.ಅಧರ
4.ಸಹವಾಸ 7.ಹವೀಜ
8.ನವೀಕರಣ 10.ಪ್ರಭವ
12.ಶಬ್ದಕೋಶ 14.ಬವಣೆ
15.ಮಹಾದ್ವಾರ

ಮೇಲಿಂದ ಕೆಳಕ್ಕೆ:
1.ವಿರಹ 2.ಕಸ
3.ಅತಿಕ್ರಮಪ್ರವೇಶ
5.ಸಮಾಜಸುಧಾರಣೆ
6.ಣೆವೀ 7.ಹಣ
8.ನವ 9.ರಥ
11.ಅಂಬರ 13.ಶಮ

ಸುಡೊಕು 5791

		6					5	
		7	5		6	3		2
3	8						6	
	2					9		4
			2	4	7			
	7					5		8
		9			8		4	
4		2					8	1
	6		4		2	7		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5790 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಅಂಜು ವೀಸಾ ಅವಧಿ ವಿಸ್ತರಣೆ

ಪೇಶಾವರ (ಪಿಟಿಐ): ಪಾಕಿಸ್ತಾನಕ್ಕೆ ತೆರಳಿ ಫೇಸ್‌ಬುಕ್ ಗೆಳೆಯನನ್ನು ವರಿಸಿರುವ ಭಾರತ ಮೂಲದ ವಿವಾಹಿತ ಮಹಿಳೆ ಅಂಜು ಅವರ ವೀಸಾವನ್ನು ಅಲ್ಲಿನ ಸರ್ಕಾರ 1 ವರ್ಷ ವಿಸ್ತರಿಸಿದೆ.

ಇಸ್ಲಾಂಗೆ ಮತಾಂತರವಾಗಿರುವ 34 ವರ್ಷದ ಅಂಜು ಈಗ ಫಾತಿಮಾ ಎಂಬ ಹೆಸರಿನಿಂದ ಗುರುತಿಸಿಕೊಂಡಿದ್ದು, ಜುಲೈ 25ರಂದು ಖೈಬರ್ ಫಖ್ತುಂಕ್ವಾದ 29 ವರ್ಷದ ನಸ್ರುಲ್ಲಾ ಅವರನ್ನು ವಿವಾಹವಾಗಿದ್ದಾರೆ.

'ಅಂಜು ಮೂಲ ವೀಸಾ ಆಗಸ್ಟ್ 20ಕ್ಕೆ ಅಂತ್ಯವಾಗುತ್ತದೆ. ಈಗಾಗಲೇ ಎರಡು ತಿಂಗಳ ವಿಸ್ತರಣೆ ದೊರೆತಿತ್ತು. ಮದುವೆ ನಂತರ ವೀಸಾವನ್ನು ಒಂದು ವರ್ಷ ವಿಸ್ತರಿಸಲಾಗಿದೆ. ಪಾಕಿಸ್ತಾನದ ಎಲ್ಲ ಸಂಸ್ಥೆಗಳೂ ನಮಗೆ ಸಹಕಾರ ನೀಡುತ್ತಿವೆ' ಎಂದು ಆಕೆಯ ಪತಿ ನಸ್ರುಲ್ಲಾ ಮಂಗಳವಾರ ತಿಳಿಸಿದ್ದಾರೆ.

ದಂಪತಿಗೆ ಕಳೆದ ತಿಂಗಳು ಪಾಕಿಸ್ತಾನದ ರಿಯಲ್ ಎಸ್ಟೇಟ್ ಕಂಪನಿಯೊಂದು ಖೈಬರ್ ಫಖ್ತುಂಕ್ವಾದಲ್ಲಿ ನಿವೇಶನವನ್ನು ಉಡುಗೊರೆಯಾಗಿ ನೀಡಿತ್ತು.

ಅಂಜು ಉತ್ತರ ಪ್ರದೇಶದ ಕೈಲೋರ್‌ನವರಾಗಿದ್ದು, ಅರವಿಂದ್ ಎಂಬುವವರನ್ನು ಮೊದಲಿಗೆ ಮದುವೆಯಾಗಿದ್ದರು. ಅವರಿಗೆ 2 ಮಕ್ಕಳಿವೆ. ವಾಘಾ ಗಡಿಯ ಮೂಲಕ ಕಾನೂನು ಬದ್ಧವಾಗಿಯೇ ಜುಲೈನಲ್ಲಿ ಅವರು ಪಾಕಿಸ್ತಾನಕ್ಕೆ ತೆರಳಿದ್ದರು. ಅವರಿಗೆ ಆರಂಭದಲ್ಲಿ 30 ದಿನಗಳ ವೀಸಾ ನೀಡಲಾಗಿತ್ತು.

ಬ್ರಿಕ್ಸ್ ಸಭೆಗೆ ಮೋದಿ

ಜೊಹಾನಸ್‌ಬರ್ಗ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಇದೇ 22ರಂದು ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ದಕ್ಷಿಣ ಆಫ್ರಿಕಾ ಸರ್ಕಾರ ತಿಳಿಸಿದೆ.

ಭಾರತದ ನಾಯಕ ಸಭೆಯಲ್ಲಿ ಭಾಗಿಯಾಗುವುದಿಲ್ಲ ಎಂದು ಕೆಲ ಮಾಧ್ಯಮಗಳು ವರದಿ ಮಾಡಿರುವುದನ್ನು ಇದೇ ಸಂದರ್ಭ ಅಲ್ಲಗಳೆದಿದೆ. ಇದು ಬ್ರಿಕ್ಸ್‌ನ 15ನೇ ಆವೃತ್ತಿಯ ಶೃಂಗಸಭೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19597
ಇಂದಿನ ಅಂತ್ಯ	19570
▼	26
ದಿನದ ಗರಿಷ್ಠ	19634

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹140
ಗುಡ್ ಲಾಟ್	₹123

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹480
12 ಮೊಟ್ಟೆಗೆ	₹68

ಮೈಸೂರು

100 ಮೊಟ್ಟೆಗೆ	₹485

5 ವರ್ಷಗಳ ಅವಧಿಯ ಬೆಲೆ ಏರಿಕೆ ಕುರಿತು ಅನರಾಕ್ ಅಧ್ಯಯನ

ಐಷಾರಾಮಿ ಮನೆ ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ವರ್ಗಗಳಿಗೆ ಸೇರಿದ ಮನೆಗಳ ಪೈಕಿ ಐಷಾರಾಮಿ ವರ್ಗಕ್ಕೆ ಸೇರಿದ ಮನೆಗಳ ಬೆಲೆಯು ಕಳೆದ ಐದು ವರ್ಷಗಳ ಅವಧಿಯಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಕಂಡಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್‌ನ ಅಧ್ಯಯನ ವರದಿ ಹೇಳಿದೆ.

ದೇಶದ ಏಳು ಪ್ರಮುಖ ನಗರಗಳಲ್ಲಿ ಮೂರು ವರ್ಗಗಳಿಗೆ ಸೇರಿದ ಮನೆಗಳ ಬೆಲೆ ಏರಿಕೆಯು 2018ರಿಂದ 2023ರ ನಡುವಿನ ಅವಧಿಯಲ್ಲಿ ಪ್ರತಿ ಚದರ ಅಡಿಗೆ ಯಾವ ಪ್ರಮಾಣದಲ್ಲಿ ಆಗಿದೆ ಎಂಬುದರ ಪರಿಶೀಲನೆಯನ್ನು ಈ ಸಂಸ್ಥೆ ನಡೆಸಿದೆ. ಐಷಾರಾಮಿ ವರ್ಗಕ್ಕೆ ಸೇರಿದ, ₹1.5 ಕೋಟಿಗಿಂತ ಹೆಚ್ಚಿನ ಬೆಲೆಯ ಮನೆಗಳ ದರದಲ್ಲಿ ಸರಾಸರಿ ಶೇಕಡ 24ರಷ್ಟು ಏರಿಕೆ ಕಂಡುಬಂದಿದೆ.

₹40 ಲಕ್ಷಕ್ಕಿಂತ ಕಡಿಮೆ ಬೆಲೆಯ, 'ಕೈಗೆಟಕುವ ದರ'ದ ವರ್ಗಕ್ಕೆ ಸೇರುವ ಮನೆಗಳ ಮೌಲ್ಯದಲ್ಲಿ ಶೇ 15ರಷ್ಟು ಹೆಚ್ಚಳ ಈ ಅವಧಿಯಲ್ಲಿ ಆಗಿದೆ. ಹಾಗೆಯೇ, ಮಧ್ಯಮ ಮತ್ತು ಪ್ರೀಮಿಯಂ ವರ್ಗದ (₹40 ಲಕ್ಷಕ್ಕಿಂತ ಹೆಚ್ಚು, ₹1.5 ಕೋಟಿಗಿಂತ ಕಡಿಮೆ ಬೆಲೆಯ) ಮನೆಗಳ ದರದಲ್ಲಿ ಶೇ 18ರಷ್ಟು ಏರಿಕೆ ದಾಖಲಾಗಿದೆ ಎಂದು ಅನರಾಕ್ ವರದಿ ಹೇಳಿದೆ.

ಬೆಂಗಳೂರಿನಲ್ಲಿ ಐದು ವರ್ಷಗಳ ಅವಧಿಯಲ್ಲಿ ಕೈಗೆಟಕುವ ವರ್ಗಕ್ಕೆ ಸೇರಿದ ಮನೆಗಳ ಮೌಲ್ಯ ಹೆಚ್ಚಳವು ಶೇ 15ರಷ್ಟು ಇದೆ. ಮಧ್ಯಮ ಹಾಗೂ ಪ್ರೀಮಿಯಂ ವಿಭಾಗದ ಮನೆಗಳ ದರ ಹೆಚ್ಚಳವು ಶೇ 20ರಷ್ಟು ಇದೆ. ಐಷಾರಾಮಿ ವರ್ಗಕ್ಕೆ ಸೇರಿದ ಮನೆಗಳ ಬೆಲೆ ಏರಿಕೆಯ ಪ್ರಮಾಣವು ಶೇ 27ರಷ್ಟು ಇದೆ ಎಂದು ವರದಿಯಲ್ಲಿ ಹೇಳಲಾಗಿದೆ. ಬೆಂಗಳೂರಿನಲ್ಲಿ ಐಷಾರಾಮಿ ವರ್ಗದ ಮನೆಗಳ ಬೆಲೆಯು 2018ರಲ್ಲಿ ಪ್ರತಿ ಚದರ ಅಡಿಗೆ ₹10,210 ಆಗಿತ್ತು.

ಇದು ಈಗ ಪ್ರತಿ ಚದರ ಅಡಿಗೆ ₹12,970ಕ್ಕೆ ಹೆಚ್ಚಳ ಕಂಡಿದೆ. ಬೆಂಗಳೂರು ಮಾತ್ರವಲ್ಲದೆ ದೆಹಲಿ, ಕೋಲ್ಕತ್ತ, ಮುಂಬೈ, ಪುಣೆ, ಹೈದರಾಬಾದ್, ಚೆನ್ನೈ ನಗರಗಳನ್ನು ಅನರಾಕ್ ಸಂಸ್ಥೆಯು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿತ್ತು.

ಬೆಲೆ ಏರಿಕೆ ಹೀಗಿದೆ...



ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಿವರಾಯಪ್ಪ ಗುರುವಣ್ಣನವರ್, ಊರು ತಿಳಿಸಿಲ್ಲ

• ಪ್ರಶ್ನೆ: ನಾನು ಮ್ಯೂಚುವಲ್ ಫಂಡ್ ಹೂಡಿಕೆದಾರ. ಯಾವ ಮ್ಯೂಚುವಲ್ ಫಂಡ್ ಹೂಡಿಕೆಯು ತೆರಿಗೆ ವಿನಾಯಿತಿ ಹೊಂದಿದೆ? ಯಾವುದು ಹೂಡಿಕೆಗೆ ಉತ್ತಮ?

ಉತ್ತರ: ಮ್ಯೂಚುವಲ್ ಫಂಡ್ ಹೂಡಿಕೆಯು ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಗೆ ಪ್ರಮುಖವಾದ ಹಾಗೂ ಪರಿಣಾಮಕಾರಿ ವಿಧಾನ. ಮಾರುಕಟ್ಟೆಯು ವಿವಿಧ ಬಗೆಯ ಮ್ಯೂಚುವಲ್ ಫಂಡ್‌ಗಳಿಂದ ತುಂಬಿರುವಾಗ, ಯಾವ ಮ್ಯೂಚುವಲ್ ಫಂಡ್ ಉತ್ತಮ ಎಂಬ ಪ್ರಶ್ನೆಗೆ ನಿರ್ಣಾಯಕ ಉತ್ತರ ಹೇಳುವುದು ಸವಾಲಿನ ಕೆಲಸ. ಮಾರುಕಟ್ಟೆಯಲ್ಲಿ ಲಭ್ಯವಿರುವ ಹಲವಾರು ಫಂಡ್ ಹೌಸ್‌ಗಳ ವಿವಿಧ ವರ್ಗಗಳ ಮ್ಯೂಚುವಲ್ ಫಂಡ್ ಯೋಜನೆಗಳನ್ನು ನೋಡುವಾಗ ಯಾವುದೇ ಹೂಡಿಕೆದಾರ ಗೊಂದಲಕ್ಕೆ ಒಳಗಾಗಬಹುದಾದ ಸಾಧ್ಯತೆಗಳೇ ಹೆಚ್ಚು. ಇಂತಹ ಸನ್ನಿವೇಶದಲ್ಲಿ ಹೂಡಿಕೆ ಮಾಡಲು ಉತ್ತಮ ಮ್ಯೂಚುವಲ್ ಫಂಡ್ ಗುರುತಿಸಲು ಕೆಲವು ಸರಳ ವಿಧಾನ ಅಳವಡಿಸಿಕೊಳ್ಳಬಹುದು.

1. ನೀವು ಇರಿಸಬೇಕಾದ ಮೊದಲ ಹೆಜ್ಜೆ, ನಿಮ್ಮ ಹಣಕಾಸಿನ ಗುರಿಗಳನ್ನು ಪಟ್ಟಿ ಮಾಡುವುದು. ನಂತರ ನಿಮ್ಮ ಗುರಿಗಳನ್ನು ಸಣ್ಣ, ಮಧ್ಯಮ ಮತ್ತು ದೀರ್ಘಾವಧಿ ಗುರಿಗಳನ್ನಾಗಿ ವರ್ಗೀಕರಿಸುವುದು. ಇದಕ್ಕಾಗಿ ಮುಂದಿನ ಹಣಕಾಸು ಅಗತ್ಯ ಹಾಗೂ ಹಣದುಬ್ಬರ ಪ್ರಮಾಣವನ್ನು ಕೂಡ ಪರಿಗಣಿಸಬೇಕು.

2. ವಿಭಿನ್ನ ಮ್ಯೂಚುವಲ್ ಫಂಡ್‌ಗಳು ವಿಭಿನ್ನ ಮಟ್ಟದ ರಿಸ್ಕ್ ಹೊಂದಿರುತ್ತವೆ. ಆದ್ದರಿಂದ, ನೀವು ಹೆಚ್ಚಿನ ರಿಸ್ಕ್ ತೆಗೆದುಕೊಳ್ಳುವ (ಅಂದರೆ, ಹೂಡಿಕೆಯ ಹಣವು ನಷ್ಟವಾದರೂ ಅದನ್ನು ತಡೆದುಕೊಳ್ಳುವ ಸಾಮರ್ಥ್ಯ) ಮನಸ್ಸು ಮಾಡಿದರೆ ನೀವು ಅದೇ ವರ್ಗದ ಮ್ಯೂಚುವಲ್ ಫಂಡ್ ಹೂಡಿಕೆಯನ್ನು ಆಯ್ಕೆ ಮಾಡಬಹುದು. ಹೀಗಾಗಿ, ನಿಮ್ಮ ಪೋರ್ಟ್‌ಫೋಲಿಯೊ ನೀವು ನಿರೀಕ್ಷಿಸುವ ರಿಸ್ಕ್-ರಿಟರ್ನ್‌ಗೆ ಅನುಗುಣವಾಗಿ ಹಣವನ್ನು ಹಂಚಿಕೆ ಮಾಡುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ.

3. ಅಲ್ಪಾವಧಿಯ, ಮಧ್ಯಮ ಮತ್ತು ದೀರ್ಘಾವಧಿಯ ಹಣಕಾಸಿನ ಗುರಿಗಳನ್ನು ತಲುಪಲು ಯಾವ ರೀತಿಯ ಮ್ಯೂಚುಯಲ್ ಫಂಡ್‌ಗಳಿಗೆ ನೀವು ಎಷ್ಟು ಹಣವನ್ನು ನಿಯೋಜಿಸಬಹುದು ಎಂಬುದನ್ನು ನಿರ್ಣಯಿಸಿ. ಉದಾಹರಣೆಗೆ, ಡೆಟ್ ಫಂಡ್‌ಗಳು ಮತ್ತು ಆರ್ಬಿಟ್ರೇಜ್ ಫಂಡ್‌ಗಳು ಕಡಿಮೆ ಅಪಾಯದವು. ಇವು ಅಲ್ಪಾವಧಿಯ ಹಣಕಾಸಿನ ಗುರಿಗಳಿಗೆ ಸೂಕ್ತ. ತುರ್ತು ಉದ್ದೇಶಕ್ಕಾಗಿ ಲಿಕ್ವಿಡ್ ಫಂಡ್‌ಗಳಲ್ಲಿಯೂ ಹಣ ತೊಡಗಿಸಬಹುದು. ಅಲ್ಟ್ರಾ-ಶಾರ್ಟ್ ಅವಧಿಯ ನಿಧಿಗಳು ಮೂರು ತಿಂಗಳಿಂದ ಒಂದು ವರ್ಷದ ಅವಧಿಗೆ ಸೂಕ್ತ. ದೀರ್ಘಾವಧಿಯ ಡೆಟ್ ಫಂಡ್‌ಗಳು ಮತ್ತು ಆರ್ಬಿಟ್ರೇಜ್ ಫಂಡ್‌ಗಳು ಅಲ್ಪಾವಧಿಯ ಗುರಿಗಳಿಗೆ ಒಂದರಿಂದ ಮೂರು ವರ್ಷಗಳವರೆಗಿನ ಹೂಡಿಕೆಗೆ ಸೂಕ್ತ.

ನೀವು ಮಧ್ಯಮ ಮಟ್ಟದ ಆರ್ಥಿಕ ರಿಸ್ಕ್ ತೆಗೆದುಕೊಳ್ಳಲು ತಯಾರಾಗಿದ್ದರೆ, ಬ್ಯಾಲನ್ಸ್ಡ್ ಫಂಡ್‌ಗಳು ಉತ್ತಮ. ಇವು ಮಧ್ಯಮ ಅವಧಿಯ ಗುರಿಗಳಿಗೆ ಸೂಕ್ತ. ಹೈಬ್ರಿಡ್ ಫಂಡ್‌ಗಳು ನಿಮ್ಮ ರಿಸ್ಕ್ ಮಟ್ಟವನ್ನು ಕಡಿಮೆ ಮಾಡುವ ಶಕ್ತಿ ಹೊಂದಿವೆ. ಇನ್ನು ಈಕ್ವಿಟಿ ಆಧಾರಿತ ಫಂಡ್‌ಗಳು ನಿವೃತ್ತಿ ಯೋಜನೆಗಳಂತಹ ದೀರ್ಘಾವಧಿಯ ಗುರಿಗಳಿಗೆ ಸೂಕ್ತ. ಈ ಹೂಡಿಕೆ ಇತರ ಯೋಜನೆಗಳಿಗಿಂತ ಹೆಚ್ಚಿನ ರಿಸ್ಕ್ ಹೊಂದಿರುತ್ತವೆ.

ಫಂಡ್ ನಿರ್ವಹಣೆ ಮಾಡುವವರು ಹಿಂದೆ ನಿರ್ವಹಿಸಿದ ಮತ್ತು ಈಗ ನಿರ್ವಹಿಸುತ್ತಿರುವ ಯೋಜನೆಗಳ ಕಾರ್ಯಕ್ಷಮತೆಯನ್ನು ವಿಶ್ಲೇಷಿಸಿ ಅವರ ಹೂಡಿಕೆಯ ಗುಣಮಟ್ಟವನ್ನು ನಿರ್ಧರಿಸಬಹುದು. ಮಾರುಕಟ್ಟೆ ಕೆಳಹಂತದಲ್ಲಿದ್ದಾಗ ಅಥವಾ ಏರಿಕೆ ಹಂತದಲ್ಲಿದ್ದಾಗ, ಇತರ ಫಂಡ್‌ಗಳಿಗಿಂತ ಉತ್ತಮವಾಗಿ ಲಾಭ ನೀಡಿದ್ದರೆ ನಮ್ಮ ಆಯ್ಕೆ ಅಂತಹ ಫಂಡ್ ಆಗಿರಬೇಕು.

ಅಂತಿಮವಾಗಿ, ನೀವು ಯಾವಾಗಲೂ ವೃತ್ತಿಪರ ಹಣಕಾಸು ಸಲಹೆಗಾರರಿಂದ ವೈಯಕ್ತಿಕ ಸಲಹೆ ಪಡೆದುಕೊಳ್ಳಿ. ಹಾಗೂ ಇಂತಹ ಹೂಡಿಕೆಗಳು ವಿವಿಧ ರೀತಿಯ ಮಾರುಕಟ್ಟೆ ಅಪಾಯ ಹೊಂದಿರುವುದರಿಂದ ಆಯಾ ಹೂಡಿಕೆಯ ಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡುವ ದೀರ್ಘಾವಧಿ ಹೂಡಿಕೆಗೆ (12 ತಿಂಗಳ ಮೇಲ್ಪಟ್ಟು ಇರುವ ಹೂಡಿಕೆ) ಬರುವ ಲಾಭ ಒಂದು ಹಣಕಾಸು ವರ್ಷದಲ್ಲಿ ₹1 ಲಕ್ಷಕ್ಕಿಂತ ಕಡಿಮೆ ಇದ್ದರೆ, ಅಂತಹ ಮೊತ್ತಕ್ಕೆ ಬಂಡವಾಳ ಲಾಭ ತೆರಿಗೆ ಇರುವುದಿಲ್ಲ. ಇದಕ್ಕೂ ಮೇಲ್ಪಟ್ಟ ಲಾಭಕ್ಕೆ ಶೇ 10ರಷ್ಟು ತೆರಿಗೆ ಇದೆ. ಇದೇ ವರ್ಗದ ಅಲ್ಪಾವಧಿ ಹೂಡಿಕೆಗೆ ಶೇ 15ರಷ್ಟು ನಿಶ್ಚಿತ ತೆರಿಗೆ ಇದೆ. ಡೆಟ್ ಫಂಡ್‌ಗಳು ವೈಯಕ್ತಿಕ ತೆರಿಗೆ ದರಕ್ಕೆ ಅನುಗುಣವಾಗಿ ತೆರಿಗೆಗೆ ಒಳಪಡುತ್ತವೆ.

ಡಿ.ಎಂ. ಗಣೇಶ್, ಊರು ತಿಳಿಸಿಲ್ಲ

• ಪ್ರಶ್ನೆ: ಆರ್‌ಬಿಐ ರಿಟೇಲ್‌ನಲ್ಲಿ ಹೂಡಿಕೆ ಮಾಡಲು ಇರುವ ನಿಯಮಗಳು ಮತ್ತು ಷರತ್ತುಗಳು ಏನು? ಇಲ್ಲಿರುವ ಲಾಭದ ಬಗ್ಗೆ, ತೆರಿಗೆಯ ಬಗ್ಗೆ ತಿಳಿಸಿ

ಆರ್‌ಬಿಐ ರಿಟೇಲ್ ಹೂಡಿಕೆ ಯೋಜನೆ ಸಣ್ಣ ಹೂಡಿಕೆದಾರರಿಗೆ ಸರ್ಕಾರಿ ಬಾಂಡ್‌ಗಳಲ್ಲಿ ನೇರವಾಗಿ ಹೂಡಿಕೆ ಮಾಡಲು ಅವಕಾಶ ನೀಡುತ್ತದೆ. ಇಂತಹ ಹೂಡಿಕೆಗಳಿಗೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಭದ್ರತೆ ಇರುವುದರಿಂದ ಹೂಡಿಕೆಯ ಅಸಲು ಮರುಪಾವತಿ ಅಥವಾ ನಿಗದಿಪಡಿಸಿದ ಬಡ್ಡಿ ಪಾವತಿಯಲ್ಲಿ ಯಾವುದೇ ಸಂದೇಹ ಬೇಡ. ಇದು ಆರ್ಥಿಕ ಅಪಾಯದಿಂದ ದೂರವಿರಲು ಬಯಸುವ ಯಾವುದೇ ಹೂಡಿಕೆದಾರರಿಗೆ ಸೂಕ್ತ. ಇದರಲ್ಲಿ ಹೂಡಿಕೆ ಅವಧಿ ಭಿನ್ನವಾಗಿರುತ್ತದೆ. ಇದು ದೀರ್ಘಾವಧಿ ಹೂಡಿಕೆ. ಅವಧಿ ಪೂರ್ಣಗೊಳ್ಳುವವರೆಗೆ ಹೂಡಿಕೆಯನ್ನು ಉಳಿಸಿಕೊಂಡರೆ ನಿಗದಿತ ಅವಧಿಗೆ ಬಡ್ಡಿ ಸಿಗುತ್ತಿರುತ್ತದೆ. ಲಿಸ್ಟ್ ಆಗಿರುವ ಬಾಂಡ್‌ಗಳನ್ನು ನಮ್ಮ ಅವಕಾಶಕ್ಕೆ ತಕ್ಕಂತೆ ವಿಕ್ರಯಿಸಬಹುದು.

ಆರ್‌ಬಿಐ ರಿಟೇಲ್ ಮೂಲಕ ಹೂಡಿಕೆ ಮಾಡುವುದಾದರೆ, ಕನಿಷ್ಠ ಹೂಡಿಕೆ ಮೊತ್ತ ₹10 ಸಾವಿರ. ಈ ಪ್ರಕ್ರಿಯೆಯನ್ನು ಹೂಡಿಕೆದಾರ ಆರ್‌ಬಿಐ ರಿಟೇಲ್ ಡೈರೆಕ್ಟ್ ವೆಬ್‌ಸೈಟ್ ಮೂಲಕ ಮಾಡಬಹುದು. ಇದಕ್ಕಾಗಿ ಉಳಿತಾಯ ಖಾತೆ ಹೊಂದಿರಬೇಕು. ಆದಾಯ ತೆರಿಗೆ ಇಲಾಖೆ ನೀಡಿದ ಪ್ಯಾನ್, ಕೆವೈಸಿ ದಾಖಲೆ, ಇಮೇಲ್ ವಿಳಾಸ ಮತ್ತು ನೋಂದಾಯಿತ ಮೊಬೈಲ್ ಸಂಖ್ಯೆ ಇದಕ್ಕೆ ಅಗತ್ಯವಿರುವ ದಾಖಲೆಗಳು.

ಇಂತಹ ಅರ್ಹತಾ ಮಾನದಂಡಗಳನ್ನು ಪೂರೈಸುವ ಸಣ್ಣ ಹೂಡಿಕೆದಾರ ಖಾತೆ ತೆರೆಯಬಹುದು. ಈ ಯೋಜನೆಯ ಅಡಿಯಲ್ಲಿ, ವ್ಯಕ್ತಿಯು 'ಎನ್‌ಡಿಎಸ್ ಒಎಂ' ಎಂಬ ಆರ್‌ಬಿಐ ಪ್ಲಾಟ್‌ಫಾರಂ ವ್ಯವಸ್ಥೆಯ ಮೂಲಕ ಮಾರುಕಟ್ಟೆಯಲ್ಲಿ ನೇರ ಖರೀದಿ-ಮಾರಾಟದಲ್ಲಿ ಪಾಲ್ಗೊಳ್ಳಬಹುದು. ಆರ್‌ಬಿಐನಲ್ಲಿ 'ರಿಟೇಲ್ ಡೈರೆಕ್ಟ್ ಗಿಲ್ಟ್ ಖಾತೆ' ತೆರೆಯಲು ಮತ್ತು ನಿರ್ವಹಿಸಲು ಯಾವುದೇ ಶುಲ್ಕ ಇಲ್ಲ. ಇದಕ್ಕೆ ಬರುವ ಬಡ್ಡಿ ಇತರೆ ಆದಾಯವಾಗಿ ತೆರಿಗೆಗೊಳಪಡುತ್ತದೆ. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹200;572
ದ್ವಿತಳಿ (ಬಿ.ವಿ)	₹318;635

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,800-2,100
ಮಧ್ಯಮ	₹1,500-1,800
ಸಣ್ಣ	₹1,000-1,500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1840(1860)
ಸೋಯಾ (ರಿಫೈನ್ಡ್)	₹955(960)
ಸೂರ್ಯಕಾಂತಿ (ರಿಫೈನ್ಡ್)	₹965(970)
ಪಾಮೋಲಿನ್	₹855(863)

ಮುಂಬೈ ಧಾರಣೆ

ಶೇಂಗಾ

8-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850(1870)
ಒಂದು ವಾರದ ಡೆಲಿವರಿ	1845(1865)
ಸೋಯಾ ಕಚ್ಚಾ	900(910)
ಪಾಮ್ ವಾರದ ಡೆಲಿವರಿ	853(861)
ಸೂರ್ಯಕಾಂತಿ ಎಣ್ಣೆ ಕಚ್ಚಾ	910(910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59000(59200)
ಬೆಳ್ಳಿ ಕೆ.ಜಿ 70500(71950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

ಅರಸೀಕೆರೆ	₹8500-9550

ಅಂಬರೀಷ್ ಮೂರ್ತಿ ನಿಧನ

ನವದೆಹಲಿ (ಪಿಟಿಐ): ಪೆಪ್ಪರ್‌ಫ್ರೈ ಕಂಪನಿಯ ಸಹಸಂಸ್ಥಾಪಕ ಮತ್ತು ಅದರ ಸಿಇಒ ಅಂಬರೀಷ್ ಮೂರ್ತಿ (51) ಅವರು ಲೇಹ್‌ನಲ್ಲಿ ಹೃದಯ ಸ್ತಂಭನದಿಂದ ಮೃತಪಟ್ಟಿದ್ದಾರೆ ಎಂದು ಕಂಪನಿಯ ಸಿಒಒ ಆಶಿಶ್ ಶಾ ತಿಳಿಸಿದ್ದಾರೆ.

ಮೂರ್ತಿ ಅವರು ಕಲ್ಕತ್ತಾ ಐಐಎಂ ಹಳೆಯ ವಿದ್ಯಾರ್ಥಿ. ಅವರು ಈ ಹಿಂದೆ ಎಫ್‌ಎಂಸಿಜಿ, ಹಣಕಾಸು ಸೇವೆಗಳು ಮತ್ತು ಇಂಟರ್ನೆಟ್ ಸೇವಾ ಉದ್ಯಮದಲ್ಲಿ ಕೆಲಸ ಮಾಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು -	615

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48000
ಪುತ್ತೂರು	
ಹೊಸತು	34000-45000
ಸಾಗರ	
ಬಿಳಿಗೋಟು	31609-33989
ಚಾಲಿ	36609-39400
ಕೋಕ	35989-37499
ಕೆಂಪುಗೋಟು	37399-37899
ರಾಶಿ	48599-51649
ಸಿಪ್ಪೆಗೋಟು	15269-24689
ಶಿವಮೊಗ್ಗ	
ಬೆಟ್ಟೆ	49000-54300
ಗೊರಬಲು	15729-42111
ರಾಶಿ	39599-54699
ಸರಕು	50030-81986
ಸಿದ್ದಾಪುರ	
ಬಿಳಿಗೋಟು	32208-36899
ಚಾಲಿ	38999-42709
ಕೋಕ	30669-35899
ಕೆಂಪುಗೋಟು	30669-35499
ರಾಶಿ	45109-50969
ತಟ್ಟಿಬೆಟ್ಟೆ	39689-49699
ಶಿರಸಿ	
ಬೆಟ್ಟೆ	41898-46399
ಬಿಳಿಗೋಟು	27009-37609
ಚಾಲಿ	38199-43500
ಕೆಂಪುಗೋಟು	31629-40323
ರಾಶಿ	46518-51899
ಯಲ್ಲಾಪುರ	
ಆಪಿ	56379-71777
ಬಿಳಿಗೋಟು	26899-37512
ಚಾಲಿ	39399-42870
ಕೋಕ	18899-35812
ಕೆಂಪುಗೋಟು	30100-37099
ರಾಶಿ	48099-55009
ತಟ್ಟಿಬೆಟ್ಟೆ	40419-49290

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	14000	13900	163.95 ಸೆಂಟ್ಸ್
ಎಸಿ	7140	7000	7000	
ಆರ್‌ಪಿ	10200	10300	10275	ಲಂಡನ್
ಆರ್‌ಸಿ	6230	250	6050	2682 ಡಾಲರ್ಸ್

ಎಂಪಿಎಲ್‌ನಲ್ಲಿ ಕೆಲಸಕ್ಕೆ ಕತ್ತರಿ

ನವದೆಹಲಿ (ಪಿಟಿಐ): ಆನ್‌ಲೈನ್ ಆಟಗಳನ್ನು ಒದಗಿಸುವ ಮೊಬೈಲ್ ಪ್ರೀಮಿಯರ್ ಲೀಗ್ (ಎಂಪಿಎಲ್) ಕಂಪನಿಯು ಅಂದಾಜು 350 ಜನರನ್ನು ಕೆಲಸದಿಂದ ತೆಗೆದುಹಾಕಿದೆ. ವೆಚ್ಚಗಳನ್ನು ತಗ್ಗಿಸುವ ಉದ್ದೇಶದಿಂದ, ಆನ್‌ಲೈನ್ ಆಟಗಳಿಗೆ ಶೇ 28ರಷ್ಟು ಜಿಎಸ್‌ಟಿ ವಿಧಿಸುವುದರಿಂದ ಉಂಟಾಗುವ ಹೊರೆಯನ್ನು ನಿಭಾಯಿಸಲು ಕಂಪನಿ ಹೀಗೆ ಮಾಡಿದೆ ಎನ್ನಲಾಗಿದೆ.

ಜಿಎಸ್‌ಟಿಗೆ ಸಂಬಂಧಿಸಿದ ಹೊಸ ನಿಯಮಗಳು ತೆರಿಗೆ ಹೊರೆಯನ್ನು ಶೇ 400ರವರೆಗೂ ಹೆಚ್ಚಿಸುತ್ತವೆ. ಉದ್ಯಮವಾಗಿ ಈ ಮಟ್ಟದ ಹೆಚ್ಚಳಕ್ಕೆ ಹೊಂದಿಕೊಳ್ಳಬೇಕು ಎಂದಾದರೆ ಕೆಲವು ಕಠಿಣ ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಕಂಪನಿಯ ಸಹಸಂಸ್ಥಾಪಕ ಸಾಯಿಶ್ರೀನಿವಾಸ್ ಅವರು ಉದ್ಯೋಗಿಗಳಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ. ಈ ಕುರಿತು ಕಂಪನಿಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ಶ್ರೀಲಂಕಾದಲ್ಲಿ ಮತ್ತೆ ಅಶಾಂತಿ?

ಕೊಲಂಬೊ(ಪಿಟಿಐ): ಕಳೆದ ವರ್ಷದಂತೆಯೇ ಶ್ರೀಲಂಕಾದಲ್ಲಿ ಮತ್ತೆ ಸಾರ್ವಜನಿಕ ಅಶಾಂತಿ ಸೃಷ್ಟಿಸಲು ಕೆಲ ಗುಂಪುಗಳು ಪ್ರಯತ್ನಿಸುತ್ತಿವೆ. ಈ ಬಗ್ಗೆ ಗುಪ್ತಚರ ಇಲಾಖೆ ವರದಿ ನೀಡಿದೆ ಎಂದು ಶ್ರೀಲಂಕಾದ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಮಂಗಳವಾರ ಸಂಪುಟ ಸಭೆಯಲ್ಲಿ ವಿವರಿಸಿದ್ದಾರೆ.

'ಕೃಷಿಗೆ ನೀರಿನ ಕೊರತೆ ಎದುರಾಗಿದೆ. ಇದೇ ವಿಚಾರವನ್ನು ಮುಂದಿಟ್ಟುಕೊಂಡು ಪ್ರತಿಪಕ್ಷಗಳು ದೇಶದಲ್ಲಿ ಸಮಸ್ಯೆ ಸೃಷ್ಟಿಸಲು ಪ್ರಯತ್ನಿಸುತ್ತಿವೆ' ಎಂದು ಕ್ಯಾಬಿನೆಟ್ ವಕ್ತಾರ ಮತ್ತು ಸಚಿವ ಬಂಡುಲ ಗುಣವರ್ಧನ ಸಂಪುಟ ಸಭೆ ಬಳಿಕ ಹೇಳಿದರು.

ನೀರಿನ ವಿಚಾರವನ್ನೇ ಮುಂದಿಟ್ಟುಕೊಂಡು ಗಲಭೆ ಸೃಷ್ಟಿಸಲು ಎರಡು ಮಾಧ್ಯಮ ಸಂಸ್ಥೆಗಳು ಸಂಚು ರೂಪಿಸುತ್ತಿವೆ ಎಂದೂ ಅವರು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಿನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಚಿಕ್ಕಣ್ಣನವರು
ಕರ್ನಾಟಕ ಪ್ರದೇಶ ಕುರುಬರ ಸಂಘದ ಸದಸ್ಯರು ಹಾಗೂ ಬಿ.ಎಂ.ಟಿ.ಸಿ ನಿವೃತ್ತ ನೌಕರರು
ದಿನಾಂಕ: 8.8.2023 ರಂದು ನಿಧನರಾಗಿರುತ್ತಾರೆ. ಇವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಇವರ ಕುಟುಂಬ ವರ್ಗದವರಿಗೆ ದುಃಖ ಬರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇವೆ.
ಅಂತ್ಯಕ್ರಿಯೆ: ದಿನಾಂಕ: 9.8.2023 ಚನ್ನಪಟ್ಟಣದ ಹನುಮಂತನಗರದಲ್ಲಿ ಬೆಳಿಗ್ಗೆ 10:00 ಗಂಟೆಗೆ.
ಇಂತಿ: ಪದಾಧಿಕಾರಿಗಳು ಮತ್ತು ನಿರ್ದೇಶಕರು ಹಾಗೂ ಸಿಬ್ಬಂದಿವರ್ಗ, ಕರ್ನಾಟಕ ಪ್ರದೇಶ ಕುರುಬರ ಸಂಘ, ಗಾಂಧಿನಗರ, ಬೆಂಗಳೂರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರಯೋಜನಕಾರಿ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೊದಗಿಸಲಾಗುತ್ತದೆ. ಸಂಬಳ 16,000- 80,000. 7760014526, 7795199673
ತಕ್ಷಣ ಬೇಕಾಗಿದ್ದಾರೆ ಟಿಂಟೇಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIಪಾಸಾದವರು 16,600- 65,000/- (ವಿದ್ಯಾರ್ಹತೆಯನುಸಾರವಾಗಿ) ವಸತಿಯುಂಟು 7259552930
Multiple Vacancy
"WANTED" HOUSE KEEPING and MARKETING PERSON. Contact: 9036125566/ 9986458524
Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ 9611227266 /9611221244
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ 'ಕೊರಿಯರ್' ಸೌಲಭ್ಯವಿದೆ.8884777502, 8884777503.
ಮನೆಯಲ್ಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಕ್ಲಾಸಿಫೈಡ್ಸ್ ADMISSION CORNER
VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | ESTD.: 1997 | COMEDK CODE: E149
BE: Bachelor of Engineering
❖ Computer Science
❖ Information Science
❖ Artificial Intelligence & Machine Learning
❖ Electronics & Communication
❖ Mechanical ❖ Civil
Ph.D Program
CSE | E&C | MECH
Maths | Chemistry
Physics
VKIT
College of Pharmacy
D.Pharm
B.Pharm
M.Pharm
CET B060
Institute of Management
BCA | BCA - Hons.
BBA | BBA - Hons.
MBA | M.Com
PGCET B-323
College of Law
5 Yrs : BA - LLB | B.Com - LLB
3 Yrs : LLB
2023-24 Admissions Open
95139 53482
Admission Center: Dr.Rajkumar Road, Next to Orion Mall, Rajajinagar II Stage, Bengaluru-560055
VKIT Campus: Kumbalagodu, Kengeri, Bengaluru-560074

Wanted
ಪಠಶಾಲೆಗಾಗಿ ಇಂಗ್ಲೀಷ್ ತಿಳಿದಿರುವ ಸ್ವಾಗತಕಾರರು (Receptionist) ಬೇಕಾಗಿದ್ದಾರೆ. ಖುದ್ದಾಗಿ ಬೆಳಿಗ್ಗೆ 10ಗಂಟೆಯೊಳಗೆ ಸಂಪರ್ಕಿಸಿ. ವಿಳಾಸ: ಶ್ರೀಮಲ್ ಹೊಟೇಲ್(ಲಾಡ್ಜ್), ಕಬ್ಬನ್ ಪೇಟೆ ಮುಖ್ಯರಸ್ತೆ, ಮೈಸೂರು ಬ್ಯಾಂಕ್ ಸರ್ಕಲ್ ಹತ್ತಿರ, ಬೆಂಗಳೂರು-02. 080-22215903

ಭವಿಷ್ಯ
Astrology
ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಐರಿತ್ತ. ಕೃಷ್ಣಪ್ರಸಾದ್,ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು,ಶ್ರೀಕ್ಷೇತ್ರ ಧರ್ಮಸ್ಥಳ:9880788899
ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರು ನಿಮ್ಮನ್ನು ಅಗಲು, ಮದುವೆಯಲ್ಲಿ ಅಡೆತಡೆ, ಸ್ತ್ರೀ-ಪುರುಷ ವಶೀಕರಣ, ನಿಮ್ಮ ಎಲ್ಲಾ ಸಮಸ್ಯೆಗಳಿಗೆ 1750ರಲ್ಲಿ ಪರಿಹಾರ 9945566330
ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮವರಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9448687421

ಪ್ರವಾಸ
Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್4/9 ನೇಪಾಳ ಮುಕ್ತಿನಾಥ್, ಪಶುಪತಿನಾಥ. 29/8 ಶಿರಡಿ 3 ಜ್ಯೋತಿರ್ಲಿಂಗ.17/8 ಪುರಿ ಜಗನ್ನಾಥ್ 9964527782, 9591017782

Travel
ಡೆಹಲಿ ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್ ಬದರಿನಾಥ್,ಹರಿದ್ವಾರ್ 27.09.2023 02.10.2023 04.10.2023 ರಿಂದ 14 ದಿನಗಳು. ಪುರಿ,ಕೋಣಾರ್ಕ್ ಕಾಶಿ,ಗಯಾ, ಪ್ರಯಾಗ,ನೈಮಿಶಾರಣ್ಯ 27.09.202302.10.2023 04.10.2023 26.10.2023 ರಿಂದ 10 ದಿನಗಳು. ಸೋಮನಾಥ್,ದ್ವಾರಕಾ ಉಜ್ಜಯಿನಿ,ಓಂಕಾರೇಶ್ವರ ಮತ್ಸ್ಯಗಂಧಾ,ಬಿಮಾಶಂಕರ್ ತ್ರಯಂಬಕೇಶ್ವರ್ 02.10.2023 26.10.2023 22.11.2023 ರಿಂದ 15/10 ದಿನಗಳು. ವಿಜಯವಾಡ,ವಾಸವಿಪೆನುಗೊಂಡ ಅನ್ನವರಂ,ಬುರಾಂಕವಲ್ಸ್ ವಿಶಾಖಪಟ್ಟಣ 01.10.202330.10.2023 22.11.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚಕ್ರ ಟ್ರಾವೆಲ್ಸ್ ಚಾಮರಾಜಪೇಟೆ ಬೆಂಗಳೂರು.18
31.8.2023 ನೇಪಾಳ್, ಮುಕ್ತಿನಾಥ, ಕಾಶಿ. 6.9.2023 ಕಾಶಿ, ಅಯೋಧ್ಯ, ಗಯಾ, ಪ್ರಯಾಗ್‌ರಾಜ್, ಕರ್ನಾಟಕ ಹೌಸಿಂಗ್ ಟೂರ್ಸ್ (ಹನುಮಂತನಗರ) 9482435755, 9845035349
20.9.2023 ರೈಲಿನಲ್ಲಿ 6 ದಿನಗಳು ಕಾಶಿ, ಗಯಾ, ಭುವನೇಶ್ವರ್, ಅಯೋಧ್ಯ, ತ್ರಿವೇಣಿ ಸಂಗಮ ರೂ.10,000. ವಿಶ್ವತೀರ್ಥಟ್ರಾವೆಲ್ಸ್. 9742108991, 7795238951.
19.09.2023 17.11.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 11.11.2023 29.11.2023 ನೇಪಾಳ 9 ದಿನಗಳು. 11.09.2023 09.10.2023 17.11.2023 ಶ್ರೀಲಂಕಾ 6 ದಿನಗಳು. 19.09.2023 06.10.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 11.09.2023 09.10.2023 ಗುಜರಾತ್ 8 ದಿನಗಳು. 13.10.2023 25.11.2023 ರಾಜಸ್ಥಾನ್ 9 ದಿನಗಳು. 07.10.2023 11.11.2023 ಡೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ, ಬೆಂಗಳೂರು.03 9448402248 7022547922
20.09.2023 ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್ ಬದರಿನಾಥ್,ಹರಿದ್ವಾರ್. 22.11.2023 ವಿಜಯವಾಡ ಪೆನುಗೊಂಡ ವಾಸವಿಪೆನುಗೊಂಡ ಅನ್ನವರಂ ಶ್ರೀಕೂರ್ಮಂ ಗಂಗಾಸಾಗರ್ ಪುರಿಜಗನ್ನಾಥ್ ಕೋಣಾರ್ಕ್,ಭುವನೇಶ್ವರ್. 11.12.2023 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಮಹಾರಾಷ್ಟ್ರ,ಮಧ್ಯಪ್ರದೇಶ ಗುಜರಾತ್ ಸಂಪರ್ಕಿಸಿ: ವಿಶ್ವನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 9342287551 8050629305
ಶಿಕ್ಷಣ
ನಿಮ್ಮ ಜಾಹೀರಾತು ನೀಡಲಿಕ್ಕಾಗಿ ಸಂಪರ್ಕಿಸಿ: 9845114560

ಪ್ರಜಾವಾಣಿ ರಿಯಲ್ ಎಸ್ಟೇಟ್
BOOK YOUR PROPERTY AD IN PRAJAVANI ALL KARNATAKA ON FRIDAY + SATURDAY + SUNDAY
@ 960/-* Per Sqcm Single Column
@ 1000/-* Per Sqcm Multi Column
*conditions apply
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560 | 9731810277
9901641752 | 9886213331
080- 45557163 | 45557164

ಅವಿಶ್ವಾಸ: ಚರ್ಚೆ ಆರಂಭಿಸದ ರಾಹುಲ್ ಗಾಂಧಿ– ಕೆಣಕಿದ ಪ್ರಲ್ಹಾದ ಜೋಶಿ

ಕಾಂಗ್ರೆಸ್–ಬಿಜೆಪಿ ವಾಗ್ಯುದ್ಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧದ ಅವಿಶ್ವಾಸ ನಿರ್ಣಯ ಮೇಲಿನ ಚರ್ಚೆ ವೇಳೆ ರಾಹುಲ್ ಗಾಂಧಿ ಅವರು ಮೊದಲು ಮಾತು ಆರಂಭಿಸದ ಕುರಿತು ಸಚಿವ ಪ್ರಲ್ಹಾದ ಜೋಶಿ ಅವರು ಕಾಂಗ್ರೆಸ್ ಪಕ್ಷವನ್ನು ಮಂಗಳವಾರ ಕೆಣಕಿದ್ದು, ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ತೀವ್ರ ವಾಗ್ವಾದಕ್ಕೆ ಕಾರಣ ವಾಯಿತು.

ಕಾಂಗ್ರೆಸ್ ಸಂಸದ ಗೌರವ್ ಗೊಗೋಯಿ ಅವರು ಅವಿಶ್ವಾಸ ನಿರ್ಣಯ ಕುರಿತು ಚರ್ಚೆ ಆರಂಭಿಸಲು ಎದ್ದು ನಿಂತರು.

ಆಗ ಮಾತನಾಡಿದ ಸಚಿವ ಜೋಶಿ, 'ಐದು ನಿಮಿಷಗಳಲ್ಲಿ ಏನಾಯಿತು ಸರ್? ಸಮಸ್ಯೆ ಏನು? ರಾಹುಲ್ ಗಾಂಧಿ ಅವರ ಮಾತುಗಳನ್ನು ಕೇಳಲು ನಾವು ಉತ್ಸುಕರಾಗಿದ್ದೇವೆ' ಎಂದು ಗೊಗೋಯಿ ಅವರ ಕಾಲೆಳೆದರು.

'ಗೊಗೋಯಿ ಬದಲಾಗಿ ರಾಹುಲ್ ಗಾಂಧಿ ಅವರೇ ಚರ್ಚೆಯನ್ನು ಆರಂಭಿಸುವರು ಎಂದು ಸ್ಪೀಕರ್ ಕಚೇರಿಗೆ ಮಾಹಿತಿ ನೀಡಲಾಗಿತ್ತು. ಹೀಗಾಗಿ ಈ ಪ್ರಶ್ನೆ ಮುಂದಿಡುತ್ತಿದ್ದೇನೆ' ಎಂದರು. ಈ ಮಾತಿಗೆ ಕಾಂಗ್ರೆಸ್ ಸಂಸದರು ಆಕ್ಷೇಪಿಸಿದರು.

'ಸ್ಪೀಕರ್ ಅವರೆ, ನಿಮ್ಮ ಕಚೇರಿಯಲ್ಲಿ ಏನು ನಡೆಯುತ್ತದೆ ಹಾಗೂ ಯಾವ ರೀತಿಯ ಮನವಿಗಳನ್ನು ಸ್ವೀಕರಿಸಲಾಗುತ್ತದೆ ಎಂಬುದನ್ನು ಬಹಿರಂಗಪಡಿಸಬೇಕೆ? ನಿಮ್ಮ ಕಚೇರಿಯಲ್ಲಿ ಪ್ರಧಾನಿ ಏನು ಹೇಳಿದರು ಎಂಬುದನ್ನೂ ಹೇಳಬೇಕೆ?' ಎಂದು ಗೊಗೋಯಿ ಹೇಳಿದರು.

ಗೃಹ ಸಚಿವ ಅಮಿತ್ ಶಾ, 'ಖಚಿತವಲ್ಲದ ಹೇಳಿಕೆ ನೀಡ ಬಾರದು' ಎಂದರು.

ಸ್ಪೀಕರ್ ಓಂ ಬಿರ್ಲಾ ಮಾತನಾಡಿ, 'ನನ್ನ ಕಚೇರಿ ಕೂಡ ಸದನದ ಭಾಗವೇ ಆಗಿದೆ. ಆಧಾರರಹಿತ ಹೇಳಿಕೆ ನೀಡಬೇಡಿ' ಎಂದು ಸೂಚಿಸಿದರು.

ಬುಧವಾರದ ಕಲಾಪದಲ್ಲೂ ರಾಹುಲ್ ಗಾಂಧಿ ಮಾತನಾಡ ದಿದ್ದಲ್ಲಿ, ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯ ಕೊನೆಯ ದಿನವಾದ ಗುರುವಾರ ರಾಹುಲ್ ಹಾಗೂ ಮೋದಿ ಮುಖಾಮುಖಿಯಾಗಲಿದ್ದಾರೆ.

'ರಾಹುಲ್ ಅವರು ಬುಧವಾರ ಪಕ್ಷದ ಕಾರ್ಯತಂತ್ರದಲ್ಲಿ ಪಾಲ್ಗೊಳ್ಳುವರು. ಅವಿಶ್ವಾಸ ನಿರ್ಣಯ ಕುರಿತು ರಾಹುಲ್ ಮಾತನಾಡುವ ಬಗ್ಗೆ ಪಕ್ಷದ ನಿರ್ಧರಿಸಿದಲ್ಲಿ, ಅವರು ದೆಹಲಿಗೆ ಕೂಡಲೇ ವಾಪಸಾಗುವರು' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಲೋಕಸಭೆಯಲ್ಲಿ ಮಂಗಳವಾರ ಅವಿಶ್ವಾಸ ನಿರ್ಣಯ ಕುರಿತ ಚರ್ಚೆ ವೇಳೆ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಮಾತನಾಡಿದರು –ಪಿಟಿಐ ಚಿತ್ರ

ಸಂಸತ್ ಟಿ.ವಿ ಗದ್ದಲ!

ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ನಡೆಯುತ್ತಿದ್ದ ವೇಳೆ ಸಂಸತ್ ಟಿ.ವಿಯಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಸಾಧನೆಗಳನ್ನು ಬಿತ್ತರಿಸಲಾಯಿತು. ಇದರ ವಿರುದ್ಧ ವಿರೋಧ ಪಕ್ಷಗಳ ಸದಸ್ಯರು ಕೆಂಡಾಮಂಡಲವಾದರು.

ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸಾರಕ್ಕೆ ತೀವ್ರ ಆಕ್ಷೇಪವ್ಯಕ್ತಪಡಿಸಿದ ಸದಸ್ಯರು, ಸ್ಪೀಕರ್ ಪೀಠದ ಮುಂದೆ ಧಾವಿಸಿ ಪ್ರತಿಭಟನೆಗೂ ಮುಂದಾದರು. ಇದರಿಂದ ಕೆಲಕಾಲ ಕೋಲಾಹಲ ಉಂಟಾಯಿತು. ಬಳಿಕ, ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಮಾತನಾಡಲು ಮುಂದಾದಾಗ ಕಾಂಗ್ರೆಸ್, ಟಿಎಂಸಿ ಹಾಗೂ ಡಿಎಂಕೆ ಸದಸ್ಯರಿಂದ ವಿರೋಧ ವ್ಯಕ್ತವಾಯಿತು. ಕೊನೆಗೆ, ಸ್ಪೀಕರ್ ಓಂ ಬಿರ್ಲಾ ಅವರು, ವಿರೋಧ ಪಕ್ಷದ ಸದಸ್ಯರನ್ನು ಸಮಾಧಾನಪಡಿಸಿದರು. ಬಿರ್ಲಾ ಅವರ ಸೂಚನೆಯ ಬಳಿಕ ಟಿ.ವಿ ಪರದೆಯಲ್ಲಿ ಸರ್ಕಾರಿ ಕಾರ್ಯಕ್ರಮಗಳ ಪ್ರಸಾರಕ್ಕೆ ತಡೆಬಿದ್ದಿತು.

ಹನುಮಾನ್ ಚಾಲೀಸಾ ಪಠಣ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಪುತ್ರ, ಸಂಸದ ಶ್ರೀಕಾಂತ್ ಶಿಂದೆ ಮಂಗಳವಾರ ಲೋಕಸಭೆಯಲ್ಲಿ ಹನುಮಾನ್ ಚಾಲೀಸಾ ಪಠಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡಿದ್ದ ಅವರು, 'ಮಹಾರಾಷ್ಟ್ರದಲ್ಲಿ 2019 ರಲ್ಲಿ ಶಿವಸೇನಾ–ಬಿಜೆಪಿ ಮೈತ್ರಿಕೂಟಕ್ಕೆ ಜನರು ಬಹುಮತ ನೀಡಿದ್ದರು. ಆದರೆ ಉದ್ಧವ್ ಠಾಕ್ರೆ ಅವರು ಕಾಂಗ್ರೆಸ್, ಎನ್‌ಸಿಪಿ ಜೊತೆ ಸೇರುವ ಮೂಲಕ ಮತದಾರರಿಗೆ ಅನ್ಯಾಯ ಮಾಡಿದರು. ಮುಖ್ಯಮಂತ್ರಿಯಾಗ ಬೇಕೆಂಬ ಉದ್ದೇಶದಿಂದ ಬಾಳಾ ಸಾಹೇಬ್ ಸಿದ್ಧಾಂತ ತಮ್ಮ ಹಿಂದುತ್ವ ಸಿದ್ಧಾಂತವನ್ನು ಗಾಳಿಗೆ ತೂರಿದರು' ಎಂದು ಆರೋಪಿಸಿದರು.

'ಜನರು ಹನುಮಾನ್ ಚಾಲೀಸಾ ಪಠಿಸುವುದನ್ನು ತಡೆಯಲಾಗುತ್ತಿತ್ತು. ನನಗೆ ಚಾಲೀಸಾ ಗೊತ್ತಿದೆ' ಎಂದು ಹೇಳಿ ಪಠಿಸಲು ಆರಂಭಿಸಿದರು. ಆಗ 'ಮಾತು ಮುಂದುವರಿಸುವಂತೆ ಸ್ಪೀಕರ್ ಸೂಚಿಸಿದ್ದರಿಂದ ಅರ್ಧಕ್ಕೆ ನಿಲ್ಲಿಸಿದರು.

'ಇಂಡಿಯಾ': ಮೋದಿ ಮತ್ತೆ ವಾಗ್ದಾಳಿ

ನವದೆಹಲಿ (ಪಿಟಿಐ): 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳ ನಡುವೆ ಎಷ್ಟರ ಮಟ್ಟಿಗೆ ವಿಶ್ವಾಸ ಇದೆ ಎಂಬುದನ್ನು ಪರಿಶೀಲಿಸಲು ಹಚ್ಚುವ ಸಲುವಾಗಿ ವಿರೋಧ ಪಕ್ಷಗಳು ತಮ್ಮ ನೇತೃತ್ವದ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದ್ದಾರೆ.

ಬಿಜೆಪಿ ಸಂಸದೀಯ ಸಭೆಯಲ್ಲಿ ಮಾತನಾಡಿದ ಅವರು, ತನ್ನ ಅಂಗ ಪಕ್ಷಗಳ ನಡುವಿನ ಅಪನಂಬಿಕೆಯೇ 'ಇಂಡಿಯಾ'ದ ವೈಶಿಷ್ಟ್ಯ ಎಂದೂ ಟೀಕಿಸಿದರು.

ಸರ್ಕಾರಿ ಬಂಗಲೆ ಮರಳಿ ಪಡೆದ ರಾಹುಲ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವ ಮರುಸ್ಥಾಪನೆಯಾದ ಬೆನ್ನಲ್ಲೇ ತುಘಲಕ್ ರಸ್ತೆಯ ಸರ್ಕಾರಿ ಬಂಗಲೆಯನ್ನು ಮತ್ತೆ ಅವರಿಗೆ ಹಂಚಿಕೆ ಮಾಡಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದರು.

'ಮೋದಿ ಉಪನಾಮ' ಕುರಿತ ಹೇಳಿಕೆಗೆ ಸಂಬಂಧಿಸಿದ ಮಾನ ನಷ್ಟ ಪ್ರಕರಣದಲ್ಲಿ ಸೂರತ್‌ನ ನ್ಯಾಯಾಲಯ ರಾಹುಲ್ ಅವರಿಗೆ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿದ ನಂತರ ಅವರು ಸಂಸದ ಸ್ಥಾನದಿಂದ ಅನರ್ಹಗೊಂಡಿದ್ದರು. ಬಳಿಕ ಬಂಗಲೆ ಖಾಲಿ ಮಾಡುವಂತೆ ಸೂಚಿಸಲಾಗಿತ್ತು. ಅದರಂತೆ ಏಪ್ರಿಲ್‌ನಲ್ಲಿ ಬಂಗಲೆ ಖಾಲಿ ಮಾಡಿದ್ದರು. ಸೂರತ್ ನ್ಯಾಯಾಲಯದ ತೀರ್ಪಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆ ನೀಡಿದ್ದರಿಂದ ರಾಹುಲ್ ಸದಸ್ಯಮರು ಸ್ಥಾಪಿಸಲಾಗಿದೆ.

ಬಂಗಲೆ ಮತ್ತೆ ನೀಡಿದ ಕುರಿತು ಪ್ರತಿಕ್ರಿಯಿಸಿದ ರಾಹುಲ್ ಗಾಂಧಿ, 'ಇಡೀ ದೇಶವೇ ನನ್ನ ಮನೆ' ಎಂದು ಹೇಳಿದ್ದಾರೆ.

ವಯನಾಡ್: 12ಕ್ಕೆ ರಾಹುಲ್ ಭೇಟಿ

ಸಂಸತ್ ಸದಸ್ಯತ್ವ ಮರುಸ್ಥಾಪನೆಯಾದ ಬಳಿಕ ಮೊದಲ ಬಾರಿಗೆ ಕಾಂಗ್ರೆಸ್ ನಾಯಕ ಹಾಗೂ ಸಂಸದ ರಾಹುಲ್ ಗಾಂಧಿ ಅವರು, ಆಗಸ್ಟ್ 12 ಮತ್ತು 13ರಂದು ಸ್ವಕ್ಷೇತ್ರವಾದ ಕೇರಳದ ವಯನಾಡ್‌ಗೆ ಭೇಟಿ ನೀಡಲಿದ್ದಾರೆ.

'ಕೈ' ವಿರುದ್ಧ ವಾಗ್ದಾಳಿಯೇ ಕಾರ್ಯಸೂಚಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿರೋಧಪಕ್ಷಗಳು ಮಂಡಿಸಿರುವ ಅವಿಶ್ವಾಸ ನಿರ್ಣಯದ ಮೇಲೆ ಮಂಗಳವಾರ ಚರ್ಚೆಯನ್ನು ಆರಂಭಿಸಿದ ಆಡಳಿತಪಕ್ಷದ ಸದಸ್ಯರು ಕಾಂಗ್ರೆಸ್ ಪಕ್ಷದ ನಾಯಕತ್ವವನ್ನೇ ಪ್ರಮುಖವಾಗಿ ಗುರಿಯಾಗಿಸಿ ತೀವ್ರ ವಾಗ್ದಾಳಿ ನಡೆಸಿದರು.

ಬೆಳಿಗ್ಗೆ ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಪ್ರಧಾನಿ ಮೋದಿ ಅವರು, '2024ರ ಲೋಕಸಭೆ ಚುನಾವಣೆಗೂ ಮೊದಲು 'ಸಿಕ್ಸರ್' ಬಾರಿಸಬೇಕು' ಎಂದು ಕರೆ ನೀಡಿದ್ದರು.

ಇದರಿಂದ ಪ್ರೇರೇಪಿತರಾದಂತೆ ಬಿಜೆಪಿ ಸದಸ್ಯರು ಕಾಂಗ್ರೆಸ್ ವಿರುದ್ಧ ವಾಕ್ಸಮರಕ್ಕಿಳಿದರು.

ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿದ್ದ ಪ್ರಧಾನಿ ಅವರು, 'ವಂಶಾಡಳಿತ ರಾಜಕಾರಣವನ್ನು ರಕ್ಷಿಸಲು ಹಾಗೂ ಭ್ರಷ್ಟಾಚಾರದ ಆರೋಪಗಳಿಂದ ಮುಕ್ತವಾಗಲು 'ಇಂಡಿಯಾ'ದ ಮೈತ್ರಿಪಕ್ಷಗಳು ಈಗ ಒಟ್ಟಾಗಿವೆ' ಎಂದು ಆರೋಪಿಸಿದ್ದರು.

ಕಾಂಗ್ರೆಸ್ ಪಕ್ಷದ ಗೌರವ್ ಗೊಗೋಯಿ ನಿರ್ಣಯ ಕುರಿತು ಚರ್ಚೆಯನ್ನು ಆರಂಭಿಸಿದರು.

ಬಳಿಕ ಆಡಳಿತ ಪಕ್ಷದ ಪರವಾಗಿ ಮೊದಲಿಗೆ ಮಾತನಾಡಿದ ಬಿಜೆಪಿ ಸದಸ್ಯ ನಿಶಿಕಾಂತ್ ದುಬೆ, ನೇರವಾಗಿ ಸೋನಿಯಾಗಾಂಧಿ ಅವರನ್ನೇ ಟೀಕಿಸಿದರು.

ಈ ಅವಿಶ್ವಾಸ ನಿರ್ಣಯವನ್ನು 'ಬಡಜನರಿಗಾಗಿ ಕೆಲಸ ಮಾಡುತ್ತಿರುವ ಬಡವರ ಮಗನ ವಿರುದ್ಧ ತರಲಾಗಿದೆ' ಎಂದರು.

'ಸೋನಿಯಾ ಗಾಂಧಿ ಅವರಿಗೆ ಭಾರತೀಯ ನಾರಿಗಿರುವ ಎಲ್ಲ ಗುಣ-ಲಕ್ಷಣಗಳು ಇವೆ. ಇದನ್ನೇ ಗಮನ-ದಲ್ಲಿಟ್ಟು ಹೇಳುವುದಾದರೆ, ಅವರಿಗೆ ತಮ್ಮ ಮಗನಿಗೆ ರಾಜಕೀಯ ನೆಲೆ ಒದಗಿಸುವುದು, ಅಳಿಯನಿಗೆ ಕೊಡುಗೆ ನೀಡುವುದೇ ಆದ್ಯತೆಯಾಗಿದೆ' ಎಂದು ವ್ಯಂಗ್ಯವಾಡಿದರು.

ಆಡಳಿತ ಪಕ್ಷದ ಸದಸ್ಯರ ಭಾಷಣದಲ್ಲಿ ಪ್ರಮುಖವಾಗಿ 'ಇಂಡಿಯಾ' ಮೈತ್ರಿಪಕ್ಷಗಳ ಮುಖಂಡರ ಸ್ವಜನಪಕ್ಷಪಾತ, ಭ್ರಷ್ಟಾಚಾರದ ಉಲ್ಲೇಖವಿತ್ತು.

ಕೇಂದ್ರ ಸಚಿವರಲ್ಲದೇ ನಾರಾಯಣ ರಾಣೆ, ಸುನಿತಾ ದುಗ್ಗಲ್ ಹಾಗೂ ಎನ್‌ಡಿಎ ಮೈತ್ರಿಪಕ್ಷಗಳಾದ ಶಿವಸೇನೆಯ (ಶಿಂದೆ ಬಣ) ಶ್ರೀಕಾಂತ್ ಶಿಂದೆ, ಪಕ್ಷೇತರ ಸದಸ್ಯ ನವನೀತ್ ರಾಣಾ, ಅವರೂ ಮಾತನಾಡಿದರು.

ಎನ್‌ಡಿಎಯ ಮುಖ್ಯ ಭಾಷಣಕಾರ ಬಿಜೆಪಿಯ ಕಿರಣ್ ರಿಜಿಜು ಅವರು ಮಾತನಾಡಿದರು.

ನಿರ್ಣಯದ ಮೇಲೆ ಮಾತನಾಡಲು ಎನ್‌ಡಿಎ ಪಕ್ಷಗಳ 15 ಸದಸ್ಯರಿಗೆ ಅವಕಾಶವಿದ್ದು, ಆರು ಗಂಟೆ ಅವಧಿಯನ್ನು ಮೀಸಲಿರಿಸಲಾಗಿದೆ.

ಪೀಯೂಷ್ ವಿರುದ್ಧ ಹಕ್ಕುಚ್ಯುತಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಅಸಂಸದೀಯ ಪದ'ಗಳನ್ನು ಬಳಸಿದ್ದಕ್ಕಾಗಿ ರಾಜ್ಯಸಭೆ-ಯಲ್ಲಿ ಸದನ ನಾಯಕ ಪೀಯೂಷ್ ಗೋಯಲ್ ವಿರುದ್ಧ ವಿಪಕ್ಷಗಳ ಹಲವು ನಾಯಕರು ಹಕ್ಕು ಚ್ಯುತಿ ಮಂಡಿಸಿದರು.

ಗೋಯಲ್ ಹೇಳಿಕೆ ಪ್ರಸ್ತಾಪಿಸಿ ಗದ್ದಲ ನಡೆಸಿ ವಿರೋಧ ಪಕ್ಷಗಳು, ಸಭಾತ್ಯಾಗ ನಡೆಸಿದವು. ಇದೇ ವಿಚಾರವಾಗಿ ಎರಡು ಬಾರಿ ಸದನವನ್ನು ಮುಂದೂಡಲಾಯಿತು. ಈ ನಡುವೆ ಮಾತನಾಡಿದ ಗೋಯಲ್, 'ನಾನು ಬಳಸಿದ ಪದಗಳಲ್ಲಿ ಅಸಂಸದೀಯವಾದವು ಇದ್ದಲ್ಲಿ, ಅವುಗಳನ್ನು ಹಿಂಪಡೆಯುವೆ. ಅಂತಹ ಪದಗಳಿದ್ದಲ್ಲಿ ಕಡತದಿಂದ ತೆಗೆಯಬೇಕು' ಎಂದರು. 'ಕಡತಗಳನ್ನು ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳುವೆ' ಎಂಬ ಸಭಾಪತಿ ಧನಕರ್ ಅವರ ಮಾತಿನಿಂದ ತೃಪ್ತರಾಗದ ವಿಪಕ್ಷಗಳ ನಾಯಕರು, ಗೋಯಲ್ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದರು.

ಕಾಂಗ್ರೆಸ್, ಟಿಎಂಸಿ ಸೇರಿದಂತೆ ಇತರ ಪಕ್ಷಗಳ ಸಂಸದರು ಹಕ್ಕುಚ್ಯುತಿ ನೋಟಿಸ್‌ಗೆ ಸಹಿ ಹಾಕಿದ್ದಾರೆ.

'ನ್ಯೂಸ್‌ಕ್ಲಿಕ್' ಪೋರ್ಟಲ್ ಹಣಕಾಸು ನೆರವು ಪಡೆದಿದೆ ಎಂದು ಆರೋಪಿಸಿ 'ನ್ಯೂಯಾರ್ಕ್ ಟೈಮ್ಸ್'ನಲ್ಲಿ ಪ್ರಕಟವಾಗಿದ್ದ ವರದಿ ಪ್ರಸ್ತಾಪಿಸಿ ಮಾತನಾಡಿದ್ದ ಗೋಯಲ್, 'ನ್ಯೂಸ್ ಕ್ಲಿಕ್' ಹಾಗೂ ವಿರೋಧ ಪಕ್ಷಗಳ ನಡುವಿನ ಸಂಬಂಧವನ್ನು ಪ್ರಶ್ನಿಸಿದ್ದರು.

ನಾಟಕೀಯ ಬೆಳವಣಿಗೆ: ಅಶಿಸ್ತಿನ ವರ್ತನೆ ತೋರಿದ್ದಕ್ಕಾಗಿ ಟಿಎಂಸಿ ಸಂಸದ ಡೆರೆಕ್ ಒಬ್ರಿಯಾನ್ ಅವರನ್ನು ಸದನದಿಂದ ಅಮಾನತು ಮಾಡುತ್ತಿರುವುದಾಗಿ ಮಂಗಳವಾರ ಬೆಳಿಗ್ಗೆ ಸಭಾಪತಿ ಧನಕರ್ ಘೋಷಿಸಿದ್ದರು. ಮಧ್ಯಾಹ್ನ ವೇಳೆಗೆ ಒಬ್ರಿಯಾನ್ ವರ್ತನೆ ಕುರಿತು ಸದಸ್ಯರ ಅಭಿಪ್ರಾಯ ಪಡೆದ ಧನಕರ್, 'ಒಬ್ರಿಯಾನ್ ಅವರನ್ನು ಅಮಾನತುಗೊಳಿಸುವ ನಿರ್ಣಯವನ್ನು ಮತಕ್ಕೆ ಹಾಕದಿರಲು ತೀರ್ಮಾನಿಸಲಾಗಿದೆ. ಹೀಗಾಗಿ ಅವರು ಕಲಾಪಕ್ಕೆ ಹಾಜರಾಗಬಹುದು' ಎಂದು ಪ್ರಕಟಿಸಿದರು.

ಸ್ಪೀಕರ್ ಭೇಟಿ: 'ನ್ಯೂಯಾರ್ಕ್ ಟೈಮ್ಸ್' ಪ್ರಕಟಿಸಿದ್ದ ವರದಿ ಕುರಿತ ಚರ್ಚೆ ವೇಳೆ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರ ಹೇಳಿಕೆಯನ್ನು ಕಡತದಿಂದ ತೆಗೆದುಹಾಕದ ಕ್ರಮ ವಿರೋಧಿಸಿದ ಕಾಂಗ್ರೆಸ್ ಸಂಸದರು, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾಗಿ ಅಸಮಾಧಾನ ವ್ಯಕ್ತಪಡಿ-ಸಿದರು.

ಲೋಕಸಭೆ: ಮಣಿಪುರ ಚರ್ಚೆ ಬಿರುಸು

ಒಂದನೇ ಪುಟದಿಂದ...

ಅವಿಶ್ವಾಸ ಮಂಡಿಸಿದ ಕಾಂಗ್ರೆಸ್‌ನ ಉಪ ಸಭಾನಾಯಕ ಗೌರವ್ ಗೊಗೋಯಿ ಅವರಿಂದಲೇ ಚರ್ಚೆ ಆರಂಭವಾಯಿತು.

'ಕಣಿವೆ ರಾಜ್ಯದ ಸಂಘರ್ಷ ಕುರಿತು ಮೋದಿ ಅವರು ಮೌನವ್ರತಕ್ಕೆ ಜಾರಿದ್ದಾರೆ. ಸಂಸತ್‌ನಲ್ಲಿಯೇ ಅವರ ಮೌನ ಮುರಿಯಬೇಕೆಂದು ಈ ನಿರ್ಣಯ ಮಂಡಿಸಲಾಗಿದೆ' ಎಂದು ಹೇಳಿದರು.

'ಇಬ್ಬರು ಕುಕಿ ಮಹಿಳೆಯರ ಬೆತ್ತಲೆ ಮೆರವಣಿಗೆ ವಿಡಿಯೊ ಬಹಿರಂಗ-ಗೊಳ್ಳುವವರೆಗೂ ಪ್ರಧಾನಿ ಅವರು ಮೌನವಾಗಿದ್ದರು. ಅಂದು ಕೇವಲ 30 ಸೆಕೆಂಡ್‌ಗಳಷ್ಟೇ ಮಾತನಾಡಿದ್ದಾರೆ. ಇಷ್ಟು ಸಣ್ಣ ಪ್ರತಿಕ್ರಿಯೆ ನೀಡಲು 80 ದಿನಗಳನ್ನು ತೆಗೆದುಕೊಂಡಿದ್ದೇಕೆ' ಎಂದು ಪ್ರಶ್ನಿಸಿದ ಅವರು, 'ಇಂದಿಗೂ ಶಾಂತಿ ಕಾಪಾಡುವಂತೆ ಮಣಿಪುರದ ಜನರಿಗೆ ಪ್ರಧಾನಿ ಮನವಿ ಮಾಡಿಲ್ಲ' ಎಂದು ಆಪಾದಿಸಿದರು.

ಇದಕ್ಕೆ ಧ್ವನಿಗೂಡಿಸಿದ ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ, 'ಒಂಬತ್ತು ವರ್ಷಗಳ ಅಧಿಕಾರಾವಧಿಯಲ್ಲಿ ದೇಶದ ಒಂಬತ್ತು ರಾಜ್ಯಗಳಲ್ಲಿ ಸರ್ಕಾರಗಳನ್ನು ಉರುಳಿಸಿದ್ದೇ ಮೋದಿ ಅವರ ಸಾಧನೆಯಾಗಿದೆ' ಎಂದು ವ್ಯಂಗ್ಯವಾಡಿದರು.

'ಮಣಿಪುರದಲ್ಲಿ ಆಡಳಿತ ಯಂತ್ರ ಕುಸಿದಿದೆ. ಲೂಟಿ, ಕೊಲೆ, ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಹತ್ತು ಸಾವಿರ ದೂರುಗಳು ದಾಖಲಾಗಿವೆ. ನಾವೆಷ್ಟು ಅಸೂಕ್ಷ್ಮರಾಗಿದ್ದೇವೆ ಎಂಬುದಕ್ಕೆ ಇದೇ ಸಾಕ್ಷಿಯಾಗಿದೆ. ಮುಖ್ಯಮಂತ್ರಿ ಬಿರೇನ್ ಸಿಂಗ್ ತಮ್ಮ ಹುದ್ದೆಗೆ ಕೂಡಲೇ ರಾಜೀನಾಮೆ ಸಲ್ಲಿಸಬೇಕು' ಎಂದು ಆಗ್ರಹಿಸಿದರು.

ಸರ್ಕಾರಿ ಪ್ರಾಯೋಜಿತ: 'ಇದು ರಾಜ್ಯ ಸರ್ಕಾರಿ ಪ್ರಾಯೋಜಿತ ಹಿಂಸಾಚಾರ' ಎಂದು ಮಾತು ಆರಂಭಿಸಿದ ಸಮಾಜವಾದಿ ಪಕ್ಷದ ನಾಯಕಿ ಡಿಂಪಲ್ ಯಾದವ್, 'ಚಿತ್ರಗಳು ಹೊರಬರದಿದ್ದರೆ ಅಲ್ಲಿನ ಮಹಿಳೆಯರಿಗೆ ಏನಾಗುತ್ತಿದೆ ಎಂಬುದು ಯಾರಿಗೂ ತಿಳಿಯುತ್ತಿರಲಿಲ್ಲ' ಎಂದು ಹೇಳಿದರು.

'ಸಂಘರ್ಷಪೀಡಿತ ನೆಲದಲ್ಲಿ ಮಾನವ ಹಕ್ಕುಗಳು ಸಂಪೂರ್ಣವಾಗಿ ದಮನವಾಗಿವೆ. ಹಿಂಸಾಚಾರವನ್ನು ಉಲ್ಬಣಗೊಳಿಸಲು ಮಹಿಳೆಯನ್ನು ಸಾಧನವಾಗಿ ಬಳಸಿಕೊಳ್ಳಲಾಗುತ್ತಿದೆ. ಜನತಂತ್ರ ವ್ಯವಸ್ಥೆಯಲ್ಲಿ ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂದು ಕಿಡಿಕಾರಿದರು.

'ಕಣಿವೆ ರಾಜ್ಯದಲ್ಲಿ ಸಂಘರ್ಷ ಉಲ್ಬಣಿಸಿದ ನಡುವೆಯೇ ಪ್ರಧಾನಿ ಮೋದಿ ಅವರು ಏಳು ದೇಶಗಳಿಗೆ ಭೇಟಿ ನೀಡಿದ್ದರು. ಆದರೂ, ಒಂದೂ ಮಾತನಾಡಲಿಲ್ಲ' ಎಂದು ಟೀಕಿಸಿದ ತೃಣಮೂಲ ಕಾಂಗ್ರೆಸ್‌ನ ಸೌಗತ ರೇ ಅವರು, 'ಪ್ರಧಾನಿ ಅವರು ರಾಯಭಾರಿಯೇ ಅಥವಾ ಸಂಚಾರಿ ವ್ಯಾಪಾರಿಯೇ ಎಂಬುದು ಅರ್ಥವಾಗು-ತ್ತಿಲ್ಲ' ಎಂದು ಹೇಳಿದರು.

ಕಲಾಪವನ್ನು ಬುಧವಾರಕ್ಕೆ ಮುಂದೂಡಲಾಯಿತು.

'ಗೊಗೋಯಿ ಹೇಳಿಕೆಗೆ ನ್ಯಾಯಿಕ ಚೌಕಟ್ಟಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ನ್ಯಾಯಾಲಯಗಳ ಕಾರ್ಯ ವ್ಯಾಪ್ತಿಯಿಂದ ನ್ಯಾಯಾಧೀಶರು ಹೊರಹೋದ ಬಳಿಕ ನೀಡುವ ಹೇಳಿಕೆಗಳು ಅವರ ವೈಯಕ್ತಿಕ ಅಭಿ-ಪ್ರಾಯಗಳಷ್ಟೇ ಹೊರತು, ಅವುಗಳಿಗೆ ಎಂದಿಗೂ ನ್ಯಾಯಿಕ ಚೌಕಟ್ಟು ಇರುವುದಿಲ್ಲ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಸ್ಪಷ್ಟಪಡಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನದ ರದ್ದತಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಸಿಜೆಐ ಚಂದ್ರಚೂಡ್ ನೇತೃತ್ವದ ಸಂವಿಧಾನ ಪೀಠವು ಮಂಗಳವಾರ ನಡೆಸಿತು.

ಅರ್ಜಿದಾರರೊಬ್ಬರ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, 'ನ್ಯಾಯಶಾಸ್ತ್ರ ಆಧಾರದ ಮೇಲೆಯೇ ರಚನೆಯಾಗಿರುವ ಸಂವಿಧಾನದ ಮೂಲ ಸ್ವರೂಪ ಸಿದ್ಧಾಂತವನ್ನೇ ಚರ್ಚೆಗೆ ಒಳಪಡಿಸಬೇಕೆಂದು ನಿಮ್ಮ ಗೌರವಾನ್ವಿತ ಸಹೋದ್ಯೋಗಿಯೇ (ನಿವೃತ್ತ ಸಿಜೆಐ ರಂಜನ್ ಗೊಗೋಯಿ) ರಾಜ್ಯಸಭೆಯಲ್ಲಿ ಹೇಳಿದ್ದಾರೆ. ಮೂಲ ಸ್ವರೂಪವೇ ಅನುಮಾನಾಸ್ಪದವಾಗಿದೆ ಎಂಬುದು ಇದರರ್ಥ' ಎಂದು ಪೀಠಕ್ಕೆ ಹೇಳಿದರು.

ಇದಕ್ಕೆ ಆಕ್ಷೇಪಿಸಿದ ಚಂದ್ರಚೂಡ್, 'ಹಾಲಿ ಕರ್ತವ್ಯ ನಿರತರನ್ನಷ್ಟೇ ನೀವು ಸಹೋದ್ಯೋಗಿಗಳೆಂದು ಸಂಬೋಧಿಸಬೇಕು. ವೃತ್ತಿಯಿಂದ ಬಿಡುಗಡೆಯಾದ (ನಿವೃತ್ತ ನ್ಯಾಯಾಧೀಶರು/ ನ್ಯಾಯಮೂರ್ತಿಗಳು) ಬಳಿಕ ಅವರ ಮಾತುಗಳು ಸ್ವಂತ ಅಭಿಪ್ರಾಯಗಳಷ್ಟೇ. ಎಂದಿಗೂ ಅವು ನ್ಯಾಯಾಂಗದ ಪರಿಮಿತಿಗೆ ಒಳಪಡುವುದಿಲ್ಲ' ಎಂದರು.

ಸಾಂವಿಧಾನಿಕ ತಿದ್ದುಪಡಿ ಮೂಲಕವೂ ಭಾರತದ ಸಂವಿಧಾನದ ಮೂಲ ಸ್ವರೂಪವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು 1973ರ ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಹಾಗಾಗಿ, ಮೂಲ ಸ್ವರೂಪ ಮಾರ್ಪಡಿಸುವ ಯಾವ ಅಧಿಕಾರವು ಸಂಸತ್‌ಗೆ ಇಲ್ಲ.

ಹಾಕಿ: ಭಾರತ–ಪಾಕ್ ಸೆಣಸು ಇಂದು

ಏಷ್ಯನ್ ಚಾಂಪಿಯನ್ಸ್ ಟ್ರೋಫಿ: ಸೆಮಿ ತಲುಪಲು ಪಾಕ್‌ಗೆ ಗೆಲುವು ಅನಿವಾರ್ಯ

ಚೆನ್ನೈ (ಪಿಟಿಐ): ಮೂರು ಬಾರಿಯ ಚಾಂಪಿಯನ್ ಭಾರತ ತಂಡ, ಬುಧವಾರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಕೊನೆಯ ರೌಂಡ್‌ರಾಬಿನ್ ಲೀಗ್ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ. ಸೆಮಿಫೈನಲ್ ಸ್ಥಾನವನ್ನು ಈಗಾಗಲೇ ಖಚಿತಪಡಿಸಿ-ರುವ ಭಾರತ, ಈ ಪಂದ್ಯದಲ್ಲಿ ಅಲಕ್ಷ್ಯ ಮನೋಭಾವ ನುಸುಳದಂತೆ ನೋಡಿ-ಕೊಳ್ಳಬೇಕಾಗಿದೆ.

ಭಾರತ ಹಾಕಿ ತಂಡದ ಆಟಗಾರರು

ಇನ್ನೊಂದು ಕಡೆ ಪಾಕಿಸ್ತಾನಕ್ಕೆ ಈ ಪಂದ್ಯ ಮಹತ್ವದ್ದು. ಗೆದ್ದರೆ ಮಾತ್ರ ಅದು ಅಂತಿಮ ನಾಲ್ಕರ ಹಂತ ಸುಗಮ. ಸೋತಲ್ಲಿ, ಅದರ ಭವಿಷ್ಯ ಇತರ ಪಂದ್ಯಗಳ ಫಲಿತಾಂಶದ ಮೇಲೆ ಅವಲಂಬಿತವಾಗಿದೆ. ಚೀನಾ– ಜಪಾನ್ ಪಂದ್ಯದಲ್ಲಿ ಚೀನಾ ಗೆಲ್ಲಲಿ ಮತ್ತು ಮಲೇಷ್ಯಾ ಇನ್ನೊಂದು ಪಂದ್ಯದಲ್ಲಿ ದಕ್ಷಿಣ ಕೊರಿಯಾವನ್ನು ದೊಡ್ಡ ಅಂತರದಿಂದ ಸೋಲಿಸಲಿ ಎಂದು ಅದು ಹಾರೈಸಬೇಕಾಗಿದೆ.

ಭಾರತ ಮೂರು ಗೆಲುವು, ಒಂದು ಡ್ರಾ ಪಂದ್ಯದಿಂದ ಒಟ್ಟು 10 ಪಾಯಿಂಟ್ ಗಳಿಸಿದ್ದು, ಲೀಗ್ ಪಟ್ಟಿಯಲ್ಲಿ ಅಗ್ರಸ್ಥಾ-ನದಲ್ಲಿದೆ. ಮಲೇಷ್ಯಾ (9), ದಕ್ಷಿಣ ಕೊರಿಯಾ (5), ಪಾಕಿಸ್ತಾನ (5) ಮತ್ತು ಚೀನಾ (1) ನಂತರದ ಸ್ಥಾನಗಳಲ್ಲಿ ಇವೆ.

ಭಾರತದಂತೆ, ಪಾಕ್ ತಂಡವೂ ಮೂರು ಬಾರಿ ಈ ಟೂರ್ನಿಯ ಚಾಂಪಿಯನ್ ಆಗಿವೆ. ಈಗಿನ ರ್‍ಯಾಂಕಿಂಗ್ ಮತ್ತು ಸಾಧಿಸಿರುವ ಬೆಳವಣಿಗೆಯ ದೃಷ್ಟಿಯಿಂದ ಭಾರತ ಬುಧವಾರದ ಪಂದ್ಯದಲ್ಲಿ ಗೆಲ್ಲುವ ನೆಚ್ಚಿನ ತಂಡ ಎನಿಸಿದೆ. ಭಾರತ ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿದ್ದರೆ, ಪಾಕಿಸ್ತಾನ 16ನೇ ಸ್ಥಾನದಲ್ಲಿ ಇದೆ.

ಆದರೆ ಭಾರತ–ಪಾಕ್ ಪಂದ್ಯದಲ್ಲಿ ರ್‍ಯಾಂಕಿಂಗ್ ಗಣನೆಗೆ ಬರುವುದು ಕಡಿಮೆ. ಯಾವ ತಂಡ ಒತ್ತಡವನ್ನು ತಾಳಿ ನಿಲ್ಲಬಲ್ಲದು ಎಂಬುದಷ್ಟೇ ಇಲ್ಲಿ ಪ್ರಮುಖ. ಹರ್ಮನ್‌ಪ್ರೀತ್ ಪಡೆ ಈ ಟೂರ್ನಿಯಲ್ಲಿ ಆಕ್ರಮಣಕಾರಿ ಆಟ ಆಡುತ್ತಿದೆ. ಆದರೆ ರಕ್ಷಣಾ ವಿಭಾಗ ಬಲಪಡಿಸಿಕೊಳ್ಳಬೇಕಿದೆ.

ಭಾರತ ಸೆಮಿಫೈನಲ್‌ನಲ್ಲಿ ಪಾಕ್ ತಂಡವನ್ನು ಎದುರಿಸುವ ಸಾಧ್ಯತೆಯೇ ಅಧಿಕವಾಗಿದೆ. ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಇರುವವರು ನಾಲ್ಕನೇ ಸ್ಥಾನದಲ್ಲಿರುವ ತಂಡವನ್ನು ಎದುರಿಸಬೇಕಾಗುತ್ತದೆ. ಎರಡನೇ ಸ್ಥಾನ ಪಡೆದವರು, ಮೂರನೇ ಸ್ಥಾನ ಪಡೆದ ತಂಡದ ವಿರುದ್ಧ ಸೆಣಸಬೇ-ಕಾಗುತ್ತದೆ. ಈ ಪಂದ್ಯಗಳು ಶುಕ್ರವಾರ ನಡೆಯಲಿವೆ.

ಭಾರತ ತಂಡ, ತನ್ನ ಪಂದ್ಯಗಳಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಪೆನಾಲ್ಟಿ ಕಾರ್ನರ್‌ಗಳನ್ನು ಬಿಟ್ಟುಕೊಡಬಾರದು ಎಂದು ನಾಯಕ ಹರ್ಮನ್‌ಪ್ರೀತ್ ಸಿಂಗ್ ಈಗಾಗಲೇ ಎಚ್ಚರಿಸಿದ್ದಾರೆ.

ವಿಶ್ವಕಪ್ ಫುಟ್‌ಬಾಲ್: ಕ್ವಾರ್ಟರ್‌ಗೆ ಕೊಲಂಬಿಯ

ಫ್ರಾನ್ಸ್‌ಗೆ ಸಾಟಿಯಾಗದ ಮೊರಾಕ್ಕೊ

ಅಡಿಲೇಡ್/ ಮೆಲ್ಬರ್ನ್ (ಎಎಫ್‌ಪಿ): ಯೂಜಿನಿ ಲಿ ಸೊಮೆರ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಮೊರಾಕ್ಕೊ ತಂಡವನ್ನು 4–0 ಯಿಂದ ಮಣಿಸಿದ ಫ್ರಾನ್ಸ್, ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಅಡಿಲೇಡ್‌ನಲ್ಲಿ ಮಂಗಳವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಎದುರಾಳಿ ತಂಡಕ್ಕೆ ಪ್ರಬಲ ಪೈಪೋಟಿ ಒಡ್ಡುವಲ್ಲಿ ಮೊರಾಕ್ಕೊ ವಿಫಲವಾಯಿತು.

ಕದೀದಿಯತೊ ದಿಯಾನಿ ಅವರು 15ನೇ ನಿಮಿಷದಲ್ಲಿ ಫ್ರಾನ್ಸ್ ತಂಡದ ಗೋಲಿನ ಖಾತೆ ತೆರೆದರೆ, ಕೆನ್ಜಾ ದಾಲಿ ಅವರು 20ನೇ ನಿಮಿಷದಲ್ಲಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. 23 ಮತ್ತು 70ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಸೇರಿಸಿದ ಸೊಮೆರ್, ತಂಡದ ಗೆಲುವಿನ ಅಂತರವನ್ನು ಹಿಗ್ಗಿಸಿದರು.

ಬ್ರಿಸ್ಬೇನ್‌ನಲ್ಲಿ ಶನಿವಾರ ನಡೆಯಲಿರುವ ಎಂಟರಘಟ್ಟದ ಪಂದ್ಯದಲ್ಲಿ ಫ್ರಾನ್ಸ್ ತಂಡ ಆತಿಥೇಯ ಆಸ್ಟ್ರೇಲಿಯಾದ ಸವಾಲನ್ನು ಎದುರಿಸಲಿದೆ. ಗೆಲ್ಲುವ ತಂಡಕ್ಕೆ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಅಥವಾ ಕೊಲಂಬಿಯಾ ಎದುರಾಗಲಿದೆ.

ಮೆಲ್ಬರ್ನ್‌ನಲ್ಲಿ ನಡೆದ ದಿನದ ಮೊದಲ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕೊಲಂಬಿಯ 1–0 ಗೋಲಿನಿಂದ ಜಮೈಕಾ ತಂಡವನ್ನು ಮಣಿಸಿ ಇದೇ ಮೊದಲ ಬಾರಿ ವಿಶ್ವಕಪ್ ಟೂರ್ನಿಯ ಎಂಟರಘಟ್ಟ ಪ್ರವೇಶಿಸಿದ ಸಾಧನೆ ಮಾಡಿತು.

ಪ್ರಮುಖ ಆಟಗಾರ್ತಿ ಕ್ಯಾಟಲಿನಾ ಉಸ್ಮೆ ಅವರು 51ನೇ ನಿಮಿಷದಲ್ಲಿ ಗೆಲುವಿನ ಗೋಲು ತಂದಿತ್ತರು. ಅನಾ ಗುಝ್ಮನ್

ಫ್ರಾನ್ಸ್ ತಂಡದ ಯೂಜಿನಿ ಲಿ ಸೊಮೆರ್ ಅವರ ಸಂಭ್ರಮ –ಎಎಫ್‌ಪಿ ಚಿತ್ರ

ನೀಡಿದ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ಉಸ್ಮೆ, ಗುರಿ ಸೇರಿಸಿದರು.

ದಕ್ಷಿಣ ಅಮೆರಿಕದ ತಂಡ 2019ರ ಟೂರ್ನಿಗೆ ಅರ್ಹತೆ ಪಡೆಯುವಲ್ಲಿ ವಿಫಲವಾಗಿತ್ತು. ಬಳಿಕದ ನಾಲ್ಕು ವರ್ಷಗಳಲ್ಲಿ ಸಾಕಷ್ಟು ಸುಧಾರಣೆ ಕಂಡಿದ್ದು, ಪ್ರಬಲ ತಂಡವಾಗಿ ಬೆಳೆದಿದೆ. ಲೀಗ್ ಹಂತದಲ್ಲಿ ವಿಶ್ವದ ಎರಡನೇ ರ್‍ಯಾಂಕ್‌ನ ತಂಡ ಜರ್ಮನಿಗೆ ಆಘಾತ ನೀಡಿತ್ತು.

ಕ್ವಾರ್ಟರ್ ಫೈನಲ್ ಪಂದ್ಯಗಳು: ಆ.11: ಸ್ಪೇನ್– ನೆದರ್ಲೆಂಡ್ಸ್; ಜಪಾನ್– ಸ್ವೀಡನ್, ಆ.12: ಆಸ್ಟ್ರೇಲಿಯಾ– ಫ್ರಾನ್ಸ್; ಇಂಗ್ಲೆಂಡ್– ಕೊಲಂಬಿಯ

ಸಂಕ್ಷಿಪ್ತ ಸುದ್ದಿ

ಟೆನಿಸ್: ಬಿಎನ್‌ಎಸ್ ರೆಡ್ಡಿಗೆ ಚಿನ್ನದ ಪದಕ

ಬೆಂಗಳೂರು: ನಿವೃತ್ತ ಐಪಿಎಸ್ ಅಧಿಕಾರಿ ಬಿಎನ್‌ಎಸ್ ರೆಡ್ಡಿ ಅವರು ಕೆನಡಾದ ವಿನಿಪೆಗ್‌ನಲ್ಲಿ ನಡೆದ ವಿಶ್ವ ಪೊಲೀಸ್ ಮತ್ತು ಫೈರ್ ಗೇಮ್ಸ್‌ನ ಟೆನಿಸ್ ಟೂರ್ನಿಯಲ್ಲಿ ಚಿನ್ನ ಹಾಗೂ ಕಂಚಿನ ಪದಕ ಗೆದ್ದುಕೊಂಡರು.

ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ರೆಡ್ಡಿ ಹಾಗೂ ಎಸ್.ಎಂ ಶರ್ಮಾ ಜೋಡಿ 6–2, 6–3 ರಿಂದ ಆಸ್ಟ್ರೇಲಿಯಾದ ವಿಕ್ಟರ್ ಬಿಯರ್ಡ್ ಮತ್ತು ಅಮೆರಿಕದ ರಾಬರ್ಟ್ ಶಾಫ್ನೆರ್ ಅವರನ್ನು ಮಣಿಸಿ ಚಾಂಪಿಯನ್ ಆಯಿತು. ಸಿಂಗಲ್ಸ್ ವಿಭಾಗದಲ್ಲಿ ಕಂಚಿನ ಪದಕಕ್ಕಾಗಿ ನಡೆದ ಪೈಪೋಟಿಯಲ್ಲಿ ರೆಡ್ಡಿ ಅವರು 6–2, 6–1 ರಿಂದ ಅಮೆರಿಕದ ಥಾಮಸ್ ಲೇಕ್ ವಿರುದ್ಧ ಜಯಿಸಿದರು.

ಕ್ರೀಡಾ ಕಿಟ್ ಕಳೆದುಕೊಂಡ ಮಣಿಕಾ

ನವದೆಹಲಿ (ಪಿಟಿಐ): ಟೇಬಲ್ ಟೆನಿಸ್ ತಾರೆ ಮಣಿಕಾ ಬಾತ್ರಾ ಅವರು ಪೆರುವಿನಿಂದ ಭಾರತಕ್ಕೆ ಪ್ರಯಾಣಿಸುವ ಸಂದರ್ಭದಲ್ಲಿ ಕ್ರೀಡಾ ಸಲಕರಣೆ-ಗಳಿದ್ದ ಬ್ಯಾಗ್ ಕಳೆದಿದೆ. ಅದನ್ನು ಹುಡುಕಿಕೊಡಲು ನೆರವಾಗಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಪೆರುವಿನಲ್ಲಿ ನಡೆದ ಟೂರ್ನಿಯಲ್ಲಿ ಅವರು ಭಾಗವಹಿಸಿ-ದ್ದರು. ಅಲ್ಲಿಂದ ಸ್ವದೇಶಕ್ಕೆ ಕೆಎಲ್‌ಎಂ ಏರ್‌ಲೈನ್ಸ್ ವಿಮಾನದಲ್ಲಿ ಮರಳಿದ್ದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 35ನೇ ಸ್ಥಾನದ-ಲ್ಲಿರುವ ಮಣಿಕಾ ವಿಮಾನದ ಬ್ಯುಸಿನೆಸ್ ಕ್ಲಾಸ್‌ನಲ್ಲಿ ಪ್ರಯಾಣಿಸಿದ್ದರು. ತಮ್ಮ ಬ್ಯಾಗ್‌ಗಳಿಗೆ 'ಬಹುಮುಖ್ಯ' ಎಂಬ ಟ್ಯಾಗ್ ಕೂಡ ಹಾಕಿದ್ದರು.

'ನಂಬಲು ಸಾಧ್ಯವಾಗುತ್ತಿಲ್ಲ. ಬಹಳ ಬೇಸರವಾಗಿದೆ. ಪ್ರಮುಖ ಬ್ಯಾಗೇಜ್ ಎಂಬ ಸೂಚನಾ ಚೀಟಿ ಅಂಟಿಸಿಯೂ ಈ ರೀತಿಯಾಗಿದೆ. ನಾನು ಮುಂಬರುವ ಟೂರ್ನಿಯಲ್ಲಿ ಬಳಸುವ ಮುಖ್ಯವಾದ ಕ್ರೀಡಾ ಸಲಕರಣೆಗಳು ಅದರಲ್ಲಿವೆ. ವಿಮಾನ ನಿಲ್ದಾಣ ಸಿಬ್ಬಂದಿಯ ಬಳಿ ನನ್ನ ಪ್ರಶ್ನೆಗೆ ಉತ್ತರ ಅಥವಾ ಪರಿಹಾರ ಇರಲಿಲ್ಲ. ಸಿಂಧಿಯಾ ಸರ್ ದಯವಿಟ್ಟು ಸಹಾಯ ಮಾಡಿ' ಎಂದು ಮಣಿಕಾ ಟ್ವೀಟ್ ಮಾಡಿದ್ದಾರೆ. ಲಿಮಾದಲ್ಲಿ ನಡೆದ ಡಬ್ಲ್ಯುಟಿಟಿ ಕಂಟೆಂಡರ್ ಟೂರ್ನಿಯಲ್ಲಿ ಆಡಲು ಮನಿಕಾ ತೆರಳಿದ್ದರು. 32ರ ಸುತ್ತಿನಲ್ಲಿ ಮನಿಕಾ 11-3, 11-7, 10-12, 6-11, 9-11ರಿಂದ ಜಪಾನಿನ ಮಿಯು ಹಿರಾನೊ ವಿರುದ್ಧ ಸೋತಿದ್ದರು.

ತೆರೆದ ಶೌಚಾಲಯ, ತಿಗಣೆಯುಳ್ಳ ಕಿರಿದಾದ ಜೈಲು ಕೊಠಡಿಯಲ್ಲಿ ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿ ಅಟಕ್ ಜೈಲಿನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ತಿಗಣೆ ಕಾಟವಿರುವ, ತೆರೆದ ಶೌಚಾಲಯದ, ಅತಿ ಚಿಕ್ಕದಾದ ಕೊಠಡಿಯಲ್ಲಿ ಇರಿಸಲಾಗಿದೆ ಎಂದು ಅವರ ವಕೀಲರು ಆರೋಪಿಸಿದ್ದಾರೆ.

ಭ್ರಷ್ಟಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿರುವ ಇಮ್ರಾನ್ ಖಾನ್ ಅವರ ಮುಂದಿನ ಕಾನೂನು ಹೋರಾಟಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಸಹಿ ಪಡೆಯಲೆಂದು ವಕೀಲ ನಯೀಮ್ ಹೈದರ್ ಪಂಜೋತಾ ಮಂಗಳವಾರ ಜೈಲಿಗೆ ತೆರಳಿದ್ದರು. ಮಾಜಿ ಪ್ರಧಾನಿಯನ್ನು 45 ನಿಮಿಷಗಳ ಕಾಲ ಭೇಟಿಯಾಗಿ ಬಂದ ಪಂಜೋತಾ, ಜೈಲಿನಲ್ಲಿ ಇಮ್ರಾನ್‌ಗೆ ಒದಗಿರುವ ಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

'70 ವರ್ಷ ವಯಸ್ಸಿನ ಇಮ್ರಾನ್ ಖಾನ್‌ಗೆ ಜೈಲಿನಲ್ಲಿ 'ಸಿ' ದರ್ಜೆಯ ಸವಲ-ತ್ತುಗಳನ್ನು ಒದಗಿಸಲಾಗಿದೆ. ಅವರಿಗೆ ನೀಡಲಾಗಿರುವ ಕೋಣೆ ಅತಿ ಚಿಕ್ಕದು. ನೊಣ, ತಿಗಣೆಗಳ ಉಪಟಳವಿದೆ, ತೆರೆದ ಶೌಚಾಲಯವಿದೆ. ಕಗ್ಗತ್ತಲೆಯ ಕೋಣೆಗೆ ತಮ್ಮನ್ನು ದೂಡಿರುವುದಾಗಿಯೂ, ಹಗಲಲ್ಲಿ ನೊಣಗಳು, ರಾತ್ರಿ ವೇಳೆ ಇರುವೆಗಳು ಬಾಧಿಸುತ್ತಿ-ರುವುದಾಗಿಯೂ ಅವರು ನನ್ನ ಬಳಿ ಹೇಳಿಕೊಂಡಿದ್ದಾರೆ' ಎಂದು ಪಂಜೋತಾ ತಿಳಿಸಿದರು.



ಇಮ್ರಾನ್ ಖಾನ್

'ಇಡೀ ಜೀವನವನ್ನೇ ಜೈಲಿನಲ್ಲಿ ಕಳೆಯಲು ಸಿದ್ಧವಿದ್ದೇನೆ ಎಂದೂ ಖಾನ್ ತಿಳಿಸಿದ್ದಾರೆ' ಎಂದು ಅವರು ಹೇಳಿದರು.

ಬಂಧನದ ವೇಳೆ ಪೊಲೀಸರು ನೋಟಿಸ್ ತೋರಿಸಲಿಲ್ಲ. ಪತ್ನಿ ಇದ್ದ ಕೋಣೆಯ ಬಾಗಿಲನ್ನು ಪೊಲೀಸರು ಒಡೆಯಲು ಮುಂದಾಗಿದ್ದರು ಎಂದು ಖಾನ್ ಅಸಮಾಧಾನ ವ್ಯಕ್ತಪಡಿಸಿದ್ದಾಗಿ ವಕೀಲ ಪಂಜೋತಾ ತಿಳಿಸಿದರು.

ಹೈಕೋರ್ಟ್ ಮೆಟ್ಟಿಲೇರಿದ ಇಮ್ರಾನ್: ಭ್ರಷ್ಟಾಚಾರ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ ತಮ್ಮ ವಿರುದ್ಧ ನೀಡಿರುವ ತೀರ್ಪನ್ನು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಮಂಗಳವಾರ ಪ್ರಶ್ನಿಸಿದ್ದಾರೆ.

'ಪೂರ್ವಗ್ರಹ ಪೀಡಿತರಾಗಿರುವ ನ್ಯಾಯಾಧೀಶರು ನೀಡಿದ ಈ ತೀರ್ಪು ನ್ಯಾಯದಾನ ವ್ಯವಸ್ಥೆಗೇ ಕೊಟ್ಟ ಹೊಡೆತವಾಗಿದೆ. ನ್ಯಾಯಾಂಗದ ವಿಡಂಬನೆಯಾಗಿದೆ. ಕಾನೂನಿಗೆ ವಿರುದ್ಧವಾಗಿದೆ. ತೀರ್ಪನ್ನು ರದ್ದುಗೊಳಿಸಬೇಕು. ಇಮ್ರಾನ್ ಖಾನ್ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲು ಕೂಡಲೇ ಆದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಏಷ್ಯನ್ ಗೇಮ್ಸ್ ಹಾಕಿ: ಒಂದೇ ಗುಂಪಿನಲ್ಲಿ ಭಾರತ, ಪಾಕ್

ನವದೆಹಲಿ (ಪಿಟಿಐ): ಬದ್ಧ ಎದುರಾಳಿ ಗಳಾದ ಭಾರತ ಮತ್ತು ಪಾಕಿಸ್ತಾನ ಪುರುಷರ ಹಾಕಿ ತಂಡಗಳು ಏಷ್ಯನ್ ಕ್ರೀಡಾಕೂಟದ ಒಂದೇ ಗುಂಪಿನಲ್ಲಿ ಸ್ಥಾನ ಪಡೆದಿವೆ.

ಮಂಗಳವಾರ ಗುಂಪುಗಳ ಪಟ್ಟಿ ಯನ್ನು ಪ್ರಕಟಿಸಲಾಗಿದೆ. ಎ ಗುಂಪಿನಲ್ಲಿ ಭಾರತ, ಪಾಕಿಸ್ತಾನ, ಜಪಾನ್, ಬಾಂಗ್ಲಾದೇಶ, ಸಿಂಗಪುರ ಮತ್ತು ಉಜ್ಬೇಕಿಸ್ತಾನ ತಂಡಗಳು ಇವೆ.

ಬಿ ಗುಂಪಿನಲ್ಲಿ ದಕ್ಷಿಣ ಕೊರಿಯಾ, ಮಲೇಷ್ಯಾ, ಚೀನಾ, ಓಮನ್, ಥಾಯ್ಲೆಂಡ್ ಮತ್ತು ಇಂಡೊನೇಷ್ಯಾ ತಂಡಗಳು ಆಡಲಿವೆ. ಸೆ.24ರಂದು ಹಾಕಿ ಪಂದ್ಯಗಳು ಆರಂಭವಾಗಲಿವೆ. ಭಾರತ ಮಹಿಳಾ ತಂಡವು ಸೆಪ್ಟೆಂಬರ್ 27ರಂದು ಸಿಂಗಪುರದ ಎದುರು ಅಭಿಯಾನ ಆರಂಭಿಸಲಿದೆ. ಮಹಿಳಾ ತಂಡವು 2018 ರಲ್ಲಿ ಜಕಾರ್ತದಲ್ಲಿ ನಡೆದಿದ್ದ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿತ್ತು. ಬಿ ಗುಂಪಿನಲ್ಲಿ ಜಪಾನ್, ಚೀನಾ, ಥಾಯ್ಲೆಂಡ್, ಕಜಕಸ್ತಾನ ಹಾಗೂ ಇಂಡೊನೇಷ್ಯಾ ತಂಡಗಳು ಆಡಲಿವೆ.

'ಬಲಿಷ್ಠ ತಂಡಗಳಿರುವ ಗುಂಪಿನಲ್ಲಿ ಸ್ಥಾನ ಪಡೆದಿದ್ದೇವೆ. ಆದರೆ, ಈ ಸವಾಲನ್ನು ಗೆದ್ದು ಬರುವ ಆತ್ಮವಿಶ್ವಾಸ ನಮಗಿದೆ. ಅದಕ್ಕೆ ತಕ್ಕಂತೆ ಬಹಳಷ್ಟು ಪರಿಶ್ರಮದಿಂದ ಅಭ್ಯಾಸ ಮಾಡಿದ್ದೇವೆ. ಕಳೆದ ಕೆಲವು ವರ್ಷಗಳಿಂದ ಸತತವಾಗಿ ತಾಲೀಮು ನಡೆಸುತ್ತಿದ್ದೇವೆ' ಎಂದು ಭಾರತ ಮಹಿಳಾ ತಂಡದ ನಾಯಕಿ ಸವಿತಾ ಹೇಳಿದ್ದಾರೆ.

ಎಲ್ಲ ಹಾಕಿ ಪಂದ್ಯಗಳೂ ಗಾಂಗ್ಶು ಕೆನಲ್ ಸ್ಪೋರ್ಟ್ಸ್ ಪಾರ್ಕ್ ಕ್ರೀಡಾಂಗಣದಲ್ಲಿ ನಡೆಯಲಿವೆ. ಪುರುಷರ ವಿಭಾಗದ ಫೈನಲ್ ಅಕ್ಟೋಬರ್ 6ಕ್ಕೆ ನಡೆಯಲಿದೆ. ಅದರ ಮರುದಿನ ಮಹಿಳಾ ಫೈನಲ್ ಆಯೋಜನೆಗೊಳ್ಳಲಿದೆ.

ವಿಶ್ವ ಯೂನಿವರ್ಸಿಟಿ ಗೇಮ್ಸ್: ಭಾರತಕ್ಕೆ ದಾಖಲೆಯ 26 ಪದಕ

ಚೆಂಗ್ಡು (ಚೀನಾ), (ಪಿಟಿಐ): ಭಾರತದ ಅಥ್ಲೀಟ್‌ಗಳು ಇಲ್ಲಿ ನಡೆದ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ದಾಖಲೆಯ 26 ಪದಕಗಳೊಂದಿಗೆ ಅಭಿಯಾನವನ್ನು ಕೊನೆಗೊಳಿಸಿದರು.

ಭಾರತ 11 ಚಿನ್ನ, 5 ಬೆಳ್ಳಿ ಮತ್ತು 10 ಕಂಚಿನ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ 7ನೇ ಸ್ಥಾನ ಗಳಿಸಿತು. ಇದು ಈ ಕ್ರೀಡೆಗಳಲ್ಲಿ ಇದುವರೆಗೆ ಭಾರತದ ಅತ್ಯುತ್ತಮ ಪ್ರದ-ರ್ಶನವಾಗಿದೆ. ಭಾರತವು ಈ ಹಿಂದಿನ ಒಟ್ಟು ವಿಶ್ವ ಯೂನಿವರ್ಸಿಟಿ ಗೇಮ್ಸ್‌ಗಳಲ್ಲಿ 6 ಚಿನ್ನ, 6 ಬೆಳ್ಳಿ ಮತ್ತು 9 ಕಂಚಿನೊಂದಿಗೆ 21 ಪದಕಗಳನ್ನು ಗೆದ್ದಿತ್ತು.

ಗೇಮ್ಸ್‌ನಲ್ಲಿ ಭಾರತದ 256 ಅಥ್ಲೀಟ್‌ಗಳು ಭಾಗವಹಿಸಿದ್ದರು. ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಭಾರತದ ಅಥ್ಲೀಟ್‌ಗಳ ಪ್ರದರ್ಶನ ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಇಲ್ಲಿ 82 ಮಂದಿ ಪಾಲ್ಗೊಂಡು, ಕೇವಲ ನಾಲ್ಕು ಕಂಚಿನ ಪದಕ ಗೆದ್ದಿದ್ದರು.

21 ಸದಸ್ಯರ ಶೂಟಿಂಗ್ ತಂಡವು ಅತ್ಯುತ್ತಮ ಪ್ರದರ್ಶನ ನೀಡಿ 8 ಚಿನ್ನ, 4 ಬೆಳ್ಳಿ ಮತ್ತು 2 ಕಂಚು ಗೆದ್ದರೆ, ಆರ್ಚರಿಯಲ್ಲಿ 3 ಚಿನ್ನ, 1 ಬೆಳ್ಳಿ ಮತ್ತು 3 ಕಂಚು ಗೆದ್ದಿದೆ.

ಆತಿಥೇಯ ಚೀನಾ 178 ಪದಕಗಳೊಂದಿಗೆ (103 ಚಿನ್ನ, 40 ಬೆಳ್ಳಿ, 35 ಕಂಚು) ಅಗ್ರಸ್ಥಾನ ಪಡೆಯಿತು. ಜಪಾನ್ (21 ಚಿನ್ನ, 29 ಬೆಳ್ಳಿ, 43 ಕಂಚು) ಮತ್ತು ಕೊರಿಯಾ (17 ಚಿನ್ನ, 18 ಬೆಳ್ಳಿ, 23 ಕಂಚು) ನಂತರದ ಸ್ಥಾನ ಪಡೆದವು.

ವಾಲಿಬಾಲ್ ತಂಡಕ್ಕೆ ಲಕ್ಷ್ಮೀನಾರಾಯಣ ಮ್ಯಾನೇಜರ್

ಬೆಂಗಳೂರು: ಅಂತರರಾಷ್ಟ್ರೀಯ ವಾಲಿಬಾಲ್ ಆಟಗಾರರಾಗಿದ್ದ ಕೆ.ಆರ್. ಲಕ್ಷ್ಮೀನಾ-ರಾಯಣ ಅವರನ್ನು ಆ.18ರಿಂದ 26ರ ವರೆಗೆ ಇರಾನ್‌ನ ಟೆಹರಾನ್‌ನಲ್ಲಿ ನಡೆಯುವ 22ನೇ ಏಷ್ಯನ್ ಸೀನಿಯರ್ ಪುರುಷರ ವಾಲಿಬಾಲ್ ಚಾಂಪಿಯನ್‌ಷಿಪ್‌ಗೆ ಭಾರತ ತಂಡದ ಮ್ಯಾನೇಜರ್ ಆಗಿ ಆಯ್ಕೆ ಮಾಡಲಾಗಿದೆ.

ಲಕ್ಷ್ಮೀನಾರಾಯಣ

ಲಕ್ಷ್ಮೀನಾರಾಯಣ, ಬೆಂಗಳೂರಿನ ಪ್ರಧಾನ ಅಂಚೆ ಕಚೇರಿಯಲ್ಲಿ ಪಬ್ಲಿಕ್ ರಿಲೇಷನ್ಸ್ ಇನ್‌ಸ್ಪೆಕ್ಟರ್ ಆಗಿದ್ದಾರೆ.

ಡುರಾಂಡ್ ಕಪ್: ಮುಂಬೈ ಸಿಟಿಗೆ ಜಯ

ಕೋಲ್ಕತ್ತ: ಮುಂಬೈ ಸಿಟಿ ಎಫ್.ಸಿ ತಂಡದವರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಜೆಮ್‌ಶೆಡ್‌ಪುರ ಎಫ್.ಸಿ ತಂಡವನ್ನು 5–0ಯಿಂದ ಮಣಿಸಿ ಸತತ ಎರಡನೇ ಗೆಲುವು ದಾಖಲಿಸಿದರು.

ಮಂಗಳವಾರ ನಡೆದ ಪಂದ್ಯದಲ್ಲಿ ಜಾರ್ಜ್ ಪೆರೇರಾ ಡಯಾಜ್ 7ನೇ ಮತ್ತು 14ನೇ ನಿಮಿಷ ಗೋಲು ಗಳಿಸಿ ಮುಂಬೈ ತಂಡಕ್ಕೆ ಮುನ್ನಡೆ ತಂದಿತ್ತರು. ನಂತರ ಆಲ್ಬರ್ಟೊ ನೊಗುಯೆರಾ (40ನೇ), ಯೊಯೆಲ್ ವ್ಯಾನ್ ನಿಫ್ (47ನೇ) ಮತ್ತು ವಿಕ್ರಮ್ ಪ್ರತಾಪ್ (54) ಗೆಲುವಿನ ಅಂತರ ಹೆಚ್ಚಿಸಿದರು.

ಗೋವಾಕ್ಕೆ ಜಯ: ಗುವಾಹಟಿಯಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ನೋಹ್ ಸದೌಯಿ ಅವರ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಎಫ್.ಸಿ ಗೋವಾ ತಂಡವು 6–0ಯಿಂದ ಶಿಲ್ಲಾಂಗ್ ಲಾಜೊಂಗ್ ತಂಡವನ್ನು ಮಣಿಸಿತು.

ಗೋವಾ ತಂಡದ ಪರ ರೌಲಿನ್ ಬೋರ್ಗೆಸ್ 15ನೇ ನಿಮಿಷದಲ್ಲಿ ಗೋಲಿನ ಖಾತೆಯನ್ನು ತೆರೆದರೆ, ನೋಹ್ ಸದೌಯಿ (20, 26, 86ನೇ), ವಿಕ್ಟರ್ ರಾಡ್ರಿಗಸ್ (68ನೇ), ಕಾರ್ಲೋಸ್ ಮಾರ್ಟಿನೆಜ್ (83ನೇ) ಚೆಂಡನ್ನು ಗುರಿ ಸೇರಿಸಿದರು. ಈ ಮೂಲಕ ಶಿಲ್ಲಾಂಗ್ ತಂಡ ಸತತ ಎರಡನೇ ಸೋಲು ಅನುಭವಿಸಿತು.

ಸೆಮಿಗೆ ಅಗ್ನಿಪುತ್ರ, ಕಿಕ್‌ಸ್ಟಾರ್ಟ್

ಬೆಂಗಳೂರು: ಎಫ್.ಸಿ ಅಗ್ನಿಪುತ್ರ ಮತ್ತು ಕಿಕ್‌ಸ್ಟಾರ್ಟ್ ಎಫ್.ಸಿ ತಂಡಗಳು ಬಿಡಿಎಫ್‌ಎ ಆಶ್ರಯದ ಸಿ. ಪುಟ್ಟಯ್ಯ ಸ್ಮಾರಕ ಫುಟ್‌ಬಾಲ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶ ಮಾಡಿವೆ.

ಮಂಗಳವಾರ ನಡೆದ 3ನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅಗ್ನಿಪುತ್ರ ತಂಡವು 2–2ರಿಂದ ಬೆಂಗಳೂರು ಇಂಡಿಪೆಂಡೆನ್ಸ್ ಎಫ್.ಸಿ ತಂಡದೊಂದಿಗೆ ಡ್ರಾ ಸಾಧಿಸಿದ ಕಾರಣ ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು. ಅಲ್ಲಿ ಅಗ್ನಿಪುತ್ರ ತಂಡ 4–3ರಿಂದ ಜಯ ಸಾಧಿಸಿತು.

ಅಗ್ನಿಪುತ್ರ ಪರವಾಗಿ ಒಮೆಗಾ ವ್ಯಾನ್ (51ನೇ ನಿ), ಲಾಲ್ನುಸಂಗ (68ನೇ) ಗೋಲು ತಂದಿತ್ತರೆ, ಇಂಡಿಪೆಂಡೆನ್ಸ್ ತಂಡದ ಎ. ಅರುಣ್ (8, 13ನೇ) ಎರಡು ಗೋಲು ದಾಖಲಿಸಿದರು.

ಮತ್ತೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡವು ಯಂಗ್ ಚಾಲೆಂಜರ್ಸ್ ತಂಡವನ್ನು 4–0ಯಿಂದ ಮಣಿಸಿತು. ಏನಮ್ ಗ್ರಾಫೆನ್‌ಬರ್ಗ್ ಜುರಾ (6ನೇ), ಬೆಂಜಮಿನ್ ಲುಫೆಂಗ್ (11ನೇ), ಪ್ರಶಾಂತ್ ಕಳಿಂಗ (57ನೇ) ಮತ್ತು ಎ. ಅಜಯ್ (67ನೇ) ಕಿಕ್‌ಸ್ಟಾರ್ಟ್ ಪರ ಗೋಲು ತಂದಿತ್ತರು.

ಮೂರನೇ ಟಿ20 ಪಂದ್ಯದಲ್ಲಿ ಭಾರತಕ್ಕೆ 7 ವಿಕೆಟ್ ಜಯ: ಕುಲದೀಪ್, ತಿಲಕ್ ಮಿಂಚು

ಸೂರ್ಯ ಅಬ್ಬರ; ವಿಂಡೀಸ್ ತಬ್ಬಿಬ್ಬು

ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್ ವೈಖರಿ –ಎಪಿ/ಪಿಟಿಐ ಚಿತ್ರ

ಗಯಾನ (ಪಿಟಿಐ): ಸೂರ್ಯಕುಮಾರ್ ಯಾದವ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಮೂರನೇ ಟಿ20 ಪಂದ್ಯದಲ್ಲಿ ವೆಸ್ಟ್ಇಂಡೀಸ್ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿದ ಭಾರತ, ಸರಣಿ ಜಯದ ಕನಸನ್ನು ಜೀವಂತವಾಗಿರಿಸಿಕೊಂಡಿತು.

ಮಂಗಳವಾರ ನಡೆದ 'ಮಾಡು–ಮಾಡಿ' ಪಂದ್ಯದಲ್ಲಿ ಎದುರಾಳಿ ತಂಡವನ್ನು 5 ವಿಕೆಟ್‌ಗಳಿಗೆ 159 ರನ್‌ಗಳಿಗೆ ನಿಯಂತ್ರಿಸಿದ ಭಾರತ, ಆ ಬಳಿಕ 17.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 164 ರನ್ ಗಳಿಸಿ ಗೆಲುವಿನ ನಗು ಬೀರಿತು.

ಐದು ಪಂದ್ಯಗಳ ಸರಣಿಯಲ್ಲಿ ವಿಂಡೀಸ್ 2–1 ರಿಂದ ಮುನ್ನಡೆಯಲ್ಲಿದೆ. ಸರಣಿ ಕೈವಶ ಮಾಡಿಕೊಳ್ಳಲು ಹಾರ್ದಿಕ್ ಪಾಂಡ್ಯ ಬಳಗಕ್ಕೆ ಕೊನೆಯ ಎರಡೂ ಪಂದ್ಯಗಳಲ್ಲಿ ಜಯ ಅನಿವಾರ್ಯ.

ಹಳೆಯ ಲಯಕ್ಕೆ ಮರಳಿದ ಸೂರ್ಯಕುಮಾರ್ (83 ರನ್) ಅವರ ಬಿರುಸಿನ ಆಟ ಭಾರತದ ಗೆಲುವಿನ ಹಾದಿಯನ್ನು ಸುಗಮಗೊಳಿಸಿದರೆ, ತಿಲಕ್ ವರ್ಮಾ (ಔಟಾಗದೆ 49, 37 ಎ., 4X4, 6X1) ಮತ್ತೆ ಮಿಂಚಿದರು.

ಸಾಧಾರಣ ಗುರಿ ಬೆನ್ನಟ್ಟಿದ ಭಾರತದ ಆರಂಭ ಚೆನ್ನಾಗಿರಲಿಲ್ಲ. ಚೊಚ್ಚಲ ಟಿ20 ಅಂತರರಾಷ್ಟ್ರೀಯ ಪಂದ್ಯವನ್ನಾಡಿದ ಯಶಸ್ವಿ ಜೈಸ್ವಾಲ್ (1) ವಿಫಲರಾದರೆ, ಶುಭಮನ್ ಗಿಲ್ (6) ಕೂಡಾ ಬೇಗನೇ ಮರಳಿದರು.

ಮೂರನೇ ವಿಕೆಟ್‌ಗೆ ಜತೆಯಾದ ಸೂರ್ಯಕುಮಾರ್ ಮತ್ತು ತಿಲಕ್ ಅವರು ವಿಂಡೀಸ್ ಬೌಲಿಂಗ್ ದಾಳಿಯನ್ನು ಲೀಲಾಜಾಲವಾಗಿ ಎದುರಿಸಿದರು. ಈ ಜೋಡಿ 51 ಎಸೆತಗಳಲ್ಲಿ 87 ರನ್‌ಗಳನ್ನು ಕಲೆಹಾಕಿತು. ವಿಂಡೀಸ್ ಪ್ರವಾಸದಲ್ಲಿ ಇದುವರೆಗೆ ಮಿಂಚಲು ವಿಫಲವಾಗಿದ್ದ ಸೂರ್ಯಕುಮಾರ್ ಮೊದಲ ಎಸೆತದಲ್ಲೇ ಬೌಂಡರಿ ಗಳಿಸಿದರು. ಆ ಬಳಿಕ ಅವರಿಗೆ ತಡೆಯೊಡ್ಡಲು ಆತಿಥೇಯ ಬೌಲರ್‌ಗಳು ವಿಫಲರಾದರು.

ಶತಕದತ್ತ ದಾಪುಗಾಲಿಟ್ಟ ಸೂರ್ಯ, 13ನೇ ಓವರ್‌ನಲ್ಲಿ ಅಲ್ಝರಿ ಜೋಸೆಫ್‌ಗೆ ವಿಕೆಟ್ ಒಪ್ಪಿಸಿದರು. ತಿಲಕ್ ಮತ್ತು ಹಾರ್ದಿಕ್ (ಔಟಾಗದೆ 20) ಗೆಲುವಿನ ವ್ಯವಹಾರ ಪೂರ್ಣಗೊಳಿಸಿದರು.

ಕುಲದೀಪ್ ಕೈಚಳಕ: ಇದಕ್ಕೂ ಮುನ್ನ ಕುಲದೀಪ್ ಯಾದವ್ (28ಕ್ಕೆ 3) ತಮ್ಮ ಕೈಚಳಕದ ಮೂಲಕ ವಿಂಡೀಸ್ ತಂಡ ಬೃಹತ್ ಮೊತ್ತ ಪೇರಿಸದಂತೆ ನೋಡಿಕೊಂಡಿದ್ದರು. ಬ್ರೆಂಡನ್ ಕಿಂಗ್ (42 ರನ್, 42 ಎ.) ಮತ್ತು ರೋವ್ಮನ್ ಪೊವೆಲ್ (ಔಟಾಗದೆ 40, 19 ಎ.) ಆತಿಥೇಯರ ಪರ ಗಮನ ಸೆಳೆದರು.

ಆರಂಭಿಕ ಜೋಡಿ ಕಿಂಗ್ ಮತ್ತು ಕೈಲ್ ಮೇಯರ್ಸ್ (25; 20ಎ) ಮೊದಲ ವಿಕೆಟ್‌ಗೆ 55 ರನ್ ಸೇರಿಸಿದರು. ಎಂಟನೇ ಓವರ್‌ನಲ್ಲಿ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಎಸೆತದಲ್ಲಿ ಕೈಲ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು. 11ನೇ ಓವರ್‌ನಲ್ಲಿ ಚಾರ್ಲ್ಸ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಕುಲದೀಪ್ ಯಾದವ್ ಸ್ಪಿನ್ ಮೋಡಿ ಮೆರೆದರು.

15ನೇ ಓವರ್‌ನಲ್ಲಿ ಕುಲದೀಪ್ ಎಸೆತದಲ್ಲಿ ನಿಕೊಲಸ್ ಪೂರನ್ (20 ರನ್, 12 ಎ.) ಔಟಾದರು. ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಮಾಡಿದ ಚುರುಕಾದ ಸ್ಟಂಪಿಂಗ್‌ಗೆ ಪೂರನ್ ಔಟಾದರು. ಇದರಿಂದಾಗಿ ಭಾರತ ತಂಡ ಸಂಭ್ರಮಿಸಿತು. ಅದೇ ಓವರ್‌ನಲ್ಲಿ ಬ್ರೆಂಡನ್ ಕಿಂಗ್ ಕ್ಯಾಚ್ ಪಡೆದ ಕುಲದೀಪ್ ಕುಣಿದಾಡಿದರು.

ವಿಳಂಬ: 30 ಯಾರ್ಡ್ ವೃತ್ತದ ರೇಖೆಯನ್ನು ಗುರುತಿಸಿ ಮಾರ್ಕಿಂಗ್ ಮಾಡುವುದು ವಿಳಂಬವಾದ ಕಾರಣ ಪಂದ್ಯವು ತುಸು ತಡವಾಗಿ ಆರಂಭವಾಯಿತು.

ಜೈಸ್ವಾಲ್ ಪದಾರ್ಪಣೆ: ಮುಂಬೈನ ಯಶಸ್ವಿ ಜೈಸ್ವಾಲ್ ಈ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. ಅವರು ವೆಸ್ಟ್ ಇಂಡೀಸ್‌ನಲ್ಲಿಯೇ ಈಚೆಗೆ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 159 (ಬ್ರೆಂಡನ್ ಕಿಂಗ್ 42, ಕೈಲ್ ಮೇಯರ್ಸ್ 25, ನಿಕೊಲಸ್ ಪೂರನ್ 20, ರೊವ್ಮನ್ ಪೊವೆಲ್ ಔಟಾಗದೆ 40, ಕುಲದೀಪ್ ಯಾದವ್ 28ಕ್ಕೆ3, ಅಕ್ಷರ್ ಪಟೇಲ್ 24ಕ್ಕೆ1)

ಭಾರತ: 17.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 164 (ಸೂರ್ಯಕುಮಾರ್ ಯಾದವ್ 83, ತಿಲಕ್ ವರ್ಮಾ ಔಟಾಗದೆ 49, ಹಾರ್ದಿಕ್ ಪಾಂಡ್ಯ ಔಟಾಗದೆ 20, ಅಲ್ಝರಿ ಜೋಸೆಫ್ 25ಕ್ಕೆ 2) ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಗೆಲುವು

ವಿಶ್ವಕಪ್ ಟೂರ್ನಿಗೆ ಆಸ್ಟ್ರೇಲಿಯಾ ತಂಡ: ಲಾಬುಷೇನ್‌ಗೆ ಕೊಕ್

ಲಾಬುಷೇನ್

ಸಿಡ್ನಿ (ಪಿಟಿಐ): ಭಾರತದ ಆತಿಥ್ಯದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಆಸ್ಟ್ರೇಲಿಯಾ ತಂಡವನ್ನು ಪ್ಯಾಟ್ ಕಮಿನ್ಸ್ ಮುನ್ನಡೆಸುವರು. ಆದರೆ ಪ್ರಮುಖ ಬ್ಯಾಟರ್ ಮಾರ್ನಸ್ ಲಾಬುಷೇನ್ ಅವರನ್ನು ಕೈಬಿಡಲಾಗಿದೆ.

ಒಟ್ಟು 18 ಆಟಗಾರರ ತಂಡವನ್ನು ಪ್ರಕಟಿಸಲಾಗಿದೆ. ಯುವ ಲೆಗ್‌ಸ್ಪಿನ್ನರ್ ತನ್ವೀರ್ ಸಂಘಾ ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ.

ವಿಶ್ವಕಪ್ ಟೂರ್ನಿಗೂ ಮುನ್ನ ಆಸ್ಟ್ರೇಲಿಯಾ ತಂಡವು ದಕ್ಷಿಣ ಆಫ್ರಿಕಾ ಹಾಗೂ ಭಾರತದ ಎದುರು ಸರಣಿಗಳನ್ನು ಆಡಲಿದೆ.

ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಸೀನ್ ಅಬಾಟ್, ಆ್ಯಷ್ಟನ್ ಆಗರ್, ಅಲೆಕ್ಸ್ ಕ್ಯಾರಿ, ನೇಥನ್ ಎಲಿಸ್, ಕ್ಯಾಮರಾನ್ ಗ್ರೀನ್, ಆ್ಯರನ್ ಹಾರ್ಡೀ, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್ ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ತನ್ವೀರ್ ಸಂಘಾ, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಮಾರ್ಕಸ್ ಸ್ಟೊಯಿನಿಸ್, ಡೇವಿಡ್ ವಾರ್ನರ್, ಆ್ಯಡಂ ಜಂಪಾ.

ನಿವೃತ್ತಿ ನಿರ್ಧಾರ ಹಿಂಪಡೆದ ತಿವಾರಿ

ಕೋಲ್ಕತ್ತ (ಪಿಟಿಐ): ಬಂಗಾಳ ಕ್ರಿಕೆಟ್ ತಂಡದ ನಾಯಕ ಮನೋಜ್ ತಿವಾರಿ ಅವರು ನಿವೃತ್ತಿ ನಿರ್ಧಾರ ವಾಪಸ್ ಪಡೆದಿದ್ದು, ರಣಜಿ ಟ್ರೋಫಿ ಗೆಲ್ಲಲು 'ಇನ್ನೊಂದು ಪ್ರಯತ್ನ' ನಡೆಸುವುದಾಗಿ ಹೇಳಿದ್ದಾರೆ.

ತಿವಾರಿ ಅವರು ಎಲ್ಲ ಮಾದರಿಯ ಕ್ರಿಕೆಟ್‌ಗೆ ಆ.3 ರಂದು ವಿದಾಯ ಹೇಳಿದ್ದರು. ಇದೀಗ ಐದು ದಿನಗಳ ಬಳಿಕ ತಮ್ಮ ಮನಸ್ಸು ಬದಲಿಸಿದ್ದಾರೆ.

'ಕಳೆದ ರಣಜಿ ಋತುವಿನ ಫೈನಲ್‌ನಲ್ಲಿ ಬಂಗಾಳ ತಂಡವನ್ನು ಮುನ್ನಡೆಸಿದ್ದು ನನಗೆ ಹೆಮ್ಮೆಯ ಕ್ಷಣವಾಗಿತ್ತು. ಕ್ರಿಕೆಟ್‌ನಿಂದ ವಿರಮಿಸುವ ಮುನ್ನ ರಣಜಿ ಟ್ರೋಫಿ ಗೆಲ್ಲಲು ಇನ್ನೊಂದು ಪ್ರಯತ್ನ ನಡೆಸುತ್ತೇನೆ' ಎಂದು ಈಡನ್ ಗಾರ್ಡನ್ಸ್‌ನಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಬಂಗಾಳ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ಸ್ನೇಹಶಿಶ್ ಗಂಗೂಲಿ ಅವರು ಸುದ್ದಿಗೋಷ್ಠಿ ಕರೆದಿದ್ದರು.

'ಇನ್ನೊಂದು ವರ್ಷ ಆಡುವ ಉದ್ದೇಶದಿಂದ ನಿವೃತ್ತಿ ನಿರ್ಧಾರದಿಂದ ಹಿಂದೆ ಸರಿದಿದ್ದೇನೆ. ಬಂಗಾಳ ಕ್ರಿಕೆಟ್ ನನಗೆ ಎಲ್ಲವನ್ನೂ ನೀಡಿದೆ. ಆಟಗಾರ ಅಥವಾ ನಾಯಕನಾಗಿ ರಣಜಿ ಗೆಲ್ಲಲು ಕೊನೆಯ ಬಾರಿ ಪ್ರಯತ್ನಿಸುವೆನು' ಎಂದು ಹೇಳಿದರು.

ಬಂಗಾಳ ತಂಡ 1989–90ರ ಬಳಿಕ ರಣಜಿ ಜಯಿಸಿಲ್ಲ. ಕಳೆದ ಎರಡು ಋತುಗಳಲ್ಲಿ ಫೈನಲ್ ಪ್ರವೇಶಿಸಿದ್ದರೂ, ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು.

ನಿವೃತ್ತರಿಗೆ ಕೂಲಿಂಗ್ ಆಫ್ ಸೂಕ್ತವಲ್ಲ: ರಾಬಿನ್ ಉತ್ತಪ್ಪ


ರಾಬಿನ್ ಉತ್ತಪ್ಪ

ಮುಂಬೈ (ಪಿಟಿಐ): ನಿವೃತ್ತ ಕ್ರಿಕೆಟಿಗರಿಗೆ ಕೂಲಿಂಗ್ ಆಫ್ ನಿಯಮ ವಿಧಿಸುವುದರಿಂದ ವಿದೇಶಿ ಲೀಗ್ ಟೂರ್ನಿಗಳಲ್ಲಿ ಆಡುವುದಕ್ಕೆ ಅಡ್ಡಿಯಾಗಲಿದೆ ಎಂದು ಮಾಜಿ ಕ್ರಿಕೆಟಿಗ ರಾಬಿನ್ ಉತ್ತಪ್ಪ ಅಭಿಪ್ರಾಯಪಟ್ಟರು.

ಭಾರತದಲ್ಲಿ ಕ್ರಿಕೆಟಿಗರು ನಿವೃತ್ತಿ ಪಡೆದು ವಿದೇಶಿ ಲೀಗ್‌ಗಳಿಗೆ ಹೋಗುವ ಮುನ್ನ ನಿಗದಿಯ ಅವಧಿಯ ಕೂಲಿಂಗ್ ಆಫ್ ನಿಯಮ ಜಾರಿಗೆ ತರಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಯೋಜಿಸಿದೆ. ಇನ್ನೂ ಅಧಿಕೃತವಾಗಿ ಘೋಷಣೆ ಮಾಡಿಲ್ಲ.

'ಅವಕಾಶ ಸಿಗದಿದ್ದಾಗ ಮಾನವಸಹಜವಾಗಿ ಅಭದ್ರತೆ ಕಾಡುತ್ತದೆ. ನಾವು (ನಿವೃತ್ತರು) ಬಿಸಿಸಿಐ ಕೇಂದ್ರ ಗುತ್ತಿಗೆಯಲ್ಲಿ ಇಲ್ಲ. ಇನ್ನು ಮುಂದೆ ನಮ್ಮ ದೇಶದೊಳಗೆ ನಾವು ಆಡಲು ಸಾಧ್ಯವೂ ಇಲ್ಲ. ಜೊತೆಗೆ ಕೂಲಿಂಗ್ ಆಫ್ ಬಂದರೆ ಬೇರೆ ಕಡೆ ಹೋಗಲೂ ಆಗದು' ಎಂದು ಜಿಯೊ ಸಿನಿಮಾ ಏರ್ಪಡಿಸಿದ್ದ ಸಂವಾದದಲ್ಲಿ ಬೇಸರ ವ್ಯಕ್ತಪಡಿಸಿದರು.

ಕೊಡಗಿನ ರಾಬಿನ್ ಅಂತರರಾಷ್ಟ್ರೀಯ ಕ್ರಿಕೆಟ್ ಮತ್ತು ಐಪಿಎಲ್‌ನಿಂದ ಈಚೆಗೆ ನಿವೃತ್ತಿ ಘೋಷಿಸಿದ್ದಾರೆ.

'ಈ ಸಮಸ್ಯೆಗೆ ಪರಿಹಾರ ಸೂತ್ರಗಳನ್ನು ಕಂಡುಕೊಳ್ಳಲು ಅವಕಾಶವಿದೆ. ಎಲ್ಲರಿಗೂ ಅನುಕೂಲವಾಗುವಂತಹ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ' ಎಂದು ಹೇಳಿದರು.

ಬುಡಾಪೆಸ್ಟ್ ಕೂಟಕ್ಕೆ 28 ಮಂದಿಯ ಭಾರತ ತಂಡ ಪ್ರಕಟ

ವಿಶ್ವ ಅಥ್ಲೆಟಿಕ್ಸ್: ಚೋಪ್ರಾ ನೇತೃತ್ವ

ನೀರಜ್ ಚೋಪ್ರಾ

ನವದೆಹಲಿ (ಪಿಟಿಐ): ಒಲಿಂಪಿಕ್ ಚಾಂಪಿಯನ್ ಜಾವೆಲಿನ್ ಥ್ರೊ ಸ್ಪರ್ಧಿ ನೀರಜ್ ಚೋಪ್ರಾ ಹಂಗೆರಿಯ ಬುಡಾಪೆಸ್ಟ್‌ನಲ್ಲಿ ಆಗಸ್ಟ್ 19ರಂದು ಆರಂಭವಾಗುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ 28 ಸದಸ್ಯರ ಭಾರತ ತಂಡದ ಅಭಿಯಾನದ ನೇತೃತ್ವ ವಹಿಸುವರು.

ಅಚ್ಚರಿಯ ಸಂಗತಿ ಎಂದರೆ ಭಾರತ ಅಥ್ಲೆಟಿಕ್ ಫೆಡರೇಷನ್ ಬದಲು ಕ್ರೀಡಾ ಸಚಿವಾಲಯವೇ ತಂಡವನ್ನು ಪ್ರಕಟಿಸಿದೆ.

ತೊಡೆಯ ನೋವಿನಿಂದಾಗಿ ಷಾಟ್‌ಪಟ್ ಸ್ಪರ್ಧಿ, ಏಷ್ಯನ್ ದಾಖಲೆ ವೀರ ತಜಿಂದರ್ ಪಾಲ್ ತೂರ್ ಅವರು ವಿಶ್ವ ಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿದಿದ್ದಾರೆ.

ಹೈಜಂಪ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ತೇಜಸ್ವಿನ್ ಶಂಕರ್, 800 ಮೀ. ಓಟಗಾರ್ತಿ ಕೆ.ಎಂ.ಚಂದಾ ಮತ್ತು 20 ಕಿಮೀ. ರೇಸ್ ವಾಕರ್ ಪ್ರಿಯಾಂಕಾ ಗೋಸ್ವಾಮಿ ಅವರು ಏಷ್ಯನ್ ಗೇಮ್ಸ್ ಕಡೆ ಗಮನ ಹರಿಸುವ ಉದ್ದೇಶದಿಂದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದಾರೆ. ಏಷ್ಯನ್ ಗೇಮ್ಸ್ ಸೆ. 23ರಿಂದ ಅಕ್ಟೋಬರ್ 8ರವರೆಗೆ ಚೀನಾದ ಹಾಂಗ್ ಝೌದಲ್ಲಿ ನಡೆಯಲಿದೆ.

ಹಾಲಿ ಡೈಮಂಡ್ ಲೀಗ್ ಚಾಂಪಿಯನ್ ಚೋಪ್ರಾ ಅವರು ಈ ಬಾರಿ ಚಿನ್ನ ಗೆಲ್ಲುವ ನಿರೀಕ್ಷೆಯಿದೆ. 2022ರಲ್ಲಿ ಯುಜೀನ್‌ನಲ್ಲಿ ನಡೆದ ಕೂಟದಲ್ಲಿ ಅವರು ಬೆಳ್ಳಿಯ ಪದಕ ಗಳಿಸಿದ್ದರು.

ತಂಡ ಇಂತಿದೆ: ಮಹಿಳೆಯರು: ಜ್ಯೋತಿ ಯೆರ್ರಾಜಿ (110 ಮೀ. ಹರ್ಡಲ್ಸ್), ಪಾರುಲ್ ಚೌಧರಿ (3000 ಮೀ. ಸ್ಟೀಪಲ್ ಚೇಸ್), ಶೈಲಿ ಸಿಂಗ್ (ಲಾಂಗ್‌ಜಂಪ್), ಅನ್ನುರಾಣಿ (ಜಾವೆಲಿನ್ ಥ್ರೊ), ಭಾವ್ನಾ ಜಾಟ್ (20 ಕಿ.ಮೀ. ರೇಸ್ ವಾಕ್).

ಪುರುಷರು: ಕಿಶನ್ ಕುಮಾರ್ (800 ಮಿ.), ಅಜಯ್ ಕುಮಾರ್ ಸರೋಜ್ (1,500 ಮೀ.), ಸಂತೋಷ್ ಕುಮಾರ್ ತಮಿಳರಸನ್ (400 ಮೀ. ಹರ್ಡಲ್ಸ್), ಅವಿನಾಶ್ ಮುಕುಂದ್ ಸಬ್ಳೆ (3000 ಮೀ.ಸ್ಟೀಪಲ್‌ಚೇಸ್), ಸರ್ವೇಶ್ ಅನಿಲ್ ಕುಶಾರೆ (ಹೈಜಂಪ್), ಜೆಸ್ವಿನ್ ಆಲ್ಡ್ರಿನ್, ಎಂ.ಶ್ರೀಶಂಕರ್ (ಇಬ್ಬರೂ ಲಾಂಗ್‌ಜಂಪ್), ಪ್ರವೀಣ್ ಚಿತ್ರವೇಲ್, ಅಬ್ದುಲ್ಲಾ ಅಬೂಬಕ್ಕರ್, ಎಲ್ದೋಸ್ ಪೌಲ್ (ಮೂವರೂ ಟ್ರಿಪಲ್ ಜಂಪ್), ನೀರಜ್ ಚೋಪ್ರಾ, ಡಿ.ಪಿ. ಮನು, ಕಿಶೋರ್ ಕುಮಾರ್ ಜೇನಾ (ಮೂವರೂ ಜಾವೆಲಿನ್ ಥ್ರೊ), ಆಕಾಶ್ ದೀಪ್ ಸಿಂಗ್, ವಿಕಾಶ್ ಸಿಂಗ್, ಪರಮಜೀತ್ ಸಿಂಗ್ (20 ಕಿ.ಮೀ. ರೇಸ್ ವಾಕ್), ರಾಮ್ ಬಾಬೂ (35 ಕಿ.ಮೀ. ರೇಸ್ ವಾಕ್), ಅಮೋಜ್ ಜಾಕೋಬ್, ಮುಹಮ್ಮದ್ ಅಜ್ಮಲ್, ಮುಹಮ್ಮದ್ ಅನಾಸ್, ರಾಜೇಶ್ ರಮೇಶ್, ಅನಿಲ್ ರಾಜಲಿಂಗಂ, ಮಿಜೊ ಚಾಕೊ ಕುರಿಯನ್ (ಪುರುಷರ 4x400 ಮೀ. ರಿಲೆ).